ಅಧ್ಯಕ್ಷರು.— ತಾವು ಹಿರಿಯ ಸದಸ್ಯರಿದ್ದೀರಿ. ಇದರ ಮೇಲೆ ಚರ್ಚೆಗೆ ಅವಕಾಶ ಇಲ್ಲ ಎಂಬುದು ತಮಗೂ ಸಹ ಗೊತ್ತಿದೆ. ಈಗ ತಾವು ಏನೇ ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಆದ್ದರಿಂದ ದಯಮಾಡಿ ತಾವು ಕುಳಿತುಕೊಳ್ಳಿ.

೧೨) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ನೌಕರರು ತಮ್ಮ ಬೇಡಿಕೆಗಾಗಿ ಮುಷ್ಕರ ಹೂಡಿರುವುದು

SRI T. S. MANI.—Sir, K.U.W.S. & B.B. employees Association has given a strike notice to the Board and to the H.U.D. Department to go on indefinite strike from 23-6-1988 and also to call for Water Bundh. Thousands of K.U.W.S. & B.B. employees will come over to Bangalore on 15-6-1988 to press their demands.

What is the action initiated by the Government to resolve the issue?

SRI A. LAKSHMISAGAR.— The demand notice of the employees of the K.U.W.S & B.B. union has been received, and the Chairman of the K.U.W S & B.B. has called a general meeting of the M.D. and representatives of the employees Association on 21-6-1988 in the chambers of the Chairman to discuss the employees' demands and resolve the issue suitably.

ವಿತ್ತೀಯ ಕಾರ್ಯಕಲಾಪಗಳು

೧೯೮೮–೮೯ನೇ ಸಾಲಿಗೆ ಸಂಬಂಧಿಸಿದ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ

ಅಧ್ಯಕ್ಷರು.— ಈಗ ಅನುದಾನ ಬೇಡಿಕೆಗಳ ಮೇಲೆ ಚರ್ಚೆ ಮುಂದುವರೆಯುತ್ತದೆ. ಈ ಬೇಡಿಕೆಗಳ ಮೇಲೆ ಮಾತನಾಡುವವರು ಇನ್ನೂ ೨೩ ಜನಸದಸ್ಯರಿದ್ದಾರೆ. ಇವರಲ್ಲಿ ಕೆಲವರು ಗೈರುಹಾಜರಾಗಿದ್ದರೂ ಸಹ ಎಲ್ಲರೂ ಮಾತನಾಡಲು ೨ ಗಂಟೆಗಳ ಕಾಲವಾದರೂ ಬೇಕಾಗುತ್ತದೆ. ಆದ್ದರಿಂದ ಎಲ್ಲರೂ ಹತ್ತು ನಿಮಿಷಗಳ ಕಾಲ ಮಾತನಾಡಬೇಕೆಂದು ಕೇಳಿಕೊಳ್ಳುತ್ತೇನೆ.

> "The speaker may in cases not specifically provided for in the rules and having regard to the state of business before the House and the nature of the motion prescribed time limit on the speeches of the motion."

ಆದ್ದರಿಂದ ಹತ್ತು ನಿಮಿಷಗಳಿಗಿಂತ ಹೆಚ್ಚು ಕಾಲ ಯಾರೂ ಮಾತನಾಡಬಾರದು. ಈಗ ಮಾನ್ಯ ಇದಿನಬ್ಬನವರು ಚರ್ಚೆ ಪ್ರಾರಂಭ ಮಾಡಬಹುದು.

† ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಅಧ್ಯಕ್ಷರೇ. ಈ ದಿವಸ ಸಾರಿಗೆ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ಬೇಡಿಕೆಗಳು ಸದನದ ಮುಂದಿವೆ. ನಾನು ಸಾರಿಗೆ ಇಲಾಖೆ ಬೇಡಿಕೆಗಳ ಮೇಲೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ಈಗ ಸಭೆಯ ಮುಂದೆ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.

ಮಂಡಿಸಿರುವ ಎಲ್ಲ ಬೇಡಿಕೆಗಳನ್ನು ವಿರೋಧಿಸಿ ನಾಲ್ಕು ಮಾತುಗಳನ್ನು ಹೇಳುತ್ತೇನೆ. ಕೆಂಪು ಬಣ್ಣ ಎಂದರೆ ಎಲ್ಲರಿಗೂ ಭಯ. ಕೆಂಪು ಬಣ್ಣ ಎಂದರೆ ಅಪಾಯ ಎಂದು ಎಲ್ಲರೂ ಹೇಳುತ್ತಾರೆ. ಕೆಂಪು ಬಣ್ಣ ಎಂದರೆ ಎಲ್ಲರೂ ಸ್ವಲ್ಪ ಹೆದರಿಕೊಳ್ಳುತ್ತಾರೆ. ಕೆಂಪು ವಸ್ತ್ರವನ್ನು ಹಿಡಿದರೆ ಗೂಳಿ ಸಹ ಚೆಲ್ಲಾಪಿಲ್ಲಿಯಾಗಿ ಓಡುತ್ತದೆ.

ಶ್ರೀ ಕೆ. ಮುನಿಯಪ್ಪ.—ಅಷ್ಟೇ ಅಲ್ಲ, ಹೆದರಿಕೊಂಡವರಿಗೆ ಕೆಂಪು ಬಣ್ಣದಿಂದ ದೃಷ್ಟಿ ತೆಗೆಯುತ್ತಾರೆ.

ಶ್ರೀ ಬಿ. ಎಂ. ಇದಿನಬ್ಬ.—ನಾನು ಈ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಕೆಲವು ರಚನಾತ್ಮಕವಾದಂಥ ಸಲಹೆಗಳನ್ನು ಮಾತ್ರ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಅನೇಕರು ಬಹಳ ತೀಕ್ಷ್ಣವಾದಂಥ ಭಾಷಣಗಳನ್ನು ನಿನ್ನೆ ಮಾಡಿದ್ದಾರೆ. ನಾನು ಕೆಲವು ಸಲಹೆ ಸೂಚನೆ ಕೊಡುತ್ತೇನೆ. ಅದು ವಿಧಾಯಕವಾದದ್ದು ಮತ್ತು ರಚನಾತ್ಮಕವಾದದು. ಅವನ್ನು ಮಂತ್ರಿಗಳು ಅನುಷ್ಠಾನಕ್ಕೆ ತರುತ್ತಾರೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಆರಂಭದಲ್ಲಿ ನಾನು ಕೆಂಪು ಬಣ್ಣದ ವಿಚಾರ ಏಕೆ ಹೇಳಿದೆ ಅಂದರೆ, ಸರ್ಕಾರದ ಈ ಕೆಂಪು ಬಸ್ಸುಗಳು ಬಂದಾಗ ಕೆಲವರು ಹೆದರಿಕೊಂಡಿದ್ದರು, ಭಯ ಪಡುತ್ತಿದ್ದರು. ಆದರೆ ಈಗ ಆ ಭಯ ಹೋಗಿದೆ. ಈಗ ಆ ಕೆಂಪು ಬಣ್ಣದಲ್ಲಿ ಅರ್ಧಾಂಶ ಬದಲು ಮಾಡಿದ್ದಾರೆ ಈಗಿನ ಮಂತ್ರಿಗಳು. ಲಗ್ಸುರಿ ಬಸ್ಸುಗಳಿಗೆ ಮತ್ತು ಸೆಮಿ ಲಗ್ಸುರಿ ಬಸ್ಸುಗಳಿಗೆ ಆ ಬಣ್ಣವನ್ನು ಬದಲು ಮಾಡಿದ್ದಾರೆ. ಬಹುಶಃ ಈ ಗುಟ್ಟು ಗೊತ್ತಿದ್ದು ಅವರು ಮಾಡಿರಬೇಕು. ಈಗ ಖಾಸಗಿ ಮತ್ತು ಸರ್ಕಾರಿ ಬಸ್‌ನಲ್ಲಿರತಕ್ಕಂಥ ತಾರತಮ್ಯವನ್ನು ಹೋಗಲಾಡಿಸಲಿಕ್ಕೆ ರಾಷ್ಟ್ರೀಕರಣ ಮಾಡಬೇಕು ಎಂದು ನಾವು ಹೇಳಿದೆವು. ಆ ರೀತಿ ಸರ್ಕಾರ ರಾಷ್ಟ್ರೀಕರಣ ಮಾಡುತ್ತಾ ಬಂದಿದೆ. ಇದು ಬಹಳ ಒಳ್ಳೆಯದು. ಏಕೆಂದರೆ ರಾಷ್ಟ್ರೀಕರಣದ ಅರ್ಥವೇ ಜನರಿಗೆ ಅದಷ್ಟು ಉಪಕಾರ ಮಾಡಬೇಕು, ಸೌಲತ್ತು ಜನರಿಗೆ ಮುಟ್ಟಬೇಕು, ಪ್ರಯಾಣಿಕರಿಗೆ ಸಿಗಬೇಕು ಎನ್ನತಕ್ಕಂಥ ದೃಷ್ಟಿಯಲ್ಲಿ ಈ ರಾಷ್ಟ್ರೀಕರಣ ಮಾಡಿದೆ. ಆದರೆ ಇನ್ನೂ ಕೂಡ ಅನೇಕ ಕಡೆ ರಾಷ್ಟ್ರೀಕರಣಕ್ಕೆ ಬಾಕಿ ಇದೆ. ಅದನ್ನು ಅಷ್ಟು ಬೇಗ ಸಚಿವರು ರಾಷ್ಟ್ರೀಕರಣ ಮಾಡಿದರೆ ಅತೀ ಒಳ್ಳೆಯದಾಗುತ್ತದೆ ಮತ್ತು ಅದರಿಂದ ಜನರಿಗೂ, ಪ್ರಯಾಣಿಕರಿಗೂ ಉಪಯೋಗವಾಗುತ್ತದೆ. ಅರ್ಧಂಬರ್ಧ ಮಾಡಿದರೆ ಕೆಲವು ಕಡೆ ರಾಷ್ಟ್ರೀಕರಣ, ಕೆಲವು ಕಡೆ ರಾಷ್ಟ್ರೀಕರಣ ಇಲ್ಲ. ಇವತ್ತು ಸರ್ಕಾರಿ ಬಸ್‌ಗಳಲ್ಲಿ ನಿಗಮದಲ್ಲಿ, ಸಾರಿಗೆಯಲ್ಲಿ ನಷ್ಟಗಳೇ ಆಗುತ್ತಿದೆ ಎಂದು ಕೇಳುತ್ತಾ ಇದ್ದೇವೆ. ಬಹಳ ಹಿಂದಿನಿಂದಲೂ ನಷ್ಟವಾಗುತ್ತಾ ಇದೆ. ಅನೇಕಬಾರಿ ಸದನದಲ್ಲಿ ಏಕೆ ಹೀಗೆ ಆಗುತ್ತಿದೆ ಎಂದು ಅನೇಕ ಸದಸ್ಯರು ಹೇಳಿದ್ದಾರೆ. ಆದರೆ ಈಗಿನ ಸಚಿವರಾದ ಸಿಂಧ್ಯರವರು ಆರಂಭದಲ್ಲಿ ಹೇಳಿದರು, ಬಹಳ ನಷ್ಟ ಇದೆ. ನಷ್ಟವಾಗುತ್ತಾ ಇದೆ, ಇದನ್ನು ನಾನು ಕಡಿಮೆಮಾಡಿಯೇ ಮಾಡುತ್ತೇನೆ, ನಾನು ಲಾಭವನ್ನೇ ಮಾಡುತ್ತೇನೆ, ಲಾಭಗಳಿಸಿ ತೋರಿಸುತ್ತೇನೆ ಎಂದು ಹೇಳಿದ್ದಾರೆ. ಹಿಂದೆ ಆದಂಥ ನಷ್ಟಗಳನ್ನು ನೋಡಿದರೆ ಅವರು ಬರುವುದಕ್ಕೆ ಮೊದಲು ಇದ್ದಂಥ ನಷ್ಟ, ಅವರು ಬಂದ ಮೇಲೆ ಒಂದೆರಡು ವರ್ಷ ಇದ್ದಂಥ ನಷ್ಟ ನೋಡಿದರೆ ಈಗ ಅದಷ್ಟು ಕಡಿಮೆಯಾಗಿದೆ. ಇದು ಸ್ವಲ್ಪ ಸಂತೋಷದ ವಿಚಾರವಿದೆ. ಈಗ ಅವರು ಹೇಳಿದ ಮಾತಿಗಾಗಿ ಅವರು ಸಾಧನೆ ಮಾಡಿದ್ದಾರೆ ಎಂಬುದು ಕಾಣುತ್ತಾ ಇದೆ. ಈಗ ನಾವು ಹೇಳುವಂಥದ್ದು ಏನೆಂದರೆ, ನೀವು ಹೇಳಿದ ಅವಧಿಯೊಳಗೆ ನೀವು ಹೇಳಿದಂಥ ಶಪಥವನ್ನು ಪೂರೈಸಬೇಕು. ಆ ರೀತಿಯಲ್ಲಿ ಲಾಭಮಾಡಿ ತೋರಿಸಿ, ನಾನು ಹೇಳಿದ ಮಾತನ್ನು ಪೂರೈಸಿದೆ ಎಂದು ಹೇಳತಕ್ಕಂಥ ದೊಡ್ಡ ಕೀರ್ತಿಗೆ ಭಾಜನರಾಗಬೇಕು ಎಂದು ಹೇಳುತ್ತಾ ಇದ್ದೇನೆ. ಇನ್ನು ಖಾಸಗಿ ಬಸ್ಸುಗಳು ಬಹಳ ಒಳ್ಳೆಯ ರೀತಿಯಲ್ಲಿ ಲಾಭ ಮಾಡುತ್ತಿವೆ ಎಂದು ಜನ ಹೇಳುತ್ತಾ ಇದ್ದಾರೆ. ಕಾರಣವೇನೆಂದರೆ ಈಗ ನಮ್ಮ ಕಡೆ ಕೂಡ ಖಾಸಗಿ ಸಿಟಿ ಬಸ್ ಇಟ್ಟವರು ೨ ಬಸ್ ಇಟ್ಟಿದ್ದಾರೆ, ೩ ಬಸ್ ಇಟ್ಟವ ೪ ಬಸ್ಸ್ ಇಟ್ಟ, ೪ ಬಸ್ ಇಟ್ಟವ ೬ ಬಸ್ ಇಟ್ಟ, ೮ ಬಸ್ ಇಟ್ಟವನು ೧೬–೨೦ ಬಸ್ ಇಟ್ಟಿದ್ದಾನೆ. ಇದಕ್ಕೆ ಕಾರಣ ಏನು ಎಂದು ನಾವು ಸ್ಥೂಲವಾಗಿ, ವಿವರವಾಗಿ ನೋಡಿದಾಗ ಖಾಸಗಿ ಬಸ್ ಮಾಲಿಕರಿಗೆ ಮತ್ತು ಅದಕ್ಕೆ ಸಂಬಂಧಪಟ್ಟವರಿಗೆ ಕಾಳಜಿ ಇರುತ್ತದೆ ಇದು ನಮ್ಮ ಬಸ್, ಇದನ್ನು ನಾನು ಚೆನ್ನಾಗಿ ನೋಡಬೇಕು, ಇದನ್ನು ಶುಚಿಯಾಗಿಡಬೇಕು, ಯಂತ್ರಗಳನ್ನು ಶುಚಿಯಾಗಿಡಬೇಕು, ಒಳ್ಳೆಯ ರೀತಿಯಲ್ಲಿ ಇಡಬೇಕು, ನಾನು ಲಾಭಗಳಿಸಬೇಕು ಎಂಬ ಅಭಿಪ್ರಾಯ ಇದ್ದುದರಿಂದ ಇವತ್ತು ಖಾಸಗಿಯವರಿಗೆ ಹೆಚ್ಚು ಹೆಚ್ಚು ಬಸ್ಸುಗಳನ್ನು ಇಡಲಿಕ್ಕೆ ಸಾಧ್ಯವಾಗುತ್ತಿದೆ. ಸರ್ಕಾರಿ ಬಸ್‌ನಲ್ಲಿ ಏನಾಗಿದೆಯೆಂದರೆ, ಚಾಲಕರಾಗಲಿ, ಕಂಡಕ್ಟರ್ ಆಗಲಿ ಅಧಿಕಾರಿಗಳಾಗಲಿ, ಇನ್ನಿತರ ಸಿಬ್ಬಂದಿಗಳಾಗಲಿ ನಾವು ಸರ್ಕಾರಿ ನೌಕರರು ಎನ್ನತಕ್ಕಂಥ ಭಾವನೆ ತಲೆಗೆ ಬಂದಿದ್ದ

ರಿಂದ ಹೆಚ್ಚಿನವರು, ಖಾಸಗಿಯವರು ನೋಡಿದ ಮೆಹನತ್ತಿನಲ್ಲಿ. ಒಳ್ಳೆಯ ರೀತಿಯಲ್ಲಿ ಈ ಬಸ್ಸುಗಳನ್ನು ನೋಡುವುದಿಲ್ಲ. ಅದರ ಯಂತ್ರ ಕೆಟ್ಟು ಹೋಗಿದೆಯೋ, ಕಂಡಿಷನ್‌ನಲ್ಲಿದೆಯೋ, ಅದು ಶುಚಿಯಾಗಿದೆಯೋ ಅಥವಾ ತೊಳೆದಿದೆಯೋ ಎಂದು ನೋಡತಕ್ಕಂಥ ಭಾವನೆ ಸರ್ಕಾರಿ ಬಸ್‌ನಲ್ಲಿ ಇಲ್ಲದೇ ಇರುವುದನ್ನು ನಾವು ಕಂಡಿದ್ದೇವೆ. ಆರಂಭದಲ್ಲಿ ನಾವು ಹೇಳಿದೆವು, ಸರ್ಕಾರಿ ಬಸ್‌ಗಳು ಶುಚಿಯಾಗಿಲ್ಲ, ಅದರ ಧೂಳನ್ನು ಉಜ್ಜುವವರು ಇಲ್ಲ, ಅದನ್ನು ತೊಳೆಯುವವರು ಇಲ್ಲ ಎಂದು. ಆ ಬಳಿಕ ಈಗ ನಾವು ನೋಡುತ್ತಾ ಇದ್ದೇವೆ. ಬಸ್ಸಿನಲ್ಲಿ ನಾವು ಹೋಗುತ್ತಾ ಇದ್ದೇವೆ, ಬರುತ್ತಾ ಇದ್ದೇವೆ. ಈಗ ಕೆಲವು ಕಡೆ ಶುಚಿ ಕಾಣುತ್ತಾ ಇದ್ದೇವೆ. ನಾವು ಹೇಳಿದಂಥ ಮಾತನ್ನು ತಿಳಿದುಕೊಂಡು ಆದೇಶ ಕೊಟ್ಟಿರಬೇಕು. ಸಂಪೂರ್ಣವಾಗಿ ಆಗಿದೆ ಎಂದು ಹೇಳುವುದಿಲ್ಲ ಏಕೆಂದರೆ ಡ್ರೈವರ್, ಕಂಡಕ್ಟರ್ ತಲೆಗೆ ನಾವು ಸರ್ಕಾರಿ ನೌಕರರು ಎನ್ನುವಂಥ ಭಾವನೆ ಎಲ್ಲಿಯವರೆಗೆ ಇರುವುದಿಲ್ಲವೋ ಅಲ್ಲಿಯವರೆಗೆ ಅವರ ಮರ್ಜಿಯನ್ನು ಸ್ವಲ್ಪ ತೋರಿಸುತ್ತಾ ಇರುತ್ತಾರೆ. ಆದುದರಿಂದ ಬಸ್ಸುಗಳನ್ನು ಶುಚಿಯಾಗಿ ಇಡಬೇಕು, ಒಳ್ಳೆಯ ರೀತಿಯಲ್ಲಿ ತೊಳೆದು ಇಡಬೇಕು. ಪ್ರಯಾಣಿಕರಿಗೆ. ಚಿಂತೆಯಿಲ್ಲ, ಸರ್ಕಾರದವರು ಒಳ್ಳೆಯ ಬಸ್ಸುಗಳನ್ನು ಇಟ್ಟಿದ್ದಾರೆ ಬಹಳ ಒಳ್ಳೆಯ ಲಗ್ಸುರಿ ಬಸ್ಸುಗಳನ್ನು ಇಟ್ಟಿದ್ದಾರೆ ಎನ್ನತಕ್ಕಂಥ ಭಾವನೆ ಬರಬೇಕು. ಇಲ್ಲದೇ ಹೋದರೆ ಇಷ್ಟು ಲಕ್ಷ ರೂಪಾಯಿ ಕೊಟ್ಟು ಪಡೆದ ಈ ಬಸ್‌ಗಳನ್ನು ಈರೀತಿ ಏಕೆ ಶುಚಿ ಮಾಡದೇ ಇಟ್ಟಿದ್ದಾರೆ ಎಂದು ನಮ್ಮ ಮನಸ್ಸಿಗೆ ಬರುತ್ತದೆ. ಈಗ ಬಸ್ಸುಗಳನ್ನು ಒಳ್ಳೆಯ ರೀತಿಯಲ್ಲಿ ಇಟ್ಟು, ಕಂಡೀಷನ್‌ನಲ್ಲಿಟ್ಟು ಸಮಯಕ್ಕೆ ಸರಿಯಾಗಿ ಈಗ ಬಿಡುತ್ತಾ ಇದ್ದೀರಿ. ನಷ್ಟವಾಗದ ಹಾಗೆ ಲಾಭವಾಗುವ ಹಾಗೆ ನೌಕರರಿಗೆ ಕಂಡಕ್ಟರ್‌ಗಳಿಗೆ ಚಾಲಕರಿಗೆ ಮನಸ್ಸು ಬರುವ ಹಾಗೆ ಪ್ರಯತ್ನ ಮಾಡಬೇಕು.

ಅಧ್ಯಕ್ಷರು. — ೧೧ ನಿಮಿಷ ಆಯಿತು.

ಶ್ರೀ ಬಿ. ಎಂ. ಇದಿನಬ್ಬ.— ಮಂಗಳೂರಿನಲ್ಲಿ ೫-೬ನೇ ತಾರೀಖಿನಲ್ಲಿ ೨೪ ಗಂಟೆಯೊಳಗೆ ಅದಕ್ಷತೆಯ ಚಾಲನೆಯಿಂದ ಓವರ್‌ಲೋಡಿನಿಂದ ಅಮಲು ಸೇವನೆಯಿಂದ ಅಪಘಾತಗಳು ನಡೆದಿವೆ. ಇದನ್ನು ತಪ್ಪಿಸುವುದಕ್ಕೆ ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು. ಒಳ್ಳೆಯ ಚಾಲಕರಿಗೆ ಕಂಡಕ್ಟರುಗಳಿಗೆ ಬಹುಮಾನವನ್ನು ಕೊಡತಕ್ಕ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಕಟ್ಟಡಗಳ ನಿರ್ಮಾಣದಿಂದ ರಸ್ತೆಗಳಲ್ಲಿ ಬಿದ್ದಿರುವಂತಹ ಹೊಂಡಗಳಿಂದ ಟೇಲಿಫೋನ್ ಇಲಾಖೆಯವರು ತೋಡಿರತಕ್ಕ ಗುಂಡಿಗಳಿಂದ ಇವುಗಳ ದುರಸ್ತಿಯಾಗದೆ ದಿನನಿತ್ಯ ಅಪಘಾತಗಳು ನಡೆಯುತ್ತಿವೆ. ಎಲ್ಲಕ್ಕಿಂತ ಮುಖ್ಯವಾಗಿ ಬಸ್ಸುಗಳಲ್ಲಿ ಧೂಮಪಾನವನ್ನು ಕಡ್ಡಾಯವಾಗಿ ನಿಲ್ಲಿಸಬೇಕು. ಇದು ಬಹಳ ಅಪಾಯಕಾರಿ. ನಾನು ಬಹಳ ವಿಷಯಗಳನ್ನು ಬರೆದುಕೊಂಡು ಬಂದಿದ್ದೆ. ವೇಳೆಯ ಅಭಾವದಿಂದ ಅವೆಲ್ಲವನ್ನು ಇಲ್ಲಿ ಹೇಳಲಿಕ್ಕೆ ಆಗಲಿಲ್ಲ. ಆರು ಚರಣ ಇರತಕ್ಕ ಒಂದು ಪದ್ಯವನ್ನು ಓದಿ ನನ್ನ ಮಾತನ್ನು ಮುಗಿಸುತ್ತೇನೆ,

ರಸ್ತೆ ರಸ್ತೆಗಳಲ್ಲಿ ಕೆಂಪು ಬಸ್ಸುಗಳ ಓಡಾಟ
ಅಮಲು ಸೇವನೆಯ ಚಾಲಕನ ಕೀಕಲಾಟ
ಓವರ್ ಲೋಡ್ ಓವರ್‌ಟೇಕಿನ ಮೇಲಾಟ
ಅತಿ ವೇಗದ ಪೈಪೋಟಿಯ ಜಂಗ್ಷಾಟ
ಪ್ರಯಾಣಿಕರ ಭಯಭೀತಿಯ ನರಳಾಟ
ಭಯಭೀತಿ ಅಪಘಾತಗಳ ಈ ಪಂದ್ಯ
ಖಂಡಿತ ನಿಲ್ಲಿಸಬೇಕು ಸಚಿವರಾದ ಶ್ರೀ ಸಿಂಧ್ಯ.

SRI J. A. FERNANDES (Nominated) —Mr. Speaker. Sir, I am happy about the overall performance of KSRTC as well as Motor Vehicles Department and I mnst support the demand for grants of these two departments. Whi e with the new dyuamism that has been injected into the KSRTC and the Transport Division we have opened up our forontiers beyond the boundaries of Karnataka State and have

provided a tremendous service to the neighbouring States as well, but in the process we seem to have forgotten the importance of Bangalore City.

I have already mentioned on previous occasions and I would like to repeat that the concept of federalcity should be taken up very seriously as Bangalore is no longer just the capital of Karnataka State but a metropolitan city in every sense of the word, and to develop this and make it a cosmopolitan city it is necessary to have both State as well as Central funding.

The Centre has tremendous stake in Bangalore City because of its strategic location on the one hand as you know Sri Lanka operations take off from Bangalore, and on the other we have Government of India Public and Defence undertakings here like HAL, BEL, ITI, BEML etc. So it is a very important city both from its sensitive point as far as defence is concerned as well as because of its cosmopolitan character. Yet the transport system needs much to be desired (not only in the State but also outside) with particular reference to Bangalore and the main reason could be attributed to the lack of proper road net work The infrastructure for a good transport system network are flyovers, underbridges, proper linkages not only in the city but from the city to the various areas, ring roads, by-passes and so on. Unless we have these facilities the the transport system will be considerably restricted in its operations. We must ask the Centre to help us to develop the maximum number of national highways on the one hand and to improve and contribute our own abilities and finances to develop State Highways on the otherwise how could we possibly reach villages ?

Today, we have the State transport buses, goods vehicles etc. running on village roads, pulverising them because those roads are not meant for this type of traffic. If one goes around one can see the condition of the roads. Therefore, it is necessary for us to take up this matter strongly with the centre if we have to ensure that concommittent facilities like flyovers, ring roads etc. are centrally funded so that Bangalore does not lag behind the other metropolitan citiesof this country. No metropolitan city can develop unless we have proper road infrastructure.

The Railways have to play a very important part in this perticular development activity because no possible road network or transport system can be complete unless we have co-operation from the Railways. Consider what Bombay would be if 100 years ago the Railways had not stepped in with the commuter system that they have. Bombay without Railways would be worse than Bangalore. That is a linear city whereas we have certain built-in advantage but

without adequate facilities of the Railways we will be at a grea disadvantage. We don't have the city suburban services so that people can come to the city, attend to their business and get back to their places of residence daily. Madras has this facility. Calcutta has now been given this facility. But Bangalore has been neglected and perhaps our Hon'ble Minister will be kind enough to take this matter also up. We have brough this matter to the attention of the House earlier but nothing has been done so far.

A quick look at the KSRTC operations makes us think whether it is necessary for them to pay motor vehicle tax at 17 per cent of their revenue collections. It is very unfair because the current road tax is Rs. 130 per seat per bus per quarter and if we translate this into percentage it should not be more than 10 to 12 per cent. Why do we penalise KSRTC beyond their capacity ? They are already in trouble when compared with the malpractices of private operators. If the contribution that they make to the motor vehicle department is reduced to the extent of the fair tax limit. I think KSRTC will make a profit.

There must also be a different type of fare structure between mofussil operations and city operations. Nowhere in the world is it possible or has it been possible so far for, city services to be a profitable undertaking. Instead there has been a system whereby City services are subsidised by the Government and mofussil service are taxed. Here, the City services are also taxed to the extent of 17 per cent of their revenue which contributes to their losses of about 9 crores for the Bangalore Transport Services alone, and the mofussil services are probably making a profit of 3 to 4 crores. We only have the KSRTC report of last year but if the city services were taken out of this heavy tax burden then the mofussil services I am sure would have given the Govermont at leaust 3 to 4 crores profit.

Regarding inter-state routes as I alraady said eerlier I should congratulate the Hon'ble Minister for Transport for taking the KSRTC services beyond our frontiers and beyond the borders of Karnataka and rendering service to neighbonring States but the route system is not being properly followed,

Our neighbouring States are literally taking us for a ride on the basis of that We operate on mileage basis rather than on route basis. The result is instead of having a bus-for-bus parity we have a mile for mile basis, The bulk of transport operation in the South converged into Bangalore from neghbouring States whereas we operate mainly from Bangalore and we don't have any mileage equality or parity with the neighbouring State transport

system. We are losing and we have been losing revenue eversince the Inter-state road transport agreement was reached. My appeal therefcre will be to re-bash this Inter State agreem7t and bring ourseolves on par with the other States.

We are losing revenue and we have been losing revenue eversince the interstate agreement was made. Therefore, my appeal to the Hon'ble Minister for Transport through this House is to rebash this interstate agreement and bring ourselves on per with other States so far as Bus for Bus operation is concerned, because there is no reciprocity from the different neighbouring States particularly Tamil Nadu in this regard

I would like to make a point on the rural sector. How can a villager market his produce unoless he has a reasonable made of transportation, on the one hand, and the roads on which to operate on the other. He cannot possibly bring his produce to the market place or to the city without adiquate infrastructure in the villages. Therefore lack of roads and consequent inadequacy of the road transportation system will directly affect our rural economy. I think our Hon'ble Chief Minister should take up this aspect with National Development Council and the Hon'ble Transport Minister at the Regional level. The Next Five Year plan should also contain a separate section called Rural Transportation and Rural Road Development. Unless the villages are connected through adequate road network, our resources will not improve. Today, most of our finances are connected with core-sectors like Food, Housing. Power etc., But road development which can really help these sector is neglected.

MR SPEAKER.— Mr, Fernandez, please conclude.

SRI J.A. FERNANDEZ.— Just two more minutes please. We are celebrating this 'Road Safety Week' at the moment, which is currently going on This should not be just a ritual; we must involve more of the enforcement agencies P W D etc. in this Road Safety Week. Like the Police and Halth departments, what about Insurance, for accident Victims like Crop Insurance, for example can we not have Passengers' Insurance?

Another point that comes to my mind when accidents are spoken about and which are on the increase particularly in Bangalore City is the lack of medical facilities to the accident victims, I think the Nursing Homes Lust compulsarily assist road accident Cases.

MR. SPEAKER.— Mr Fernandez, please conclude, You have already taken ten minutes.

SRI J.A. FFRNANDEZ.— The last point I would like to make is that it must be built into the system that under no circumstynces should licenges be given to the Nursing Homes or Hospitals, if they do not accept the accident victims. The Legal and police procedure must be simplified to ensure thot there is no harrassment of the doctors who render medical assistance to accident vectims minimising threats to life and limbs suitadle Legislation must be introduced in this behalf urgently.

MR, SPEAKER.— Please resume your seat, I will call the next name.

SRI J. A. FERNANDEZ — Sir, we also have this Loka Adalat It is a very good system, to effect compensatory payments to victims of road accidents. But it is a long process. Do we want the relatives of the accident victims to look after them in the hospitals, or Do we want them to run about, behind lawyers and the courts to get compensation which is due to the poor accident victims? We must look into this aspect also and let this State be a pioneer in the introduction of a Legislation which will protect the accident victims. On the Recruitment Policy of the K.S.R.T.C....

MR. SPEAKER.— No, it will not be recorded. Please resume your seat, I have to call the next Member. I call Sri G.M. Kanade to speak.

SRI. J. A. FERNANDEZ.— Thank you, Mr. Speaker.

† ಶ್ರೀ ಗೋಪಾಲ ಮುಕುಂದ ಕಾನಡೆ (ಶಿರಸಿ).—ಸನ್ಮಾನ್ಯ ಅಧ್ಯಕ್ಷರೇ, ರಸ್ತೆ ಸಾರಿಗೆ ಬಸ್ ಕಲರನ್ನು ಚೇಂಜ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ? ಅದರೊಳಗೆ ಅಪಘಾತಗಳಾಗುವುದು ಜಾಸ್ತಿ ಆದ್ದರಿಂದ ಜನರು ಗಾಬರಿಗೊಂಡು ಹೆಚ್ಚು ಕಡಿಮೆ ಕೆಂಪುಬಸ್ ನೋಡಿದರೆ ರಸ್ತೆಗೆ ಬರುವುದಿಲ್ಲ. ಆದ್ದರಿಂದ ಬಸ್ಸಿನ ಕಲರನ್ನು ಚೇಂಜ್ ಮಾಡುತ್ತೀರಾ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು. ಮತ್ತೊಂದು ವಿಚಾರವೆಂದರೆ ಬಸ್‌ನಲ್ಲಿ ಕೆಲವು ಮಂದಿ ಕಂಡಕ್ಟರುಗಳನ್ನು ಡಿಸ್‌ಮಿಸ್ ಮಾಡಿರುತ್ತಾರೆ, ಕೆಲವು ಮಂದಿಯನ್ನು ಸಸ್ಪೆಂಡ್ ಮಾಡಿರುತ್ತಾರೆ. ಯಾರು ಯಾರು ಎಷ್ಟು ಟಿಕೆಟ್ ಅವ್ಯವಹಾರದಲ್ಲಿ ಸಸ್‌ಪೆಂಡ್ ಆಗಿರುತ್ತಾರೆ? ಅವರು ಎಷ್ಟುಸಲ ಸಸ್‌ಪೆಂಡ್ ಆದನಂತರ ಡಿಸ್‌ಮಿಸ್ ಮಾಡುತ್ತಾರೆ? ಎಷ್ಟು ಮಂದಿ ಅಂಥವರಲ್ಲಿ ಡಿಸ್‌ಮಿಸ್ ಮಾಡಿದ್ದೀರಿ? ಕೋರ್ಟಿಗೆ ಹೋದನಂತರ ಡಿಸ್‌ಮಿಸ್ ಮಾಡಿರುವುದು ತಪ್ಪು ಎಂದು ಹೇಳಿದಾಗ ಸರ್ಕಾರದವರು ಪುನಃ ಅವರನ್ನು ವಾಪಸ್ ತೆಗೆದುಕೊಂಡ ಮೇಲೆ ಅವರಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ? ಎಷ್ಟು ಮಂದಿಗೆ ರಕ್ಷಣೆಯನ್ನು ಕೊಟ್ಟಿದ್ದೀರಿ? ಶಿರಸಿ ರಸ್ತೆ ಸಾರಿಗೆ ಆಫೀಸಿಗೆ ಬೆಂಕಿಬಿದ್ದು ಕಾಗದಪತ್ರಗಳು ಸುಟ್ಟಿವೆ, ಅಲ್ಲಿ ನಾವು ಏನು ಅಲಿಗೇಷನ್ ಮಾಡಿದ್ದೆವೋ. ಏನು ಅವ್ಯವಹಾರ ಆಗಿದೆ ಎಂದು ದೂರು ಕೊಟ್ಟಿದ್ದೆವೋ ಅದೇ ಕಾಗದ ಪತ್ರಗಳಿಗೆ ಬೆಂಕಿಬಿದ್ದು ಸುಟ್ಟುಹೋಗಿದೆ. ಅದರೊಳಗೆ ಯಾರನ್ನು ಅರೆಸ್ಟ್ ಮಾಡಿದ್ದೀರಿ? ಎಷ್ಟು ಮಂದಿಯನ್ನು ಹಿಡಿದಿದ್ದೀರಿ? ಕಾಗದಪತ್ರಗಳು ಇವೆಯೋ ಇಲ್ಲವೇ? ಕೆಲವು ಸಂದರ್ಭಗಳಲ್ಲಿ ಕಂಡಕ್ಟರ್ ಒಬ್ಬ ಸಿಕ್ಕಿದ ಎಂದರೆ ಪನಿಷ್‌ಮೆಂಟ್ ಕೊಡುತ್ತಾರೆ. ಕೋರ್ಟಿನಲ್ಲಿ ಕೇಸ್ ಹಾಕಿದರೆ, ಆ ಅಧಿಕಾರಿ ಕೋರ್ಟಿಗೆ ಹೋಗುವುದೇ ಇಲ್ಲ. ಈ ರೀತಿ ತೊಂದರೆಯಾಗುತ್ತಿದೆ, ಇದು ಮಾನ್ಯ ಸಿಂಧ್ಯರವರಿಗೆ ಗೊತ್ತಿಗುವುದಿಲ್ಲ. ಕೆಲವು ಬಸ್‌ಗಳಲ್ಲಿ ಟ್ರಾಫಿಕ್ ಕಂಟ್ರೋಲರ್ ಕೈಯಲ್ಲಿ ಟಿಕೇಟ್‌ಬುಕ್ ಇರುತ್ತದೆ. ನೂರಾರು ಜನ ವಸ್ತುಗಳನ್ನು ಸಾಗಾಣಿಕೆ ಮಾಡುತ್ತಾರೆ, ಸಾಗಾಣಿಕೆ ಮಾಡಿದ್ದಕ್ಕೆ ಪ್ರಯಾಣಿಕರು ದುಡ್ಡನ್ನು ಕೊಟ್ಟಿರುತ್ತಾರೆ. ಆದರೆ ಅದಕ್ಕೆ ದಾಖಲೆ ಇರುವುದಿಲ್ಲ ಅಂಥ ಸಂದರ್ಭದಲ್ಲಿ ದಂಡ ಎಷ್ಟು ಹಾಕುತ್ತೀರಿ?

ಸ್‌ನಲ್ಲಿ ಟಿಕೆಟ್ ಇಲ್ಲದೆ ಪ್ರಯಾಣ ಮಾಡುವವರಿಗೆ ದಂಡ ಹಾಕಿದ್ದರಿಂದ ಸರ್ಕಾರಕ್ಕೆ ಎಷ್ಟು ಲಾಭ ಬಂದಿದೆ? ಟಿಕೆಟ್ಟಿಲ್ಲದೆ ಪ್ರಯಾಣ ಮಾಡಿರುವವರನ್ನು ಎಷ್ಟು ಬಿಟ್ಟಿದ್ದಾರೆ ಇದರ ಬಗ್ಗೆ ಮಾನ್ಯ ಸಚಿವರು ವಿವರಣೆಯನ್ನು ಕೊಡಬೇಕು? ಈ ವರ್ಷ ಎಷ್ಟು ಬಸ್‌ಗಳನ್ನು ಖರೀದಿ ಮಾಡಿರುತ್ತಾರೆ? ಎಷ್ಟು ದುಡ್ಡಾಗಿದೆ ಹೋದವರ್ಷ ಎಷ್ಟು ಬಸ್‌ಗಳನ್ನು ಖರೀದಿ ಮಾಡಿದ್ದಾರೆ? ಅದಕ್ಕೆ ಎಷ್ಟು ದುಡ್ಡಾಗಿದೆ? ಸರ್ಕಾರಕ್ಕೆ ಇದರಿಂದ ಎಷ್ಟು ಲಾಭ ಬಂದಿದೆ? ಉತ್ತರ ಕನ್ನಡ ಜಿಲ್ಲೆಯಿಂದ ಎಷ್ಟು ಲಾಭ ಬರುತ್ತದೆ? ಇಷ್ಟಕ್ಕೆ ಮಾನ್ಯ ಸಚಿವರಿಂದ ಉತ್ತರ ಸಿಕ್ಕಿದರೆ ಸಾಕು.

ಅಧ್ಯಕ್ಷರು.—ಆಯಿತು. ತುಂಬ ವಂದನೆಗಳು ಮಾನ್ಯ ಸದಸ್ಯರು ಮಂತ್ರಿನಂತೆ ಮಾತನಾಡಿದ್ದಾರೆ.

†ಶ್ರೀ ಬಿ.ವಿ. ತುಂಗಳ್ (ಬೀಳಗಿ).—ಸನ್ಮಾನ್ಯ ಅಧ್ಯಕ್ಷರೇ, ಸಾರಿಗೆ ಇಲಾಖೆಯ ಮೇಲೆ ನಡೆದಂಥ ಚರ್ಚೆಯಲ್ಲಿ ಭಾಗವಹಿಸುತ್ತಾ ಈ ಬೇಡಿಕೆಗೆಬೆಂಬಲವನ್ನು ಕೊಡುತ್ತೇನೆ. ಇಡೀ ಭಾರತದಲ್ಲಿ ಇದು ಒಂದು ಸರ್ಕಾರಿ ಸ್ವಾಮ್ಯದ ಸಂಸ್ಥೆ. ಕರ್ನಾಟಕ ರಾಜ್ಯದ ರಸ್ತೆ ಸಾರಿಗೆ ಸಂಸ್ಥೆ ಸ್ವಾಮ್ಯದ ಒಂದು ದೊಡ್ಡ ಸಂಘಟನೆ ಮತ್ತು ಒಂದು ದೊಡ್ಡ ಸಂಸ್ಥೆ ಸರ್ಕಾರಿಎಂದು ಹೇಳಬೇಕಾಗಿದೆ. ಹತ್ತಾರು ವರ್ಷಗಳ ಹಿಂದೆ ಕರ್ನಾಟಕ ರಾಜ್ಯದಲ್ಲಿ ರಸ್ತೆ ಸಾರಿಗೆ ಬಸ್ ಎಂದರೆ ಜನ ತಿರಸ್ಕಾರ ಮಾಡುವಂಥ ಕಾಲ ಇತ್ತು. ಈಗ ತಿರಸ್ಕಾರ ಮಾಡುವಂಥ ಕಾಲ ಇಲ್ಲ, ಏತಕ್ಕೆಂದರೆ ಈಗ ನಾನು ರಾಜಧಾನಿಯಿಂದ ಏಳುನೂರು ಕಿಲೋ ಮೀಟರ್ ದೂರದ ಹಳ್ಳಿಯಲ್ಲಿಗತಕ್ಕಂಥ ಮನುಷ್ಯ ನಾನು ನನ್ನ ಹಳ್ಳಿಯಿಂದ ಈವತ್ತು ಸಾಯಂಕಾಲ ಹೊರಟರೆ ಬೆಳಗಾಗುವುದರೊಳಗಾಗಿ ಒಬ್ಬ ತಲುಪುವಂಥ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆಸಂಸ್ಥೆ ಮಾಡಿರುವುದು ನಿಜಕ್ಕೂ ಒಂದು ಕ್ರಾಂತಿಕಾರಕವ್ಯವಸ್ಥೆ ಎಂದು ನಾವು ತಿಳಿದುಕೊಂಡಿದ್ದೇವೆ. ರಾಜ್ಯದ ಮೂಲೆ ಮೂಲೆಗಳಿಂದ ಕಳೆದ ೪-೫ ವರ್ಷಗಳಿಂದ ಈ ರಾಜಧಾನಿಗೆ ಬೆಳಗಾಗುವುದರೊಳಗಾಗಿ ತಲುಪುವಂಥ ವ್ಯವಸ್ಥೆಯನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಮಾಡಿದ್ದಾರೆ. ನಿನ್ನೆ ಆರಂಭ ಭಾಷಣ ಮಾಡಿದಂಥ ಸನ್ಮಾನ್ಯ ಆರ್. ಎನ್. ನಾಯಕರವರು ಬಹಳಷ್ಟು ಒಳ್ಳೆಯ ಅಂಶಗಳನ್ನು ಹೇಳುತ್ತಾರೆಂದು ನಿರೀಕ್ಷೆ ಮಾಡಿದ್ದೆ. ಅವರ ಭಾಷಣ ಏನಾಯಿತು ಎಂದರೆ ವಿರೋಧಪಕ್ಷದಲ್ಲಿದ್ದು ವಿರೋಧ ಮಾಡುವಂಥ ರೀತಿಯ ಭಾಷಣವಾಗಿತ್ತು. ಒಳ್ಳೆಯ ನ್ಯಾಯವಾದಿಯಾಗಿ ಆ ಕಡೆ ಬಲಿಷ್ಟ ಪಕ್ಷದಲ್ಲಿ ಕುಳಿತು ಚರ್ಚೆಯನ್ನು ಆರಂಭಿಸಿದ ಸದಸ್ಯರು ಬಹಳಷ್ಟು ಉತ್ತಮವಾದ ಸಲಹೆಗಳನ್ನು ಮಾನ್ಯ ಸಾರಿಗೆ ಮಂತ್ರಿಗಳಿಗೆ ಕೊಡುತ್ತಾರೆಂದು ಭಾವಿಸಿದ್ದೆ. ಆದರೆ ಅವರ ಭಾಷಣ ಬಹಳ ನಿರಾಶಾದಾಯಕವಾಯಿತು. ನಮ್ಮ ರಾಜ್ಯದಲ್ಲಿ ಯಾವರೀತಿ ಸರ್ಕಾರಿ ಸ್ವಾಮ್ಯದಲ್ಲಿ ನಡೆಯುವ ಬಹಳ ದೊಡ್ಡ ಸಂಸ್ಥೆ ಎಂದು ಹೇಳಿದರೆ ಒಂದು ಕೇಂದ್ರ ಕಛೇರಿ, ೪ ವಿಭಾಗಗಳು, ೪ ಕಾರ್ಯಾಲಯಗಳು, ೧೩ ಪ್ರಾದೇಶಿಕ ವಿಭಾಗಗಳು, ಎರಡು ಪ್ರಾದೇಶಿಕ ಕಾರ್ಯಾಗಾರಗಳು, ೭೮ ಘಟಕಗಳು, ಸುಮಾರು ೪೫ ಸಾವಿರ ಜನ ಸಿಬ್ಬಂದಿ, ೮ ಸಾವಿರಕ್ಕೂ ಮಿಕ್ಕಿ ವಾಹನಗಳು ಇವತ್ತು ಪಟ್ಟಣ ಪ್ರದೇಶದಲ್ಲಿ ೨೧೪ ನಿಲ್ದಾಣಗಳು ನಗರ ಪ್ರದೇಶದಲ್ಲಿ ೪೩೪ ನಿಲ್ದಾಣಗಳು ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು ೩೮೭ ಶೆಲ್ಟರ್ಸ್ ಇರುತ್ತವೆ. ಪ್ರತಿದಿವಸ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ೪೦ ಲಕ್ಷ ಪ್ರಯಾಣಿಕರು ಪ್ರಯಾಣ ಮಾಡುತ್ತಿದ್ದಾರೆ. ಪ್ರತಿದಿವಸ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಆದಾಯ ಸುಮಾರು ೮೫ ಲಕ್ಷ ರೂಪಾಯಿಗಳು ಎಂದು ತಿಳಿದುಬಂದಿದೆ. ಸುಮಾರು ೩೦೦ ಕೋಟಿ ರೂಪಾಯಿಗಳ ಬಂಡವಾಳದ ಈ ರಸ್ತೆ ಸಾರಿಗೆ ಸಂಸ್ಥೆಯಲ್ಲೂ ತಪ್ಪುಗಳೇ ಇಲ್ಲವೆಂದು, ತಪ್ಪುಗಳಿಂದ ಮುಕ್ತವಾಗಿದೆ ಎಂದು ಹೇಳಲಿಕ್ಕೆ ಆಗುವುದಿಲ್ಲ ಇಂಥ ಒಂದು ಬೃಹತ್ ಸಾರಿಗೆ ಸಂಸ್ಥೆಯನ್ನು ನಡೆಸುವಾಗ ಹೆಚ್ಚಿನ ಒಂದು ಜವಾಬ್ದಾರಿಯನ್ನು ಕೊಡಬೇಕಾಗುತ್ತದೆ.

೧೨-೩೦ ಪಿ. ಎಂ.

ಸಿಂಧ್ಯರವರು ಸಾರಿಗೆ ಸಚಿವರಾದ ಮೇಲೆ ಕಾಯಕಲ್ಪ ಚಿಕಿತ್ಸೆ ಕೊಡುವಲ್ಲಿ ಬಹಳಷ್ಟು ಕೆಲಸ ಮಾಡಿದ್ದಾರೆ. ಇನ್ನೂ ಮಾಡುತ್ತಾರೆಂದು ನಿರೀಕ್ಷೆ ಮಾಡಿದ್ದೇನೆ. ಏಕೆಂದರೆ ಅವತ್ತು ಕೆಎಸ್‌ಆರ್‌ಟಿಸಿ. ಬಸ್‌ಗಳ ಬಗ್ಗೆ ಏನು ಜನರಲ್ಲಿ ಕೆಟ್ಟ ಕಲ್ಪನೆ ಇತ್ತು ಅದು ಇವತ್ತು ಇಲ್ಲ. ಕಳೆದ ೮ ೧೦ ವರ್ಷಗಳಿಂದ ನನಗೆ ರಸ್ತೆ ಸಾರಿಗೆ ಕೆಲಸಗಾರರ ಜೊತೆ ಸಂಬಂಧ ಇದೆ. ನಾನು ಕೆ.ಎಸ್.ಆರ್.ಟಿ.ಸಿ. ವರ್ಕರ್ಸ್ ಫೆಡರೇಷನ್‌ನ (ಬಿಜಾಪುರ ವಿಭಾಗ ಅಧ್ಯಕ್ಷನಾಗಿ ಕಳೆದ ೭ ವರ್ಷಗಳಿಂದ ಕೆಲಸ ಮಾಡಿದ್ದೇನೆ. ಸಾರಿಗೆ ಇಲಾಖೆಯ ಒಳಹೊರಗೂ ಗೊತ್ತಿದೆ. ಕಳೆದ ೧೦ ವರ್ಷದಿಂದ ಸುಮಾರು ೨೫ ಕೋಟಿ ರೂಪಾಯಿ

ನಷ್ಟವನ್ನು ಅನುಭವಿಸುತ್ತಿದ್ದ ಸಾರಿಗೆ ಸಂಸ್ಥೆಯ ನಷ್ಟವನ್ನು ಕರಗಿಸುವುದರಲ್ಲಿ ಸಚಿವರು ಯಶಸ್ವಿಯಾಗಿ ಕೆಲಸ ಮಾಡಿದ್ದಾರೆಂದು ತಿಳಿದುಕೊಂಡಿದ್ದೇನೆ, ಇನ್ನೂ ಮಾಡುತ್ತಾರೆ. ಈಗಾಗಲೇ ಕೆಎಸ್‌ಆರ್‌ಟಿಸಿ. ಲಾಭದಲ್ಲಿರಬೇಕಾಗಿತ್ತು. ಏಕೆ ಇಲ್ಲವೆಂದರೆ, ಜನತಾ ಸರ್ಕಾರ ಬಂದಮೇಲೆ ಶಾಲಾಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಬೇರೆ ಬೇರೆ ರಂಗದ ಜನರಿಗೆ ಸವಲತ್ತು ನೀಡಿರುವುದು ಇದಕ್ಕೆ ಕಾರಣವಾಗಿದೆ. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸೌಲಭ್ಯ ಕೊಡುವುದನ್ನು ನಿಲ್ಲಿಸಿದರೆ ಸಾರಿಗೆ ಸಂಸ್ಥೆ ಲಾಭದಲ್ಲಿ ಹೋಗಬಹುದು. ಅದಕ್ಕೇನು ದೊಡ್ಡ ಚಮತ್ಕಾರ ಮಾಡಬೇಕಾಗಿಲ್ಲ. ಬಡ ವಿದ್ಯಾರ್ಥಿಗಳಿಗೆ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ಲಕ್ಷಾಂತರ ವಿದ್ಯಾರ್ಥಿಗಳಿಗೆ ಓದಲಿಕ್ಕೆ ಅನುಕೂಲವಾಗಲಿ ಎಂದು ಕೊಟ್ಟಿದ್ದರಿಂದ ಸಾರಿಗೆ ಸಂಸ್ಥೆ ಲಾಭ ಗಳಿಸಲಿಕ್ಕೆ ಸಾಧ್ಯವಾಗಿಲ್ಲವೆಂದು ಹೇಳುತ್ತೇನೆ. ಕೇವಲ ಒಂದು ವರ್ಷದಲ್ಲಿ ಸಿಂಧ್ಯರವರಿಂದ ರಾಯಚೂರು ರಸ್ತೆ ಸಾರಿಗೆಯನ್ನು ರಾಷ್ಟ್ರೀಕರಣ ಮಾಡುವುದಕ್ಕಾಗುವುದಿಲ್ಲವೆಂದು ಹಲವಾರು ಜನ ಭವಿಷ್ಯ ಹೇಳುತ್ತಿದ್ದರು. ಅವರು ರಾಷ್ಟ್ರೀಕರಣ ಮಾಡಲಿಕ್ಕೆ ಹಿಂದುಮುಂದು ನೋಡುತ್ತಾರೆಂದು ಹೇಳುತ್ತಿದ್ದರು. ಆ ರೀತಿ ಹೇಳಿದ ೧೫ ದಿನಗಳಲ್ಲಿ ಸಿಂಧ್ಯರವರು ದಿಟ್ಟ ಕ್ರಮ ಕೈಗೊಂಡರು. ಹೈದರಾಬಾದ್ ಕರ್ನಾಟಕವಾದ ರಾಯಚೂರಿನಲ್ಲಿ ರಸ್ತೆ ಸಾರಿಗೆಯನ್ನು ರಾಷ್ಟ್ರೀಕರಣ ಮಾಡಿದ್ದಾರೆ, ಚಿತ್ರದುರ್ಗದಲ್ಲಿ ಮಾಡಿದ್ದಾರೆ. ಇನ್ನೂ ಬಹಳಷ್ಟು ಕೆಲಸ ಈ ದಿಸೆಯಲ್ಲಿ ಆಗಬೇಕಾಗಿದೆ. ಎಷ್ಟೆಷ್ಟು ರಾಷ್ಟ್ರೀಕರಣ ಮಾಡುತ್ತಾರೋ ಅಷ್ಟಷ್ಟು ಸಾರಿಗೆ ಸಂಸ್ಥೆಗೆ ಲಾಭ ಬರುತ್ತದೆ. ಆದ್ದರಿಂದ ರಾಷ್ಟ್ರೀಕರಣದಲ್ಲಿ ದಿಟ್ಟ ಹೆಜ್ಜೆ ಇಡಬೇಕು ಮತ್ತು ಕರ್ನಾಟಕ ರಾಜ್ಯದಲ್ಲೆಲ್ಲ ರಾಷ್ಟ್ರೀಕರಣ ಮಾಡಬೇಕೆಂದು ಹೇಳುತ್ತೇನೆ. ಅದರಿಂದ ಲಕ್ಷಾಂತರ ಮಂದಿ ನಿರುದ್ಯೋಗಿಗಳಿಗೆ ಕೆಲಸ ಒದಗಿಸಲಿಕ್ಕೆ ಸಾಧ್ಯವಿದೆ. ಕೇಂದ್ರ ಸರ್ಕಾರದಿಂದ ಅಥವಾ ಬೇರೆಬೇರೆ ಏಜೆನ್ಸಿ ಮೂಲಕ ಹಣ ತಂದು ಕರ್ನಾಟಕ ರಾಜ್ಯದ ತುಂಬ ರಾಷ್ಟ್ರೀಕರಣ ಮಾಡುವ ದಿಟ್ಟ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ತಾವು ಸೂಚಿಸಿದ ಅವಧಿಯಲ್ಲಿ ಭಾಷಣವನ್ನು ಮುಗಿಸಲಿಕ್ಕೆ ಪ್ರಯತ್ನ ಮಾಡಿ ಕೆಲವು ಸೂಚನೆಗಳನ್ನು ಸರ್ಕಾರದ ಮುಂದಿಡಬಯಸುತ್ತೇನೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಹೆಚ್ಚು ಆದಾಯ ಬರಬೇಕೆಂಬ ದಿಸೆಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಸಾರಿಗೆ ಸಂಸ್ಥೆಯವರು ಹಮ್ಮಿಕೊಂಡಿದ್ದಾರೆ. ಕಳೆದ ಒಂದು ವರ್ಷದಿಂದ ಸಾರಿಗೆ ಸಂಸ್ಥೆಯು ಬಸ್ಸುಗಳಲ್ಲಿ ಪಾರ್ಸಲ್ ವ್ಯವಸ್ಥೆ ಮಾಡಿದ್ದಾರೆ. ಇದನ್ನು ದಕ್ಷ ರೀತಿಯಿಂದ ನಿರ್ವಹಿಸಬೇಕು. ಇದನ್ನು ಹೆಚ್ಚು ಹೆಚ್ಚು ಗ್ರಾಮಾಂತರ ಪ್ರದೇಶಗಳಿಗೆ ವಿಸ್ತರಣೆ ಮಾಡಿ ಸಾರಿಗೆ ಸಂಸ್ಥೆಗೆ ಹೆಚ್ಚು ಆದಾಯ ತರಲಿಕ್ಕೆ ಪ್ರಯತ್ನ ಮಾಡಬೇಕು.

ತಮ್ಮ ವರದಿಯಲ್ಲಿ ಅಂಚೆ ರವಾನೆ ಮೂಲಕ ೪೦ ಲಕ್ಷ ರೂಪಾಯಿ ಬರುತ್ತಿದೆ ಎಂದು ಕಾಣಿಸಿದ್ದೀರಿ. ಈ ವಿಚಾರದಲ್ಲಿ ಹೆಚ್ಚು ಗಮನ ಹರಿಸಿ ಇನ್ನೂ ಅಚ್ಚುಕಟ್ಟಾಗಿ ಮಾಡಿದರೆ ಇದನ್ನು ಇನ್ನೂ ಹೆಚ್ಚು ಮಾಡಬಹುದು. ಹಿಂದೆ ಮಾನ್ಯ ಸಿಂಧ್ಯ ಅವರು ರಸ್ತೆ ಸಾರಿಗೆ ಸಚಿವರಾಗಿದ್ದಾಗ ಬಸ್ ಪ್ರಯಾಣದರವನ್ನು ಏರಿಸಿದರು. ಆಗ ಕರ್ನಾಟಕದ ಜನ ಪ್ರತಿಭಟನೆ ಮಾಡಿದರು. ಆಗ ಮಾನ್ಯ ಮಂತ್ರಿಗಳು ಇದೇ ಸದನದಲ್ಲಿ ಒಂದು ಮಾತನ್ನು ಹೇಳಿದರು: ಬೆಲೆ ಏರಿಕೆ ನಾನಾ ವಿಷಯಗಳಲ್ಲಿ ಆಗಿರುವುದರಿಂದ ದರಗಳನ್ನು ಇಳಿಸುವುದಕ್ಕಾಗುವುದಿಲ್ಲ. ಆದರೆ ಬಹಳ ಕಾಲದಿಂದ ಹಾಗೇ ಇದ್ದಂಥ ಸ್ಟೇಜಿನ ಪುನರ್ ವ್ಯವಸ್ಥೆ ಮಾಡುತ್ತೇನೆ ಎಂದು ಹೇಳಿದ್ದರು. ಆದ್ದರಿಂದ ಈಗ ತ್ವರಿತಗತಿಯಿಂದ ಪುನರ್ ವಿಮರ್ಶೆ ಮಾಡಬೇಕೆಂದು ಸೂಚನೆ ಕೊಡಬಯಸುತ್ತೇನೆ. ಬಸ್ ನಿಲ್ದಾಣಗಳಲ್ಲಿ ಸೈಕಲ್ ಸ್ಟ್ಯಾಂಡ್, ಪುಸ್ತಕದ ಅಂಗಡಿಗಳು ಇರುತ್ತವೆ, ಹಿರೇಕೆರೂರು ಬಸ್ ಸ್ಟ್ಯಾಂಡ್ ಇದೆ. ಅಲ್ಲಿ ಇರತಕ್ಕಂಥ ಪುಸ್ತಕದ ಅಂಗಡಿಯಲ್ಲಿ ಪ್ರತಿಗಾಮಿ ಸಾಹಿತ್ಯದ ಪುಸ್ತಕಗಳನ್ನು ಮಾರಾಟ ಮಾಡುತ್ತಿದ್ದಾರೆ. ಬಸ್ ಸ್ಟ್ಯಾಂಡಿನಲ್ಲಿರುವ ಸೈಕಲ್ ಸ್ಟ್ಯಾಂಡ್ ಮತ್ತು ಪುಸ್ತಕದ ಅಂಗಡಿಗಳನ್ನು ಕಡಿಮೆ ಬಾಡಿಗೆಯ ಮೇಲೆ ನಿರುದ್ಯೋಗಿ ಪದವೀಧರರಿಗೆ ಕೊಡಬೇಕೆಂದು ಸಾರಿಗೆ ಸಚಿವರಿಗೆ ಸೂಚನೆ ಮಾಡುತ್ತೇನೆ. ಬಸ್ ನಿಲ್ದಾಣಗಳಲ್ಲಿ ಕ್ಯಾಂಟೀನ್‌ಗಳು ಮತ್ತು ಲಾಡ್ಜಿಂಗ್‌ಗಳ ಅವ್ಯವಸ್ಥೆ ಇದೆ. ಬಸ್ ಸ್ಟ್ಯಾಂಡ್‌ಗಳಲ್ಲಿರುವಂಥ ಕ್ಯಾಂಟೀನ್‌ಗಳು ಮತ್ತು ಲಾಡ್ಜಿಂಗ್‌ಗಳನ್ನು ಕಾರಂತ್, ಪೈ ಹೆಗಡೆ ಮತ್ತು ಶ್ಯಾನುಭಾಗ್ ಇವರ ಕಪಿಮುಷ್ಟಿಯಿಂದ ಬಿಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹುಬ್ಬಳ್ಳಿಯಲ್ಲಿ ಕೆ.ಎಸ್.ಆರ್.ಟಿ.ಸಿ. ಯವರು ಬಿಲ್ಡಿಂಗ್ ಕಟ್ಟಿದ್ದಾರೆ. ಅಲ್ಲಿರುವಂಥ ಹೆಗಡೆ, ಪೈ ಮತ್ತು ಶ್ಯಾನುಭಾಗರು ಸಿಕ್ಕಾಪಟ್ಟೆ ಹಣ ವಸೂಲಿ ಮಾಡುತ್ತಿದ್ದಾರೆ. ಲಾಡ್ಜಿಂಗ್‌ಗಳಲ್ಲಿ ಸರಿಯಾದ ವ್ಯವಸ್ಥೆ ಇಲ್ಲದಿದ್ದರೂ ಜಾಸ್ತಿ ಹಣ ಸುಲಿಯುತ್ತಿದ್ದಾರೆ. ಇವುಗಳನ್ನು ನಿರುದ್ಯೋಗಿ ಪದವೀಧರರಿಗೆ ನಡೆಸಲು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ನಾನು ಸದಾ ಕಾಲ ಬಸ್ಸಿನಲ್ಲಿ ಓಡಾಡುವ ಮನುಷ್ಯ. ಅಲ್ಲಿ ಆಗಿರುವ ಅನುಭವ ಏನೆಂದರೆ ವಿದ್ಯಾರ್ಥಿಗಳಿಗೆ ಬಸ್‌ಪಾಸ್ ಕೊಟ್ಟ

ಮೇಲೆ ಬಸ್ಸುಗಳಲ್ಲಿ ನೂಕುನುಗ್ಗಲು ಜಾಸ್ತಿಯಾಗಿದೆ. ಅವರು ಬಸ್ಸುಗಳಲ್ಲಿ ವರ್ತನೆ ಮಾಡುವಂಥ ರೀತಿ ಸರಿಯಿಲ್ಲ. ಹೆಣ್ಣುಮಕ್ಕಳಿಗೆ, ವೃದ್ಧರಿಗೆ ಮತ್ತು ರೋಗ ಪೀಡಿತರಿಗೆ ಸ್ಥಳ ಕೊಡುವುದಿಲ್ಲ. ಒಂದು ಬಸ್ಸಿನಲ್ಲಿ ಒಬ್ಬ ವಿದ್ಯಾರ್ಥಿ ದಿನಕ್ಕೆ ೨೦ ಸಾರಿ ಓಡಾಡುತ್ತಾನೆ. ಸಿನಿಮಾಕ್ಕೆ ಮತ್ತೊಂದಕ್ಕೆ ಹೋಗುತ್ತಾನೆ. ಬೇರೆ ರಾಜ್ಯದಲ್ಲಿ ಒಂದು ವ್ಯವಸ್ಥೆ ಇದೆ ಎಂದು ಹೇಳುತ್ತಾರೆ. ಏನೆಂದರೆ ವಿದ್ಯಾರ್ಥಿಗಳಿಗೆ ಕೂಪನ್‌ಗಳನ್ನು ಕೊಡುವುದು. ಕ್ಯಾಂಟೀನ್‌ಗಳಲ್ಲಿ ಊಟಕ್ಕೆ ಯಾವ ರೀತಿ ೬೦ ಟಿಕೆಟ್‌ಗಳ ಪುಸ್ತಕ ಕೊಡುತ್ತಾರೋ ಅದೇ ರೀತಿ ಅವರಿಗೆ ಕೂಪನ್‌ಗಳನ್ನು ಕೊಡುವ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ. ಹಿಂದೆ ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದರು. ದಯವಿಟ್ಟು ಇದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಂಡು ತಮ್ಮ ಅನುಮತಿ ಪಡೆದು ಒಂದೇ ಒಂದು ಮಾತನ್ನು ಹೇಳುತ್ತೇನೆ. ಸರ್ಕಾರಿ ಸ್ವಾಮ್ಯದ ಕಿಂಕೋ ಕಾರ್ಖಾನೆ ಇದೆ. ಅಲ್ಲಿ ಮೊದಲು ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್ ಮಾಡುತ್ತಿದ್ದರು. ಹಿಂದೆ ಮಾನ್ಯ ಮಂತ್ರಿಗಳು ಅದನ್ನು ಕೆ.ಎಸ್.ಆರ್.ಟಿ.ಸಿ.ಗೆ ಸೇರಿಸುತ್ತೇನೆ ಎಂದು ಘೋಷಣೆ ಮಾಡಿದ್ದರು. ಅಲ್ಲಿ ೩೦೦ ಜನ ಕೆಲಸ ಮಾಡುತ್ತಿದ್ದಾರೆ. ಒಂದೇ ಒಂದು ತಿಂಗಳಲ್ಲಿ ೩೦ ಹೊಸ ಬಸ್ಸುಗಳನ್ನು ಅಲ್ಲಿ ಕಟ್ಟಿದ್ದಾರೆ. ಆ ಕಾರ್ಖಾನೆಯಲ್ಲಿ ಕುಶಲಕರ್ಮಿಗಳಿದ್ದರೂ ಹೊರಗಿನಿಂದ ಜನರನ್ನು ತಂದು ಕೆಲಸ ಮಾಡಿಸಿಕೊಳ್ಳುತ್ತಿದ್ದಾರೆ. ಅಲ್ಲಿರತಕ್ಕ ಮ್ಯಾನೇಜಿಂಗ್ ಡೈರೆಕ್ಟರ್ ಅವ್ಯವಹಾರಗಳನ್ನು ಮಾಡುತ್ತಿದ್ದಾರೆ. ಕೆಲಸಗಾರರಿಗೆ ಸಿಗತಕ್ಕ ಸೌಲಭ್ಯ ಸಿಗುತ್ತಿಲ್ಲ. ಆದ್ದರಿಂದ ಕಿಂಕೋ ಕಾರ್ಖಾನೆಯನ್ನು ಅಧಿಕೃತವಾಗಿ ಕೆ.ಎಸ್.ಆರ್.ಟಿ.ಸಿ.ಯಲ್ಲಿ ವಿಲೀನಗೊಳಿಸಿ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಯಾವ ಸೌಕರ್ಯಗಳು ಕೆಲಸಗಾರರಿಗೆ ಸಿಗುತ್ತಿದೆಯೋ ಅದೇ ರೀತಿ ಸೌಕರ್ಯಗಳು ಕಿಂಕೋ ಕೆಲಸಗಾರರಿಗೂ ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳಿ ವರದಿಯಲ್ಲಿ ಬೋರ್ಡ್ ಆಫ್ ಡೈರೆಕ್ಟರ್ಸ್ ಬಗ್ಗೆ ಹೇಳಿದ್ದಾರೆ. ಬೋರ್ಡ್ ಆಫ್ ಡೈರೆಕ್ಟರ್ಸ್ ಸಭೆ ನಡೆದಾಗ ಇಬ್ಬರು ಅಧಿಕಾರೇತರ ಸದಸ್ಯರು ಒಬ್ಬರು ಚಂದ್ರಶೇಖರ್ ಮಾಮನೆ ಎಂಬುವರು, ಇನ್ನೊಬ್ಬರು ಕಮಲಾಕರ್ ಗೋಕರ್ಣ ಎನ್ನುವವರು ಅವರು ಇಡೀ ವರ್ಷ ಮೀಟಿಂಗ್‌ಗೆ ಬರಲಿಲ್ಲ. ಆ ರೀತಿ ಆಸಕ್ತಿ ಇರುವ ಜನರನ್ನು ಹಾಕದೆ ನಮ್ಮಂಥವರನ್ನು ಏತಕ್ಕೆ ನಿರ್ದೇಶಕರಾಗಿ ಹಾಕಬಾರದು ಎಂದು ಕೇಳುತ್ತೇನೆ. ಕಾರ್ಮಿಕರಿಗೂ ಕೂಡ ಅದರಲ್ಲಿ ಅವಕಾಶ ಮಾಡಿಕೊಡಬೇಕೆಂದು ಹೇಳಿ ಕೆ.ಎಸ್.ಆರ್.ಟಿ.ಸಿ.ಗೆ ಕಾಯಕಲ್ಪ ನೀಡುವಂಥ ಶಕ್ತಿ ಸಿಂಧ್ಯ ಅವರಿಗೆ ಇದೆ. ಅದನ್ನು ಮಾಡಬೇಕೆಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಅಧ್ಯಕ್ಷರೆ ಸಮಾಜ ಕಲ್ಯಾಣ ಇಲಾಖೆ, ಮಕ್ಕಳು ಮತ್ತು ಮಹಿಳಾ ಕಲ್ಯಾಣ ಇಲಾಖೆ ವಿಷಯದಲ್ಲಿ ಮಾತನಾಡತಕ್ಕ ಸಂದರ್ಭದಲ್ಲಿ......

ಶ್ರೀಮತಿ ಮುಕ್ತರುನ್ನೀಸಾ.—ನನಗೆ ಅವಕಾಶ ಸಿಕ್ಕಿಲ್ಲ.

ಅಧ್ಯಕ್ಷರು.—ನೀವು ಹೊರಗೆ ಹೋಗಬೇಕಾ ?

ಶ್ರೀಮತಿ ಮುಕ್ತರುನ್ನೀಸಾ.—ಕೆ.ಎಸ್.ಆರ್.ಟಿ.ಸಿ. ಮೇಲೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಾ ?

ಅಧ್ಯಕ್ಷರು.—ಕೊಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಸಮಾಜ ಕಲ್ಯಾಣ, ಮಕ್ಕಳು ಮತ್ತು ಮಹಿಳಾ ಕಲ್ಯಾಣ ಇಲಾಖೆಯ ಬೇಡಿಕೆಗಳನ್ನು ವಿರೋಧಿಸುವ ಸಂದರ್ಭದಲ್ಲಿ ಒಂದು ಮಾತು ಹೇಳಬೇಕಾಗಿದೆ. ಈತನಕ ಸಮಾಜ ಕಲ್ಯಾಣ ಇಲಾಖೆ ಬೇಡಿಕೆಯ ಮೇಲೆ ಯಾವ ಸದಸ್ಯರೂ ಚರ್ಚೆ ಮಾಡಲಿಲ್ಲ.

ಆದರೆ ಈ ಒಂದು ಸಂದರ್ಭದಲ್ಲಿ ಸರ್ಕಾರದವರು ಕೊಟ್ಟಂತಹ ವರದಿಯಲ್ಲಿ ತಪ್ಪನ್ನೇ ಹುಡುಕುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವ ಅಭಿಪ್ರಾಯವನ್ನು ಮಾನ್ಯ ಮಂತ್ರಿಗಳು ತಾಳಬಾರದು. ಈ ಸಂದರ್ಭದಲ್ಲಿ ಈ ಇಲಾಖೆಯವರು ಕೊಟ್ಟಿರತಕ್ಕ ವರದಿಯನ್ನು ನೋಡಿದಾಗ ಹಾಕಿಕೊಂಡ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದರಲ್ಲಿ ಪ್ರಾಮಾಣಿಕ ಪ್ರಯತ್ನದ ಕೊರತೆ ಎದ್ದು ಕಾಣುತ್ತದೆ. ಶತಮಾನಗಳಿಂದ ತುಳಿತಕ್ಕೆ ಈಡಾದ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದ ಜನರ ಆರ್ಥಿಕ ಅಭಿವೃದ್ಧಿಗಾಗಿ ವಿದ್ಯಾ ವಿಕಾಸ ಮತ್ತು ಸಾಮಾಜಿಕ ಭದ್ರತೆ, ಇವುಗಳನ್ನು ಒದಗಿಸಲು ಶ್ರಮಿಸಬೇಕಾದ ಈ ಇಲಾಖೆ ತನ್ನ ಕೆಲಸವನ್ನು ಯಾವ ರೀತಿಯಲ್ಲಿ ನಿರ್ವಹಿಸುತ್ತಿದೆ ಎನ್ನುವುದನ್ನು

ಚಿಂತನೆ ಮಾಡಬೇಕಾಗುತ್ತದೆ. ಈ ಒಂದು ಹಂತದಲ್ಲಿ ಈ ಒಂದು ಇಲಾಖೆ ತನ್ನ ಮೂಲ ಉದ್ದೇಶವನ್ನು ಗುರಿತು ತನ್ನ ವಿಫಲತೆಯನ್ನು ಮುಟ್ಟಿದೆ, ಆ ರೀತಿಯ ಸಫಲತೆ ಇರುವುದನ್ನು ಅವರ ವರದಿಯಲ್ಲೇ ಕೊಟ್ಟಿದ್ದಾರೆ ಎನ್ನುವ ಮಾತನ್ನು ಅನಿವಾರ್ಯವಾಗಿ ಹೇಳಬೇಕಾಗಿದೆ. ಈ ಒಂದು ಸಮಾಜಕಲ್ಯಾಣ ಇಲಾಖೆಯ ವಿಫಲತೆಗೆ ಹಲವಾರು ಕಾರಣಗಳಿರಬಹುದು. ಆ ರೀತಿಯ ಹಲವಾರು ಕಾರಣಗಳಿಂದಾಗಿ ಇಲಾಖೆ ಸಾಧನೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಮತ್ತು ಇದರಲ್ಲಿ ನನ್ನ ಅನಿಸಿಕೆಯ ಪ್ರಕಾರ ಈ ಒಂದು ಇಲಾಖೆಯ ವೈಫಲ್ಯತೆಗೆ ಹಲವಾರು ಕಾರಣಗಳು ಇದೆ. ಈ ಒಂದು ಇಲಾಖೆಯಿಂದ ಕೆಲವು ಸೌಲಭ್ಯಗಳನ್ನು ಪಡೆದಂತಹವರು ಬುದ್ಧಿವಂತ ಜನರು. ಅವರೇ ತಿರುಗಿ ತಿರುಗಿ, ಪ್ರಯೋಜನವನ್ನು ಪಡೆದವರೇ ಪಡೆಯುತ್ತಾರೆ. ಇದರಿಂದಾಗಿ ಈ ಇಲಾಖೆ ನಿರೀಕ್ಷಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಇದರಲ್ಲಿರತಕ್ಕ ಪ್ರಚಾರ ಮಾಧ್ಯಮದ ಕೊರತೆ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಇವರು ಕೊಟ್ಟಿರತಕ್ಕಂತಹ ಅಂಕಿ ಸಂಖ್ಯೆಗಳಿಂದ ಸಕಾಲದಲ್ಲಿ ಹಣವನ್ನು ಬಿಡುಗಡೆ ಮಾಡದೇ ಇರತಕ್ಕಂತಹದ್ದು ಅದೇ ರೀತಿ ಸರಿಯಾದ ಸಮಯಕ್ಕೆ ಸ್ಕಾಲರ್‌ಷಿಪ್‌ನ್ನು ಬಿಡುಗಡೆ ಮಾಡದೇ ಇರತಕ್ಕಂತಹದ್ದು, ಅದೇ ರೀತಿ ಇಲಾಖೆಯಲ್ಲಿರತಕ್ಕ ಅಧಿಕಾರಿಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳಲಾರದ ಅಸಹಾಯಕ ಮಂತ್ರಿಗಳಾದ ಮಹಿಳಾ ಮಂತ್ರಿಗಳು ಇವೆಲ್ಲಾ ಈ ಇಲಾಖೆಯ ವೈಫಲ್ಯತೆಗೆ ಮುಖ್ಯ ಪಾತ್ರ ವಹಿಸುತ್ತಿವೆ ಎನ್ನುವ ಮಾತನ್ನು ಅನಿವಾರ್ಯವಾಗಿ ಹೇಳಲೇ ಬೇಕಾಗುತ್ತದೆ. ಮತ್ತೆ ೧೯೮೬-೮೭ನೇ ಸಾಲಿನ ಪ್ರಗತಿಯ ಚಿತ್ರವನ್ನು ಈ ಒಂದು ವರದಿಯಲ್ಲಿ ಕೊಟ್ಟಿರುವುದನ್ನು ನಾವು ನೋಡಿದ್ದೇವೆ. ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಿಗಾಗಿ ಖರ್ಚು ಮಾಡಿರುವಂತಹ ಹಣವನ್ನು ನಾವು ಇದರಲ್ಲಿ ನೋಡಬಹುದು. ಈ ಸಾಲಿನಲ್ಲಿ ಯೋಜನಾ ವೆಚ್ಚಕ್ಕೆ ಕೇಂದ್ರದಿಂದ ಬರತಕ್ಕ ಪೇರು ಹಣ ೫೯೭.೭೪ ಲಕ್ಷ ರೂಪಾಯಿಗಳು. ಅಷ್ಟನ್ನೂ ಖರ್ಚು ಮಾಡಬೇಕೆಂಬುದು ಇವರ ಗುರಿಯಾಗಿತ್ತು. ಆದರೆ ಇವರು ಖರ್ಚು ಮಾಡಿರುವಂತಹ ಹಣ ೫೫೩.೦೮ ರೂಪಾಯಿಗಳು. ಅಂದರೆ ಸುಮಾರು ೪೪ ಲಕ್ಷ ರೂಪಾಯಿಗಳನ್ನು ಇವರು ಖರ್ಚು ಮಾಡುವುದಕ್ಕಾಗಲಿಲ್ಲ. ಅದೇ ರೀತಿ ಯೋಜನೇತರ ವೆಚ್ಚದಲ್ಲಿ ೨೨೬೬.೨೧ ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೂ ಕೂಡ ಕೇವಲ ೨೦೬೭.೦೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಂದರೆ ಸುಮಾರು ೧೯೩ ಲಕ್ಷ ರೂಪಾಯಿಗಳನ್ನು ಇವರು ಖರ್ಚು ಮಾಡುವುದಕ್ಕಾಗಲಿಲ್ಲ. ಇದರಿಂದ ಈ ಇಲಾಖೆಯು ವಿಫಲವಾಗಿದೆ ಎಂಬುದನ್ನು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಅದೇ ರೀತಿ ಈ ಇಲಾಖೆಯ ವರದಿಯಲ್ಲಿ ಮತ್ತೊಂದು ವಿಚಾರವನ್ನು ಹೇಳಿದ್ದಾರೆ, ಅದೇನೆಂದರೆ,

> '' ಇಲಾಖೆಯಲ್ಲಿ ಸಮೂಹ 'ಸಿ'ಗೆ ಸೇರಿದ ೬೪೫ ಹುದ್ದೆಗಳು ಮತ್ತು ಸಮೂಹ 'ಡಿ''ಗೆ ಸೇರಿದ ೪೬೯ ಹುದ್ದೆಗಳು ಖಾಲಿ ಇವೆ. ಖಾಲಿ ಇರುವ ಬಹುಪಾಲು ಹುದ್ದೆಗಳನ್ನು ದಿನಗೂಲಿ ಆಧಾರದ ಮೇಲೆ ನೌಕರರಿಂದ ತುಂಬಲಾಗಿದೆ. ಇದರಿಂದ ವೇತನಕ್ಕೆ ನಿಗದಿಪಡಿಸಿದ ಹಣದಲ್ಲಿ ಹೆಚ್ಚಿನ ಉಳಿತಾಯವಾಗಿದೆ. ಅಲ್ಲದೆ, ಇಲಾಖೆಯ ಸಂಸ್ಥೆಗಳಲ್ಲಿ ಕಡಿಮೆ ಹಾಜರಾತಿಯಿಂದಾಗಿ ಸ್ವಲ್ಪಮಟ್ಟಿನ ಉಳಿತಾಯವಾಗಿದೆ. ''

ಎಂಬುದಾಗಿ ಹೇಳಿದ್ದೀರಿ. ಇದು ತಮ್ಮ ಇಲಾಖೆಯಲ್ಲಿರತಕ್ಕ ಅದಕ್ಷತೆಯನ್ನು ತೋರಿಸುವ ಸ್ಪಷ್ಟ ಚಿತ್ರ. ಇದು ತಮಗೆ ಈಗಾಗಲೇ ಮನವರಿಕೆಯಾಗಿರಬಹುದು. ಈ ಸಂದರ್ಭದಲ್ಲಿ ದಿನಗೂಲಿ ಆಧಾರದ ಮೇಲೆ ನೇಮಕ ಮಾಡಿರುವಂತಹವರನ್ನು ಯಾವ ಆಧಾರದ ಮೇಲೆ ನೇಮಕ ಮಾಡಿದ್ದೀರೆಂಬುದನ್ನೂ ಕೂಡ ತಿಳಿಸಬೇಕಾಗುತ್ತದೆ. ಅಲ್ಲದೆ ಅವರನ್ನು ನಿಯಮಾನುಸಾರ ನೇಮಕ ಮಾಡಿದ್ದರೆ, ಅವರನ್ನು ಖಾಯಂ ಮಾಡಬೇಕು. ಅದರ ಜೊತೆ ಇನ್ನೂ ಖಾಲಿ ಇರತಕ್ಕ ಹುದ್ದೆಗಳನ್ನು ಆದಷ್ಟು ಬೇಗ ತುಂಬತಕ್ಕ ಕೆಲಸವನ್ನು ಮಾಡಬೇಕಾಗುತ್ತದೆ.

'' ನಂತರ ೧೯೮೬-೮೭ನೇ ಸಾಲಿನ ಮುಖ್ಯ ಸಾಧನೆಗಳನ್ನು ಕೆಳಗೆ ಪಟ್ಟಿ ಮಾಡಿದೆ '' ಎನ್ನುವ ವಿಚಾರವನ್ನು ಹೇಳಿದ್ದಾರೆ. ಅದರಲ್ಲಿ ವಿದ್ಯಾರ್ಥಿ ವೇತನದ ಬಗ್ಗೆ ಹೇಳುತ್ತಾ, ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಗಳು ಎಂದು ಹೇಳಿ ಪರಿಶಿಷ್ಟ ಜಾತಿಯವರಿಗೆ ಸೇರಿದ ವಿದ್ಯಾರ್ಥಿಗಳ ಸಂಖ್ಯೆ ೧೬೪ ಹಾಗೂ ಪರಿಶಿಷ್ಟ ವರ್ಗದವರಿಗೆ ಸೇರಿದ ಒಬ್ಬ ವಿದ್ಯಾರ್ಥಿಗೆ ವಿದ್ಯಾರ್ಥಿ ವೇತನವನ್ನು ನೀಡಲಾಗಿದೆ ಎಂಬುದಾಗಿ ತಿಳಿಸಿದ್ದಾರೆ. ಅದರ ಅರ್ಥ ಫಲಾನುಭವಿಗಳೇ ಸಿಕ್ಕಲಿಲ್ಲ ಅಂತ ಅರ್ಥವೋ ? ಅಥವಾ ತಮ್ಮ ಇಲಾಖೆ ಇದರ ಬಗ್ಗೆ ಅಷ್ಟೊಂದು ಆಸಕ್ತಿಯಿಂದ ಕೆಲಸ ಮಾಡುತ್ತಿಲ್ಲವೋ ? ಅಥವಾ ಈ ರೀತಿಯ ಸೌಲಭ್ಯಗಳನ್ನು ಜನರಿಗೆ ಮುಟ್ಟಿಸುವುದರಲ್ಲಿ ನಿಮ್ಮ ಇಲಾಖೆಯ ಅಧಿಕಾರಿಗಳು

ಆಸಕ್ತಿಯನ್ನು ವಹಿಸಿಲ್ಲವೆಂದು ತಿಳಿದುಕೊಳ್ಳಬೇಕೋ, ಅಥವಾ ನಿಜವಾಗಿಯೂ ಬೇಡಿಕೆ ಬಂದಿಲ್ಲವೋ ಎನ್ನುವ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಅದೂ ಅಲ್ಲದೆ ಇದೇ ವಿಚಾರದಲ್ಲಿ ಮಾತನಾಡುವಾಗ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಂತೆ ಕಾನೂನು ಪದವೀಧರರಿಗೆ ನೆರವು ನೀಡುವ ವಿಚಾರ ಕೂಡ ಅವರ ವರದಿಯಲ್ಲಿ ಉಲ್ಲೇಖ ಆಗಿದೆ. ಕಾನೂನು ಪದವೀಧರರಿಗೆ ಸಹಾಯ ಮಾಡುವುದರಲ್ಲಿ ಪರಿಶಿಷ್ಟ ವರ್ಗಕ್ಕೆ ಸೇರಿದವರು ಒಬ್ಬರಿಗೂ ಸಿಕ್ಕಿಲ್ಲ. ಅದೇ ರೀತಿ ನ್ಯಾಯಾಂಗ ಅಧಿಕಾರಿಗಳ ತರಬೇತಿ ವಿಚಾರದಲ್ಲೂ ಕೂಡ ಪರಿಶಿಷ್ಟ ವರ್ಗದವರಿಗೆ ಸೇರಿದ ಜನರಿಗೆ ಈ ಸೌಲಭ್ಯಗಳು ಸಿಕ್ಕುತ್ತಿಲ್ಲ. ಆ ಬಗ್ಗೆ ನಿಮ್ಮ ಇಲಾಖೆ ಆಸಕ್ತಿ ವಹಿಸಿಲ್ಲವೆಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಇದು ನಿಮ್ಮ ಇಲಾಖೆಯ ಕಾರ್ಯವೈಖರಿಯನ್ನು ತೋರಿಸುತ್ತದೆ. ಅದರಲ್ಲೂ ಪರಿಶಿಷ್ಟ ವರ್ಗದವರಲ್ಲಿ ಅತ್ಯಂತ ಹಿಂದುಳಿದವರು ಎಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕ ಕೊರಗ ಜನಾಂಗದವರು. ಇವರಿಗೂ ವಿಶೇಷ ಯೋಜನೆಯೊಂದನ್ನು ತಾವು ಮಾಡಬೇಕು. ಸಮಾಜದಲ್ಲೇ ಅತ್ಯಂತ ಹಿಂದುಳಿದವರು ಎಂದರೆ ನಮ್ಮ ಭಾಗದಲ್ಲಿರತಕ್ಕ ಕೊರಗ ಜನಾಂಗದವರು ಎಂದರೆ ತಪ್ಪಾಗಲಿಕ್ಕಿಲ್ಲ.

ಇದೇ ಸಂದರ್ಭದಲ್ಲಿ ಮತ್ತೊಂದು ವಿಚಾರವನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ೧೯೮೭-೮೮ನೇ ಸಾಲಿನಲ್ಲಿ ವಿದ್ಯಾ ವಿಕಾಸ ಯೋಜನೆಗೆ ಸುಮಾರು ೨೦೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಈ ಹಣವನ್ನು ಪಠ್ಯ ಪುಸ್ತಕ ಹಾಗೂ ಸ್ಲೇಟ್ ಇವುಗಳಿಗಾಗಿ ಖರ್ಚು ಮಾಡಿದ್ದೀರಿ ಪ್ರತಿ ವಿದ್ಯಾರ್ಥಿಗಳು ಶಾಲೆಗೆ ಹೋಗುವ ಪರಿಸ್ಥಿತಿ ಬರಲಿ ಎಂಬ ಮೂಲ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಎಂಬುದು ಗೊತ್ತಾಗುತ್ತದೆ. ಆದರೆ ಪ್ರತಿಯೊಂದು ಶಾಲೆಗೂ ಕನಿಷ್ಟ ಉಪಾಧ್ಯಾಯರುಗಳನ್ನು ಪೋಸ್ಟ್ ಮಾಡಿ ಇರತಕ್ಕ ಪರಿಸ್ಥಿತಿಯನ್ನು ಇನ್ನೂ ಸುಧಾರಣೆ ಮಾಡಬೇಕೆಂಬ ಚಿಂತನೆಯನ್ನು ಈ ಸಂದರ್ಭದಲ್ಲಿ ಮಾಡಬೇಕಾಗುತ್ತದೆ. ಅದರಲ್ಲೂ ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರ, ಈ ವಿಚಾರದ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ಆ ಒಂದು ಕಾರ್ಯಕ್ರಮ ಮಲೆನಾಡಿನಲ್ಲಿ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಕಾರ್ಯಾರಂಭ ಮಾಡಿಲ್ಲ. ಕೇವಲ ಪಟ್ಟಣ ಪ್ರದೇಶಗಳಲ್ಲಿ ಪ್ರಚಾರ ಮಾಧ್ಯಮಕ್ಕಾಗಿ ಈ ಕಾರ್ಯಕ್ರಮವನ್ನು ಮಾಡುತ್ತಿದ್ದೀರೇ ಹೊರತು ನಿಜವಾಗಿಯೂ ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕೆನ್ನುವ ದಿಸೆಯಲ್ಲಿ ಕೆಲಸ ಮಾಡುತ್ತಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲೇಬೇಕಾಗುತ್ತದೆ.

ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಧನ ಸಹಾಯ ಎಂಬ ವಿಚಾರದಲ್ಲಿ ಹೇಳುವುದಾದರೆ ಈ ರಾಜ್ಯದಲ್ಲಿ ಸುಮಾರು ೨೪೨ ಖಾಸಗಿಯವರು ಹಾಸ್ಟೆಲ್‌ಗಳನ್ನು ನಡೆಸುತ್ತಿದ್ದಾರೆಂಬುದು ನಿಮ್ಮ ವರದಿಯಿಂದ ಅರ್ಥವಾಗುತ್ತದೆ. ಈ ಖಾಸಗಿ ವಿದ್ಯಾರ್ಥಿನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರತಕ್ಕ ಪ್ರತಿಯೊಬ್ಬ ವಿದ್ಯಾರ್ಥಿಗೂ ೧೦೦ ರೂಪಾಯಿಗಳ ಪ್ರಕಾರ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ ಎಂಬುದಾಗಿ ಹೇಳಿದ್ದೀರಿ. ಇದರಿಂದ ಆ ವಿದ್ಯಾರ್ಥಿಗಳಿಗೆ ಸರಿಯಾದ ಊಟವನ್ನು ಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು. ಇದನ್ನು ಹೆಚ್ಚು ಮಾಡಬೇಕೆಂಬ ಸಲಹೆಯನ್ನು ಸರ್ಕಾರಕ್ಕೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಅದೇ ರೀತಿ ಮೆಟ್ರಿಕ್ ಪೂರ್ವವಿದ್ಯಾರ್ಥಿ ವೇತನ ಹಾಗೂ ಪ್ರತಿಭಾ ವಿದ್ಯಾರ್ಥಿವೇತನದ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ಆದರೆ ಎಷ್ಟು ಶಾಲೆಗಳಿಗೆ ಈ ಎರಡು ವಿದ್ಯಾರ್ಥಿ ವೇತನಗಳನ್ನು ನೀಡಲಾಗಿದೆ ? ಎಷ್ಟು ಶಾಲೆಗಳಿಂದ ಆ ಬಗ್ಗೆ ಅರ್ಜಿಗಳು ಬಂದಿವೆ ? ಇನ್ನು ಎಷ್ಟು ಶಾಲೆಗಳಿಂದ ಅರ್ಜಿಗಳು ಬರಲಿಲ್ಲ ಎಂಬ ವಿಚಾರವನ್ನು ತಿಳಿಸಬೇಕು. ಇದಕ್ಕೆ ಕಾರಣ ನಿಮ್ಮ ಇಲಾಖೆಯಲ್ಲಿರತಕ್ಕ ಪ್ರಚಾರ ಮಾಧ್ಯಮದ ಕೊರತೆಯೇ ಮೂಲಕಾರಣವೆಂದು ಮತ್ತೊಮ್ಮೆ ಹೇಳಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ನಿಮ್ಮ ಇಲಾಖೆಯು ಹೆಚ್ಚು ಆಸಕ್ತಿ ವಹಿಸಬೇಕಾಗುತ್ತದೆ. ಈ ಬಗ್ಗೆ ಇಲಾಖೆಯು ಹೆಚ್ಚು ಪ್ರಚಾರ ಮಾಡಿಲ್ಲ. ಇದರಲ್ಲಿ ಪ್ರಚಾರ ಮಾಧ್ಯಮದ ಕೊರತೆ ಎದ್ದು ಕಾಣುತ್ತದೆ. ಇದನ್ನು ಸರಿಪಡಿಸಬೇಕು.

ಇನ್ನು ಮಹಿಳಾ ವೃತ್ತಿಪರ ಶಿಕ್ಷಣದ ಬಗ್ಗೆ ಹೇಳುವುದಾದರೆ, ಈ ರಾಜ್ಯದಲ್ಲಿ ೭೪ ಲಕ್ಷ ಪರಿಶಿಷ್ಟ ಜಾತಿ ಹಾಗೂ ವರ್ಗದ ಜನಸಂಖ್ಯೆ ಇದ್ದರೆ, ಅದರಲ್ಲಿ ೩೪ ಅಥವಾ ೩೫ ಲಕ್ಷ ಮಹಿಳೆಯರು ಇದ್ದಾರೆ. ಅದರಲ್ಲಿ ಇವರು ತರಬೇತಿ ಕೊಟ್ಟಂತಹ ಮಹಿಳೆಯರ ಸಂಖ್ಯೆ ಕೇವಲ ೧೫೪೫. ಅದೇ ರೀತಿ ಹೊಲಿಗೆಯಂತ್ರ ತರಬೇತಿಯನ್ನು ಪಡೆದಂತಹವರು ೧೦೮೭ ಎಂಬುದಾಗಿ ನಿಮ್ಮ ವರದಿಯಲ್ಲಿ

ತಿಳಿಸಿದ್ದೀರಿ. ಇದರಿಂದ ನಿಮ್ಮ ಕಾರ್ಯಕ್ರಮ ಈ ಯೋಜನೆಯುಡಿಯಲ್ಲಿ ಕುಂಠಿತವಾಗಿದೆ. ಆದ್ದರಿಂದ ಈ ಬಗ್ಗೆ ತಮ್ಮ ಇಲಾಖೆಯು ಹೆಚ್ಚು ಆಸಕ್ತಿ ವಹಿಸಿ ಕೆಲಸಮಾಡಬೇಕು. ಇಲ್ಲದಿದ್ದರೆ ಈ ಯೋಜನೆ ಇದ್ದೂ ಕೂಡ ಯಾವ ಪ್ರಯೋಜನವೂ ಇಲ್ಲದಂತಾಗುತ್ತದೆ,

ಈ ಬಗ್ಗೆ ಬಂದ ಅರ್ಜಿಗಳೆಷ್ಟು ? ಆ ಅರ್ಜಿಗಳನ್ನು ಎಲ್ಲಿಗೆ ಕಳುಹಿಸಬೇಕು ? ಬಂದ ಅರ್ಜಿಗಳಲ್ಲಿ ಎಷ್ಟು ಜನರು ಪ್ರಯೋಜನ ಪಡೆದಿದ್ದಾರೆನ್ನುವ ಅಂಕಿಅಂಶಗಳನ್ನು ಕೊಡಬೇಕಾಗುತ್ತದೆ. ಪ್ರಚಾರ ಮಾಧ್ಯಮದ ಮೂಲಕ ಪುಸ್ತಕದಲ್ಲಿ ಇಷ್ಟು ಜನರಿಗೆ ಕೊಟ್ಟಿದ್ದೇವೆಂದರೆ ಯಾರಿಗೆ ಕೊಟ್ಟಿದ್ದಾರೆ ಫಲಾನುಭವಿಗಳನ್ನು ಗುರುತಿಸುವ ಕೆಲಸವನ್ನು ಅಧಿಕಾರಿಗಳು ಮಾಡುತ್ತಿದ್ದಾರೆ. ಹಿಂದುಳಿದ ವರ್ಗಗಳ ಇಲಾಖೆ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಇಲಾಖೆಯಿಂದ ಆ ಜನರಿಗೆ ಏನು ಅನುಕೂಲ ಸಿಗಬೇಕೋ ಅದು ಸಿಗುತ್ತಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಅಧ್ಯಕ್ಷರು.—ನೀವು ನಿಮ್ಮ ಭಾಷಣವನ್ನು ಮುಗಿಸಿ. ಎಷ್ಟು ಸಾರಿ ಹೇಳಬೇಕು ?

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಆಯಿತು ಮುಗಿಸುತ್ತೇನೆ, ಇನ್ನು ಗೃಹನಿರ್ಮಾಣಕ್ಕೆ ಸಹಾಯಧನ ಎಂದು ಕೊಡುತ್ತಾರೆ. 'ಬೆಂಕಿ, ಪ್ರವಾಹ ಮುಂತಾದ ನೈಸರ್ಗಿಕ ಆಕಸ್ಮಿಕಗಳಲ್ಲಿ ಮನೆ ಕಳೆದುಕೊಂಡ ಪರಿಶಿಷ್ಟ ಜಾತಿ ಕುಟುಂಬಗಳಿಗೆ ವಸತಿ ಪುನರ್ ನಿರ್ಮಾಣಕ್ಕಾಗಿ ೯೦೦ ರೂಪಾಯಿಗಳ ಸಹಾಯ ಧನವನ್ನು ಮಂಜೂರು ಮಾಡಲಾಗುತ್ತಿದೆ.' ಸಂಪೂರ್ಣವಾಗಿ ಮನೆ ಕಳೆದುಕೊಂಡವರಿಗೆ ೯೦೦ ರೂಪಾಯಿಗಳಿಂದ ಏನು ಮಾಡಲಿಕ್ಕೆ ಸಾಧ್ಯ ? ಆದರಿಂದ ಪ್ರಯೋಜನವಾಗುತ್ತದೆಯೋ ಅದರ ಬಗ್ಗೆ ಇವರ ಚಿಂತನೆ ಏನೆಂಬುದು ಗೊತ್ತಾಗುತ್ತದೆ. ಹುಡ್ಕೋ ಮನೆಗೆ ೪೫೦೦ ಕೊಡುತ್ತಾರೆ, ಫಲಾನುಭವಿ ತಾನು ೫೦೦ ರೂಪಾಯಿಗಳನ್ನು ಕೈಯಿಂದ ಹಾಕಿಕೊಳ್ಳಬೇಕು, ಇಂದಿರಾ ಆವಾಜ್‌ನಲ್ಲಿ ೯ ಸಾವಿರ ರೂಪಾಯಿ ಕೊಡುವ ಪ್ರಸಂಗವಿದೆ ಈ ಪುಸ್ತಕವನ್ನು ಕೊಡುವುದರ ಮೂಲಕ ಕಣ್ಣು ಒರೆಸುವ ಕೆಲಸವನ್ನು, ಆ ಒಂದು ವ್ಯವಸ್ಥೆಯನ್ನು ಮಾಡುತ್ತಿದ್ದೀರಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು.—ನೀವು ಬೇಗ ಮುಗಿಸಿ ನಿಮ್ಮ ಕೆಲಸ ದಿವಸ ತರಲೆ ಮಾಡುವುದು ನಿಮಗೆ ಮಾತನಾಡಲಿಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಸದಸ್ಯರು ಸರಿಯಾಗಿ ಜವಾಬ್ದಾರಿಯಿಂದ ಮಾತನಾಡುತ್ತಿದ್ದಾರೆ ಅವರು ಮಾತನಾಡಲಿಕ್ಕೆ ನೀವು ಅವಕಾಶ ಕೊಡಿ. ಅವರು ಮಾತನಾಡಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ ?

ಅಧ್ಯಕ್ಷರು.—ನೀವು ಈ ತರಹ ಜಗಳ ಮಾಡುವುದು ಸರಿಯಲ್ಲ It will not be recorded ೧೦ ನಿಮಿಷ ಅವಕಾಶ ಕೊಟ್ಟಿದ್ದೇನೆ. ಈಗ ೧೨ ನಿಮಿಷವಾಗಿದೆ ನಿಮಗೆ ತಿಳಿಯುವುದಿಲ್ಲವೆ ?

ಶ್ರೀ ಪಟಮಕ್ಕಿ ರತ್ನಾಕರ್.—ರೆಕಾರ್ಡ್ ಆಗುವುದಿಲ್ಲವೆಂದರೆ ಅರ್ಥವೇನು ?

ಅಧ್ಯಕ್ಷರು.—ನೀವು ಈ ತರಹ ಜಗಳ ಮಾಡಿದರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ೧೦ ನಿಮಿಷ ಅವಕಾಶ ಕೊಟ್ಟಿದ್ದೇನೆ, ಈಗಾಗಲೇ ೧೨ ನಿಮಿಷವಾಗಿದೆ. ಇನ್ನು ಮಾತನಾಡುವವರು ಬಹಳ ಜನರಿದ್ದಾರೆ. ನೀವು ಸದನ ನಡೆಸುವುದಕ್ಕೆ ಏನೇ ಅಡ್ಡಿ ಮಾಡಿದರೂ ನಾನು ಅವಕಾಶ ಕೊಡುವುದಿಲ್ಲ. It will not be recorded. ಇನ್ನು ಬಹಳ ಜನ ಮಾತನಾಡುವವರು ಇದ್ದಾರೆ ನಾನು ಅವಕಾಶ ಕೊಡುವುದಿಲ್ಲ.

ಶ್ರೀ ಪಟಮಕ್ಕಿ ರತ್ನಾಕರ್.—ಪ್ರಮುಖವಾದ ಬೇಡಿಕೆಗಳನ್ನು ಇಟ್ಟಿದ್ದೀರಿ, ಮಾತನಾಡಲಿಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ ?

ಶ್ರೀ ಬಿ.ಎಂ. ಇದಿನಬ್ಬ.—ಮಾನ್ಯ ಪ್ರತಾಪಚಂದ್ರಶೆಟ್ಟಿಯವರು ಒಳ್ಳೆಯ ಮಾತು ಆಡುತ್ತಿದ್ದಾರೆ, ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು.— ಈಗ ಆಗುವುದಿಲ್ಲ. ಅವಕಾಶ ಕೊಡುವುದಕ್ಕೆ ಸಾಧ್ಯವೇ ಇಲ್ಲ, ನೀವು ಕೂತುಕ್ತಿರೋ ಇಲ್ಲವೊ ? I have to take action...

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ನಾನು ಕೂಡುವುದಿಲ್ಲ, ನೀವು ಕ್ರಮ ತೆಗೆದುಕೊಳ್ಳುವುದು ಇದ್ದರೆ ತೆಗೆದುಕೊಳ್ಳಿ. ನನ್ನನ್ನು ಹೊರಗೆ ಕಳುಹಿಸಬೇಕೆಂದಿದ್ದರೆ ಕಳುಹಿಸಿ.

ಅಧ್ಯಕ್ಷರು.—ಈಗ ಮಾತನಾಡಲಿಕ್ಕೆ ಅವಕಾಶ ಕೊಡುವುದಿಲ್ಲ. ಮಾನ್ಯ ಫರ್ನಾಂಡೀಸ್‌ರವರು ಕುಳಿತುಕೊಳ್ಳಿ ಅಂದಾಗ ಹೇಗೆ ಗೌರವದಿಂದ ಕುಳಿತುಕೊಂಡರು, ಹೆಚ್ಚಿಗೆ ಸಮಯ ಇಲ್ಲದೇ ಇರುವುದರಿಂದ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ,

ಶ್ರೀ ಪಟವಾಕ್ಷಿ ರತ್ನಾಕರ್.—ಮಾನ್ಯಸದಸ್ಯರು ವೈಜ್ಞಾನಿಕವಾಗಿ ವಿಷಯಗಳನ್ನು ಮಂಡಿಸುತ್ತಿದ್ದಾರೆ ಅಂತಹ ಸಂದರ್ಭದಲ್ಲಿ ಕುಳಿತುಕೊಳ್ಳಿ ಅಂದರೆ ಇದೇನಿದು ? ನಾವು ಈ ಮನೆಯ ಸದಸ್ಯರಲ್ಲವೆ ?

MR. SPEAKER.—I just bring to your notice rule 318 and 330 of the Rules of Procedure.

318. The Speaker may, in cases not specifically provided for in the rules and having regard to the State of business before the House and the nature of the motion prescribes a time limit for speecnen on the motion.

330. The Speaker may, direct any member whose conduct is in his opinion grossly, di orderly to withdraw immediately from the House, and any member so ordered to withdraw shall do so fortywith and shall absent himself during the remainder of the day's sitting. ಎರಡು ಗಂಟೆಗೆ ಚರ್ಚೆ ಮುಗಿಯಬೇಕು ಎರಡು ಗಂಟೆಯ ನಂತರ ಮಾನ್ಯ ಮಂತ್ರಿಗಳಿಂದ ಉತ್ತರ ಆಗಬೇಕು ಆದ್ದರಿಂದ ಒಬ್ಬರು ಮಾತನಾಡಲಿಕ್ಕೆ ೧೦ ನಿಮಿಷ ಅವಕಾಶ ಕೊಟ್ಟಿದ್ದೇನೆ ಫರ್ನಾಂಡೀಸ್‌ರವರು ಮಾತನಾಡುವಾಗ ಹೆಚ್ಚಿಗೆ ಸಮಯ ಕೊಡಲಿಲ್ಲ ಹೆಚ್ಚಿಗೆ ಮಾತನಾಡಿದರೆ ರೆಕಾರ್ಡ್ ಆಗುವುದಿಲ್ಲವೆಂದು ಹೇಳಿದ್ದೇನೆ ಅದೇ ರೀತಿ ನಿಮಗೆ ಕೂಡ ಹೆಚ್ಚಿಗೆ ಸಮಯ ಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ಶ್ರೀ ಪ್ರತಾಪಚಂದ್ರಶೆಟ್ಟಿಯವರು ಇನಿಶಿಯೇಟ್ ಮಾಡಬೇಕಿತ್ತು ಆ ಲಿಸ್ಟ್‌ನಲ್ಲಿ ಹೇಗೋ ವ್ಯತ್ಯಾಸವಾಗಿ ಮತ್ತೆ ಬರೆದುಕಳಿಸಿದ್ದೆ. ಅದು ತಮಗೆ ದೊರೆಯಿತೋ ಇಲ್ಲವೋ ಗೊತ್ತಿಲ್ಲ. ಅವರು ಮಾಡಬೇಕಿತ್ತು. ಈಗ ತಿರುಗಿ ಬರೆದುಕಳಿಸಿದ್ದೇನೆ...

ಅಧ್ಯಕ್ಷರು.—ಶ್ರೀಮತಿ ಮನೋರಮಾ ಮಧ್ವರಾಜ್ ಅವರು ಇನಿಶಿಯೇಟ್ ಮಾಡಿದ್ದಾರೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಾನು ಮಾತನಾಡಿದ್ದು ಕೇಳುವುದಿಲ್ಲ ಎಂದರೆ ಹೇಗೆ ? ತಾವು ಅಲ್ಲಿ ಕುಳಿತುಕೊಂಡು ಜಾಸ್ತಿ ಮಾತನಾಡಬಾರದು ಅಧ್ಯಕ್ಷರೇ...

ಅಧ್ಯಕ್ಷರು.—ಮಾತನಾಡಬಾರದು ಎಂದರೆ ಸಭೆ ಹೇಗೆ ನಡೆಸಬೇಕು ? ತಾವು ಇಲ್ಲಿ ಕುಳಿತುಕೊಂಡು ಕೆಲಸ ಮಾಡಿದ್ದೀರಿ. ನೀವು ಇಲ್ಲಿ ಇದ್ದಾಗ ಐದೈದು ನಿಮಿಷ ಕೊಟ್ಟಿರಿ ನನಗೆ ಮಾನಾಡಿ ಅನುಭವ ಇದೆ. ನಾನು ಎಲ್ಲರಿಗೂ ಅವಕಾಶ ಕೊಡಬೇಕಲ್ಲ ? ಈ ಕಡೆಯುವರೂ ಇದ್ದಾರೆ, ಆ ಕಡೆಯುವರೂ ಇದ್ದಾರೆ ಶ್ರೀ ಧರ್ಮಸಿಂಗ್ ಅವರು ಇದ್ದಾರೆ, ಶ್ರೀ ಬಸವಲಿಂಗಪ್ಪನವರು ಇದ್ದಾರೆ ಎರಡು ಗಂಟೆಗೆ ಚರ್ಚೆ ಮುಗಿಸಬೇಕು ಇನ್ನು ಒಂದು ತಾಸು ಇದೆ. ನಾನು ಮಾತನಾಡಬಾರದು ಎಂದರೆ...

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಾನು ಮಾತನಾಡುವುದು ಸ್ವಲ್ಪ ಕೇಳಿ ನೀವು.

ಅಧ್ಯಕ್ಷರು.—ಸಾಧ್ಯ ಇಲ್ಲ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ —ನಾನು ಮಾತನಾಡುವುದನ್ನು ಕೇಳುವುದಿಲ್ಲವೆ ?

ಅಧ್ಯಕ್ಷರು,—ಯೋಗ್ಯ ಇದ್ದರೆ ಕೇಳಬೇಕು. ಯೋಗ್ಯ ಅಲ್ಲದಿದ್ದರೆ ಏಕೆ ಕೇಳಬೇಕು ?

ಶ್ರೀಮತಿ ಕೆ.ಎಸ ನಾಗರತ್ನಮ್ಮ.—ಹಾಗಾದರೆ ನಾನು ಯೋಗ್ಯತೆ ಇಲ್ಲದೆ ಮಾತನಾಡುತ್ತೀನಾ? ಯೋಗ್ಯತೆ ಇಲ್ಲದೆ ಮಾತನಾಡ್ತೀನಾ ನಾನು ? ದಯವಿಟ್ಟು ಈ ಮಾತನ್ನು ತಾವು ವಾಪಸ್ಸು ತೆಗೆದು ಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು.— ತಾವು ಇಲ್ಲಿ ಕುಳಿತು ಕೆಲಸ ಮಾಡಿದ್ದೀರಿ. ನೀವೇ ಐದು ಮಿನಿಟು ಹತ್ತು ಮಿನಿಟು ಕೊಟ್ಟಿದ್ದೀರಿ. ಐದು ಮಿನಿಟು ಮಾತನಾಡಿ ನನಗೆ ಅನುಭವ ಇದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಅದೆಲ್ಲ ಬೇರೆ ವಿಚಾರ.

ಅಧ್ಯಕ್ಷರು.— ನೀವು ಸ್ಟ್ರಿಕ್ಟ್ ಆಗಿ ಕೆಲಸ ಮಾಡಿದ್ದೀರಿ. ನಾನೂ ಸ್ಟ್ರಿಕ್ಟ್ ಆಗಿ ಕೆಲಸ ಮಾಡ ಬೇಕಾಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಾನು ಯೋಗ್ಯತೆ ಇಲ್ಲದೆ ಮಾತನಾಡುತ್ತಿದ್ದೀನಾ ? ಮೊದಲು ಹೇಳಿ.

ಅಧ್ಯಕ್ಷರು.— ಅವರಿಗೆ ಹತ್ತು ನಿಮಿಷ ಕೊಟ್ಟಿದ್ದೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಅದು ಬೇರೆ ವಿಚಾರ. ನಾನು ಯೋಗ್ಯತೆ ಇಲ್ಲದೆ ಮಾತ ನಾಡುತ್ತಿದ್ದೀನಾ ದಯವಿಟ್ಟು ಹೇಳಿ. You have got to withdraw that word......

ಅಧ್ಯಕ್ಷರು.— ತಾವು ಏನು ಹೇಳುತ್ತಿದ್ದೀರಿ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಯೋಗ್ಯತೆ ಇಲ್ಲದೆ ಮಾತನಾಡುವುದಕ್ಕೆ ಬಂದಿದ್ದೀನಾ ನಾನು ? ೩೫ ವರ್ಷ ಆಯಿತು ಇಲ್ಲಿಗೆ ಬಂದು. ಇವತ್ತಲ್ಲ ಬಂದಿರುವುದು. ಯೋಗ್ಯತೆ ಇಲ್ಲದೆ ಮಾತನಾಡುವುದಕ್ಕೆ ಬಂದಿದ್ದೀನಾ ?

ಅಧ್ಯಕ್ಷರು.— ನಿಮ್ಮ ಅನುಭವವನ್ನು ನಾನು ತೆಗೆದುಕೊಂಡಿದ್ದೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಅದೆಲ್ಲ ಹಳೆ ಕತೆ ಆಯಿತು.

ಅಧ್ಯಕ್ಷರು,— ಹತ್ತು ನಿಮಿಷ ಕೊಟ್ಟಿದ್ದೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಹತ್ತು ನಿಮಿಷ ಕೊಡಿ, ಎರಡು ನಿಮಿಷ ಕೊಡಿ. ಅದು ಬೇರೆ ವಿಚಾರ, ನಾನು ಇಲ್ಲಿ ಕುಳಿತಿರುವವರೆಗೆ ನಾನು ಮಾತನಾಡಿದ್ದನ್ನು ತಾವು ಕೇಳಬೇಕು.

(ಗೊಂದಲ)

ಅಧ್ಯಕ್ಷರು.— ಈ ಇಂಟರ್‌ಫಿಯರೆನ್ಸ್ ಯಾಕೆ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಾನು ಇಂಟರ್‌ಫಿಯರೆನ್ಸ್ ಮಾಡಿದ್ದನ್ನು ನೋಡಿ ದ್ದೀರಾ ?

ಅಧ್ಯಕ್ಷರು.— ಅವರಿಗೆ ನೋಡಿ, ೧೨, ಮಿನಿಟ್ ಕೊಟ್ಟಿದ್ದೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಾನು ಯೋಗ್ಯತೆ ಇಲ್ಲದೆ ಮಾತನಾಡಿದ್ದೇನೆ ಎನ್ನುವ ಪದವನ್ನು ನೀವು ಏನು ಹೇಳಿದ್ದೀರಿ, ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ತಾವು ಅಪಾಲಜೈಸ್ ಮಾಡಬೇಕು.

(ಗೊಂದಲ)

ಅಧ್ಯಕ್ಷರು.— ನೋಡಿ, ನನಗೂ ಜವಾಬ್ದಾರಿ ಇದೆ, ನಿಮಗೂ ಜವಾಬ್ದಾರಿ ಇದೆ.

SMT. K. S. NAGARATHNAMMA.-- You have got to apolozies... to this House......

(ಗೊಂದಲ)

ಶ್ರೀ ಧರ್ಮಸಿಂಗ್ — ತಾವು ವಿರೋಧ ಪಕ್ಷದ ನಾಯಕಿಯವರಿಗೆ ಈ ರೀತಿ ಹೇಳಬಾರದು,

ಅಧ್ಯಕ್ಷರು.— ನಿಮಗೂ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನೆ.

ಶ್ರೀಮತಿ ಕೆ ಎಸ್, ನಾಗರತ್ನಮ್ಮ.— ನಾನು ಕೇಳಿದ್ದಕ್ಕೆ ಹೇಳಿ. ನಾನು ಯೋಗ್ಯತೆ ಇಲ್ಲದೆ ಮಾತನಾಡುವುದಕ್ಕೆ ಬಂದಿದ್ದೀನಾ ?

(ಗೊಂದಲ)

ಅಧ್ಯಕ್ಷರು.— ನಾನು ಶ್ರೀ ಫರ್ನಾಂಡಿಸ್ ಅವರಿಗೆ ಆಗುವುದಿಲ್ಲ ಎಂದು ಹೇಳಿಲ್ಲವೆ ? ನಾನು ಇವರಿಗೆ ಹತ್ತು ನಿಮಿಷ ಕೊಟ್ಟು ಅವರಿಗೆ ಜಾಸ್ತಿ ಕೊಟ್ಟಿದ್ದರೆ ನಾನು ಪಕ್ಷಪಾತ ಮಾಡುತ್ತೇನೆ. ಎಂದು ನೀವು ಹೇಳುತ್ತೀರಿ.

ಶ್ರೀ ಪಟವಕ್ಕಿ ರತ್ನಾಕರ್.— ಅಧ್ಯಕ್ಷರೆ ತಾವು ಯೋಗ್ಯತೆ ಇಲ್ಲ — ಎಂಥಾದ್ದೋ ಮಾತು ಆಡಿದ್ದೀರಿ. ದಯಮಾಡಿ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು.— ಶ್ರೀಮತಿ ನಾಗರತ್ನಮ್ಮನವರೇ ದಯಮಾಡಿ ಕೇಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಆಗುವುದಿಲ್ಲ. ನೀವು ಹೇಳಿದ್ದನ್ನು ವಾಪಸ್ಸು ತೆಗೆದು ಕೊಳ್ಳಬೇಕು,

ಅಧ್ಯಕ್ಷರು.— ನೋಡಿ ಎರಡು ಗಂಟೆಗೆ ಮುಗಿಸೋಣ. ಅವರು ಎಷ್ಟು ಹೊತ್ತು ಬೇಕಾದರೂ ಮಾತನಾಡಲಿ,

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀವು ಎರಡು ಗಂಟೆಗಾದರೂ ಮುಗಿಸಿ ಅಥವಾ ಮೂರು ಗಂಟೆಗಾದರೂ ಮುಗಿಸಿರಿ. ನೀವು ಇಲ್ಲಿ ಕುಳಿತುಕೊಂಡು ಆ ಮಾತನ್ನು ಆಡುವುದೆ ? ಆ ಸ್ಥಾನದಲ್ಲಿ ಕುಳಿತುಕೊಂಡು ಹಾಗೆ ಮಾತನಾಡುವುದು ಎಂದರೆ ಏನು ?

ಅಧ್ಯಕ್ಷರು.— ನೀವು ಕುಳಿತುಕೊಳ್ಳಿ,

SMT. K. S. NAGARATHNAMMA.— We will not allow to proceed to do any business. You havegot to apolozise. I won't sit...

ಅಧ್ಯಕ್ಷರು.— ನಾನು ನಿಮಗೆ ಹೇಳಿಲ್ಲ. ನೀವು ಇಂಟರ್‌ಫಿಯರ್ ಮಾಡುವುದು ಬೇಡ, ದಯ ವಿಟ್ಟು ಕುಳಿತುಕೊಳ್ಳಿ ಎಂದು ಅವರಿಗೆ ಹೇಳಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಾನು ಕುಳಿತುಕೊಳ್ಳುವುದಿಲ್ಲ.

I cannot sit down... ..

ತಾವು ಯೋಗ್ಯತೆ ಇಲ್ಲವೆಂದು ಹೇಳಿದ್ದೀರಿ. ನಾನು ಯೋಗ್ಯತೆ ಇಲ್ಲದೆ ಮಾತನಾಡುತ್ತೀನಾ ?

(ಗೊಂದಲ)

೧–೦೦ ಪಿ. ಎಂ.

ಶ್ರೀ ಎ. ಲಕ್ಷ್ಮೀಸಾಗರ್ — ಮಾನ್ಯ ಅಧ್ಯಕ್ಷರೇ. ಮಾನ್ಯ ವಿರೋಧ ಪಕ್ಷದ ನಾಯಕಿಯವರಿಗೆ ಒಂದು ಮಾತನ್ನು ಹೇಳುತ್ತೇನೆ, ಮಾನ್ಯ ಅಧ್ಯಕ್ಷರು ತಮ್ಮನ್ನು ಕುರಿತು ಆ ಮಾತನ್ನು ಹೇಳಲಿಲ್ಲ. ನಾನು ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ತಪ್ಪುನ್ನು ಕುರಿತು ಆ ಮಾತನ್ನು ಹೇಳಲಿಲ್ಲ. ಒಂದು ಸ್ವಲ್ಪ ಇರಿ ಸ್ವಾಮಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ಸ್ವಲ್ಪ ಇರಿ ಅಪ್ಪ, ಒಂದು ನಿಮಿಷ ಇರಿ.

(ಗೊಂದಲ)

SMT. K. S. NAGARATHNAMMA.— I am not going to allow this House to proceed until he apologise.

ಶ್ರೀ ಎ. ಲಕ್ಷ್ಮೀಸಾಗರ್.— ಒಂದು ನಿಮಿಷ ಕೇಳಿ ಸ್ವಾಮಿ. ಮಾನ್ಯ ಅಧ್ಯಕ್ಷರು ವಿರೋಧ ಪಕ್ಷದ ನಾಯಕಿಯವರನ್ನು ಕುರಿತು ಆ ಮಾತನ್ನು ಹೇಳಲಿಲ್ಲ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ಒಂದು ನಿಮಿಷ ಕೇಳುವುದೂ ಬೇಡವೇ, ನೀವು ಹೇಳಿದುದನ್ನು ಕೇಳಬೇಕು ನಾವು ಹೇಳಿದುದನ್ನು ಕೇಳುವುದು ಬೇಡವೇ. ದಯವಿಟ್ಟು. ಪ್ಲೀಸ್, ಯೋಗ್ಯವಾಗಿ ಮಾತನಾಡತಕ್ಕವರು ಸಮಯ ನೋಡಿ ಮಾತನಾಡಬೇಕು ಎಂದು ಅಧ್ಯಕ್ಷರು ಹೇಳಿದರು, ಮಾನ್ಯ ಅಧ್ಯಕ್ಷರದ್ದು ಧಾರವಾಡದ ಕನ್ನಡ.

(ಗೊಂದಲ)

ಅಧ್ಯಕ್ಷರು.— ಇದು ನಿಮ್ಮ ಯೋಗ್ಯತೆಯ ಪ್ರಶ್ನೆ ಅಲ್ಲ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ದಯವಿಟ್ಟು ಕೇಳಿ, ಅಧ್ಯಕ್ಷರು, ಆ ರೀತಿ ಹೇಳಲಿಲ್ಲ. ಯೋಗ್ಯತೆ ಎಂಬ ವಿಚಾರವನ್ನು ಅವರು ಹೇಳಲಿಲ್ಲ. ಯೋಗ್ಯವಾದ ಮಾತನಾಡತಕ್ಕವರೂ ಕೂಡಾ...

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಾನೇನೂ ಕಿವಿಯ ಒಳಗೆ ಬೆಟ್ಟು ಹಾಕಿಕೊಂಡು ಕುಳಿತಿಲ್ಲ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ನಾನು ಮಾತನಾಡುವುದನ್ನು ಕೇಳಿ, ಅವರು ಈ ರೀತಿ ಹೇಳಲಿಲ್ಲ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ಅಯ್ಯೋ ಶಿವನೇ, ಈ ರೀತಿ ತಮಗೆ ಹೇಳುವುದಕ್ಕೆ ಆಗುತ್ತದೆಯೋ ೩೫ ವರ್ಷಗಳ ಅನುಭವ ಇದೆ ತಮಗೆ...

ಅಧ್ಯಕ್ಷರು.— ನನಗೆ ಗೊತ್ತಿದೆ. ತಾವೂ ಇಲ್ಲಿ ಆರು ವರ್ಷ ಕುಳಿತು ಕೆಲಸ ಮಾಡಿರುತ್ತೀರಿ. ನಾವು ತಮ್ಮಿಂದ ಬೇಕಾದಷ್ಟು ಅನುಭವ ಕಲಿತಿದ್ದೇವೆ. ನಿಮ್ಮ ಯೋಗ್ಯತೆಯನ್ನು ಪ್ರಶ್ನೆ ಮಾಡುವ ವಿಚಾರ ಇಲ್ಲಿ ಯಾರಿಗೂ ಬರುವುದಿಲ್ಲ. ಬೇರೆಯವರ ಯೋಗ್ಯತೆಯನ್ನು ಪ್ರಶ್ನೆ ಮಾಡುವ ಪ್ರಶ್ನೆ ಬರುವುದಿಲ್ಲ ಇಲ್ಲಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ಇಲ್ಲ ಇಲ್ಲ. ಅಧ್ಯಕ್ಷರು ಹಾಗೆ ಹೇಳಲಿಲ್ಲ.

(ಗೊಂದಲ)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.— ಅಧ್ಯಕ್ಷರೇ ನಾನು ಮುಂದುವರಿಸುತ್ತೇನೆ.

ಅಧ್ಯಕ್ಷರು.—ಒಟ್ಟಿನಲ್ಲಿ ಇದರ ಬಗ್ಗೆ ಚರ್ಚೆಯನ್ನು ಎರಡು ಗಂಟೆಗೆ ಮುಗಿಸಬೇಕು ತಾವು ಮಾತನಾಡುವುದು ಇದ್ದರೆ ಮಾತನಾಡಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ದಯವಿಟ್ಟು ಕೇಳಿ, ನಾನು ಕೇಳುತ್ತಿದ್ದೆ, ನಾನು ಇನ್ನೂ ಪೂರ್ತಿ ಮಾತನಾಡಲಿಲ್ಲ. ಮಾನ್ಯ ಅಧ್ಯಕ್ಷರು ಹಾಗೆ ಹೇಳಲೇ ಇಲ್ಲ, ಅವರದ್ದು ಧಾರವಾಡ ಕನ್ನಡ, ಸ್ವಲ್ಪ ಗಡಸು. ಯೋಗ್ಯ ಮಾತನಾಡಬೇಕು, ಅಂತಹವರಿಗೂ ಕೂಡಾ ಹತ್ತು ನಿಮಿಷ ಕೊಟ್ಟಿದ್ದೇನೆ, ಇವರಿಗೆ ಎರಡು ನಿಮಿಷ ಇನ್ನೂ ಜಾಸ್ತಿ ಕೊಟ್ಟಿದ್ದೇನೆ ಎಂದು ಹೇಳಿದ್ದಾರೆ. ತಮ್ಮನ್ನು ಕುರಿತು ಆ ರೀತಿ ಹೇಳುವುದು ಸಾಧ್ಯವಿಲ್ಲ. ಶಿವಶಿವಾ.

ಅಧ್ಯಕ್ಷರು.— ನಮಗಿಂತ ಅವರಿಗೆ ಹೆಚ್ಚು ವಯಸ್ಸಾಗಿದೆ. ಹೆಚ್ಚು ಅನುಭವ ಇದೆ ಆದ್ದರಿಂದಲೂ ಅದನ್ನೇ ಹೇಳುತ್ತಿದ್ದೇನೆ ಅವರಿಗೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.— ಅಧ್ಯಕ್ಷರೇ...

ಅಧ್ಯಕ್ಷರು.—ಮಾತನಾಡಿ ಎರಡು ಗಂಟೆಯವರೆಗೆ ಮಾತನಾಡಿದರೂ ನನ್ನದೇನೂ ತಕರಾರಿಲ್ಲ. ಎರಡು ಗಂಟೆಯವರೆಗೆ ಬೇಕಾದರೂ ನೀವು ಮಾತನಾಡಿ) ಎರಡು ಗಂಟೆಗೆ ಇದನ್ನು ಮುಗಿಸಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಅಧ್ಯಕ್ಷರೇ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರಿ, ನಾನು ನಿಂತುಕೊಂಡಿದ್ದೇನೆ.

†ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.— ಗೃಹನಿರ್ಮಾಣಕ್ಕೆ ಸಹಾಯಧನ ಯೋಜನೆ ಯಾವರೀತಿಯಲ್ಲಿ ನಡೆಯುತ್ತಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ನಾವು ವಿಚಾರ ಮಾಡಬೇಕಾಗುತ್ತದೆ. ಈ ಒಂದು ಪರಿಹಾರ ಪಡೆಯುವ ಫಲಾನುಭವಿಗಳು ಕೇವಲ ಅದೃಷ್ಟಶಾಲಿಗಳು ಮಾತ್ರ. ಇವರು ಮಾತ್ರ ಫಲಾನುಭವಿಗಳಾಗುತ್ತಾರೆಯೇ ಹೊರತು ನಿಜವಾಗಿ ಯಾರಿಗೆ ಪರಿಹಾರ ಸಿಗಬೇಕು ಅವರಿಗೆ ಸಿಗುತ್ತಿಲ್ಲ. ಅಧಿಕಾರಿಗಳು ಗುರುತಿಸಿನ ಫಲಾನುಭವಿಗಳಿಗೆ ಪ್ರಯೋಜನ ಸಿಗುತ್ತಿದೆ. ಮತ್ತು ಇದರ ಬಗ್ಗೆ ಯಾವ ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ಮಟ್ಟದಲ್ಲಿ ಅರ್ಜಿಗಳು ಬಂದಿವೆ ಎಂಬುದು ಗೊತ್ತಾಗುವುದಿಲ್ಲ. ಸಾಮಾನ್ಯವಾಗಿ ಈ ಎಲ್ಲ ಕಾರ್ಯಕ್ರಮಗಳ ಪಟ್ಟಿಯಲ್ಲಿರತಕ್ಕಂಥವರು ಯಾರು ಎಂದರೆ, ಜಿಲ್ಲಾ ಕೇಂದ್ರಗಳಲ್ಲಿರತಕ್ಕಂಥ ಜನರಿಗೆ ಮಾತ್ರ ಇದು ಸಿಗುತ್ತದೆಯೇ ಹೊರತು. ಜನಸಾಮಾನ್ಯರು ಯಾರು ನಿಜವಾಗಿ ಅರ್ಹರಾಗಿರುತ್ತಾರೆ ಯಾರು ನಿಜವಾಗಿ ಫಲಾನುಭವಿಗಳಾಗಬೇಕಾಗಿದ್ದರೆ ಅಂತಹವರಿಗೆ ಇದರಿಂದ ಪ್ರಯೋಜನ ಸಿಗುತ್ತಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಅಧ್ಯಕ್ಷರೇ. ಇದೇ ಸಂದರ್ಭದಲ್ಲಿ ಅಂಚಿನ ಸಾಲ ಹಾಗೂ ಸಹಾಯಧನ ಯೋಜನೆ ಅಡಿಯಲ್ಲಿ ನಿಗಮವು ೧೯೮೭ನೇ ಏಪ್ರಿಲ್‌ನಿಂದ ಜನವರಿ ೧೯೮೮ರ ಅಂತ್ಯದವರೆಗೆ ಸಾಧಿಸಿರುವ ಜಿಲ್ಲಾವಾರು ಪ್ರಗತಿಯ ವಿವರ ಈ ರೀತಿ ಇದೆ. ಕೊಡಗು ಜಿಲ್ಲೆಯಲ್ಲಿ ಗುರಿ ೪೦೦ ಸಾಧನೆ ೨೬೮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುರಿ ೬೦೦ ಸಾಧನೆ ೬೦೭ ಉತ್ತರ ಕನ್ನಡ ಜಿಲ್ಲೆಯಲ್ಲಿ ಗುರಿ ೫೦೦ ಸಾಧನೆ ೪೪೧ ಬೀದರ್ ಜಿಲ್ಲೆಯಲ್ಲಿ ಗುರಿ ೬೦೦ ಸಾಧನೆ ೬೦೩, ಈ ರೀತಿ ಇದೆ. ಅಂದರೆ ನಮ್ಮ ನಾಲ್ಕಾರು ಜಿಲ್ಲೆಗಳಲ್ಲಿ ಗುರಿ ಕಡಿಮೆಯಾಗಿದೆ ಆದರೆ ಸಾಧನೆ ಜಾಸ್ತಿಯಾಗಿದೆ. ಗುರಿ ಜಾಸ್ತಿ ಇರತಕ್ಕಂಥ ಕೋಲಾರ, ಮೈಸೂರು ಮಂಡ್ಯ ಮತ್ತು ಗುಲಬರ್ಗಾ ಜಿಲ್ಲೆಗಳಲ್ಲಿ ಸಾಧನೆ ತೀರಾ ಕಡಿಮೆ ಇದೆ. ಆದುದರಿಂದ ಎಲ್ಲಿ ನಿಗದಿತ ಗುರಿಯನ್ನು ಸಾಧಿಸುತ್ತಾರೆ ಅಂತಹ ಜಿಲ್ಲೆಗಳಿಗೆ ಹೆಚ್ಚಿನ ಗುರಿಯನ್ನು ಕೊಡುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ ಇದೇ ಯೋಜನೆಯಲ್ಲಿ ಪರಿಶಿಷ್ಟವರ್ಗದವರ ಬಗ್ಗೆ ಕೊಡಗು ಜಿಲ್ಲೆಯಲ್ಲಿ ಗುರಿ ೪೦೦ ಸಾಧನೆ ೧೧೧ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುರಿ ೬೦೦ ಸಾಧನೆ ೬೫೨ ಆಗಿರುತ್ತದೆ. ಪರಿಶಿಷ್ಟವರ್ಗಕ್ಕೆ ಸಂಬಂಧಪಟ್ಟಂತೆಯೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುರಿಮೀರಿದ ಸಾಧನೆಯಾಗಿದೆ. ಆದುದರಿಂದ ಈ ಗುರಿಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಜಾಸ್ತಿ ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಇನ್ನು ನೀರಾವರಿ ವಿಚಾರವಾಗಿ ಹೇಳುವುದಾದರೆ ಕೊಳವೆ ಬಾವಿ ಯೋಜನೆ ಅಡಿಯಲ್ಲಿ ಸಾಧಿಸಿದ ಸಾಧನೆಯ ಬಗ್ಗೆ ಹೇಳುವುದಾದರೆ ೧೯೮೭-೮೮ನೇ ಸಾಲಿನಲ್ಲಿ ಪರಿಶಿಷ್ಟ ವರ್ಗದವರಿಗೆ ಕೊಳವೆ ಬಾವಿ ಒದಗಿಸಲು ಹಣ ನೀಡಲಾಗಿದ್ದು ಮೈಸೂರು ಜಿಲ್ಲೆಯಲ್ಲಿ ೬೧ ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು

ಉಳಿದ ೪೩ ಕೊಳವೆ ಬಾವಿಗಳ ಪ್ರಗತಿ ನಡೆಯುತ್ತಿದೆ ಎಂದು ಕೊಟ್ಟಿದ್ದಾರೆ. ಅಂದರೆ ೮೬-೮೭ರಲ್ಲಿ ೩೧ ಕೊಳವೆ ಬಾವಿಗಳನ್ನು ಮಾತ್ರ ತೋಡಿ ಇನ್ನು ೪೩ ಕೊಳವೆ ಬಾವಿಗಳನ್ನು ತೋಡುವ ಕೆಲಸದಲ್ಲಿ ಪ್ರಗತಿ ಸಾಧಿಸುತ್ತಿದ್ದೇವೆ ಎಂದು ಹೇಳಿದ್ದಾರೆ. ಹಾಗಾದರೆ ಈ ಕೊಳವೆ ಬಾವಿಗಳನ್ನು ತೋಡುವುದಕ್ಕೆ ಎಷ್ಟು ದಿವಸ ಬೇಕು ಎಂಬುದನ್ನು ವಿಚಾರ ಮಾಡಬೇಕು. ಅದೇ ರೀತಿ ಈ ಯೋಜನೆಯಲ್ಲಿ ಅತೀ ಮುಖ್ಯವಾಗ ವಿಚಾರವನ್ನು ನಾನು ಕಂಡು ಕೊಂಡಿದ್ದೇನೆ. ಈ ಬಾವಿಗಳನ್ನು ಪೂರ್ಣ ವಿದ್ಯುದೀಕರಣ ಗೊಳಿಸಲು ವಿದ್ಯುಚ್ಛಕ್ತಿ ಮಂಡಳಿಯ ಸಹಕಾರ ಅವಶ್ಯಕ. ಇತ್ತೀಚೆಗೆ ವಿದ್ಯುಚ್ಛಕ್ತಿ ಮಂಡಳಿಯವರು ಅವರಿಗೆ ಬೇಕಾಗುವ ದಾಸ್ತಾನುಗಳ ಕೊರತೆಯನ್ನು ಸರ್ಕಾರದ ಮುಂದಿಡುತ್ತಿದ್ದಾರೆ. ಎಂದು ವರದಿಯಲ್ಲಿ ಹೇಳಿದ್ದಾರೆ ಅಂದರೆ ತಮ್ಮ ಇಲಾಖೆಯವರಿಗೇ ವಿದ್ಯುಚ್ಛಕ್ತಿ ಮಂಡಲಿಯವರು ಸಹಕಾರ ಮಾಡುವುದಿಲ್ಲ ಎಂದರೆ. ಇನ್ನು ಜನಸಾಮಾನ್ಯರ ಪರಿಸ್ಥಿತಿ ಏನು ಎಂಬ ವಿಚಾರವನ್ನು ತಾವು ಮಾಡಬೇಕಾಗುತ್ತದೆ ೧೯೮೭-೮೮ನೇ ಸಾಲಿನಲ್ಲಿ ನಿಗಮವು ೮೫೫ ಕೊಳವೆ ಬಾವಿಗಳಿಗೆ ಎಂಟು ಜಿಲ್ಲೆಗಳಲ್ಲಿ ಹಣ ಬಿಡುಗಡೆ ಮಾಡಬೇಕಾಗಿತ್ತು. ಆದರೆ ಈವರೆಗೆ ಹಣ ಬಿಡುಗಡೆಯಾಗದಿರುವುದರಿಂದ ಈ ವಿಷಯವನ್ನು ಸರಕಾರದ ಗಮನಕ್ಕೆ ತರಲಾಗಿದೆ ಎಂದು ವರದಿಯಲ್ಲಿ ಹೇಳಿದ್ದೀರಿ. ಎಂದರೆ ೧೯೮೭-೮೮ರಲ್ಲಿ ತಮ್ಮ ಇಲಾಖೆಗೆ ಸರಕಾರದಿಂದ ಬರಬೇಕಾದಂಥ ಹಣ ಈ ತನಕ ಅಂದರೆ ಜೂನ್ ತಿಂಗಳ ತನಕ ಸಹ ಬಿಡುಗಡೆ ಆಗದಿರುವಂತಹ ಸಂದರ್ಭದಲ್ಲಿ ಈ ಕಾರ್ಯಕ್ರಮವನ್ನು ತಾವು ಯಾವರೀತಿಯಲ್ಲಿ ಅನುಷ್ಠಾನ ಮಾಡುತ್ತೀರೋ ಗೊತ್ತಿಲ್ಲ ಈ ಒಂದು ವರದಿಯಲ್ಲಿ ತಾವು ತಮ್ಮ ಕಾರ್ಯಕ್ರಮಗಳನ್ನು ಪ್ರಚಾರ ಮಾಡುತ್ತಿದ್ದೀರೇ ಹೊರತು ಇವುಗಳನ್ನು ಅನುಷ್ಠಾನಕ್ಕೆ ತರುವಲ್ಲಿ ನಿಮ್ಮ ಪ್ರಾಮಾಣಿಕ ಪ್ರಯತ್ನದ ಕೊರತೆ ಇದೆ ಎಂಬ ಮಾತನ್ನು ಪ್ರಪ್ರಥಮವಾಗಿ ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಪೌರ ಕಾರ್ಮಿಕರಿಗೆ ಪುನರ್ ವಸತಿ ಕಲ್ಪಿಸುವ ವಿಚಾರವನ್ನು ಹೇಳಿದ್ದಾರೆ. ಅದರಲ್ಲಿ ಕೇಂದ್ರ ಸರಕಾರದ ಯೋಜನೆಯಂತೆ ೩೧-೩-೮೭ರಂದು ಸರಕಾರ ೨೫ ಲಕ್ಷ ರೂಪಾಯಿಗಳನ್ನು ಪೌರಕಾರ್ಮಿಕರ ಪುನರ್‌ವಸತಿಗಾಗಿ ಬಿಡುಗಡೆ ಮಾಡಿದೆ. ಆದರೆ ದಿನಾಂಕ ೬-೯-೮೭ ರಂದು ಈ ಯೋಜನೆಗೆ ಅನುಮೋದನೆ ನೀಡಲಾಗಿದೆ. ಒಂದು ಯೋಜನೆ ಅನುಮೋದನೆ ಆಗಬೇಕಾದರೆ ತಮ್ಮ ಇಲಾಖೆಯಲ್ಲಿ ೬ ತಿಂಗಳು ಆಗಬೇಕಾಗುತ್ತದೆ. ಇದರಿಂದ ತಮ್ಮ ಕಾರ್ಯ ವೈಖರಿ ಅಥವಾ ಕಾರ್ಯ ಶೈಲಿ ಯಾವರೀತಿ ನಡೆಯುತ್ತಿದೆ ಎಂಬುದನ್ನು ನಾವು ಮನಗಾಣ ಬಹುದು.

ಮಾನ್ಯ ಅಧ್ಯಕ್ಷರೇ, ೧೯೮೪ ರಿಂದ ೮೭ರವರೆಗೆ ನಾಗರೀಕ ಹಕ್ಕುಗಳ ಸಂರಕ್ಷಣಾ ಕಾಯ್ದೆ ಅನ್ವಯ ದಾಖಲಾದ ಪ್ರಕರಣಗಳ ಸಂಖ್ಯೆಯನ್ನು ವರದಿಯಲ್ಲಿ ಕೊಡಲಾಗಿದೆ. ಜನತಾ ಸರಕಾರ ಅಧಿಕಾರಕ್ಕೆ ಬಂದಮೇಲೆ ನಡೆದಂಥ ಪ್ರಕರಣಗಳನ್ನು ಕೊಟ್ಟಿದ್ದಾರೆ. ೧೯೮೪ ರಿಂದ ೮೭ರ ತನಕ ಒಟ್ಟು ಮೊಕದ್ದಮೆಗಳು ೬೫೭. ಅದರಲ್ಲಿ ನ್ಯಾಯಾಲಯಕ್ಕೆ ಆರೋಪಣಾ ಪಟ್ಟಿಯನ್ನು ಕಳುಹಿಸಿರುವುದು ೧೩೯೧ ಶಿಕ್ಷೆ ವಿಧಿಸಲ್ಪಟ್ಟ ಪ್ರಕರಣಗಳು ಕೇವಲ ೧೨ ಎಂದರೆ ತಮ್ಮ ಇಲಾಖೆಯ ಬಗ್ಗೆ ಪೋಲೀಸರ ಕಾಳಜಿ ಎಷ್ಟಿದೆ ಎಂಬುದನ್ನು ಇದು ತೋರಿಸುತ್ತದೆ. ಮತ್ತು ನ್ಯಾಯಾಲಯದಲ್ಲಿ ಆಧಾರ ರಹಿತ ಎಂದು ತಿರಸ್ಕರಿಸಿದ ಮೊಕದ್ದಮೆಗಳು ೯೮೧ ಇದಕ್ಕೆ ಬೇಕಾದ ಪುರಾವೆಯನ್ನು ಒದಗಿಸಲು ತಾವು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿಲ್ಲ. ಮತ್ತು ನ್ಯಾಯಾಲಯದಲ್ಲಿ ಇತ್ಯರ್ಥ ಆಗದಿರತಕ್ಕಂಥ ಮೊಕದ್ದಮೆಗಳು ೧೧೭೯, ತನಿಖಾ ಹಂತದಲ್ಲಿರತಕ್ಕಂಥ ಮೊಕದ್ದಮೆಗಳು ೧೦೫೧ ಮತ್ತು ವಿವಿಧ ಕಾರಣಗಳಿಂದ ಇತ್ಯರ್ಥ ಆಗಿರತಕ್ಕಂಥ ಮೊಕದ್ದಮೆಗಳು ೨೪೫ ಇದರ ಅರ್ಥ ಏನು ಎಂದು ಹೇಳಿದರೆ, ಪೋಲೀಸರು ಈ ಇಲಾಖೆಯ ಮೇಲೆ ಹೆಚ್ಚಿನ ಒಂದು ರೀತಿಯ ನಿಗಾ ಇಟ್ಟು ಕೆಲಸ ಮಾಡುತ್ತಿಲ್ಲ. ಸಾಮಾಜಿಕ ನ್ಯಾಯ ಜನರಿಗೆ ಸಿಗುತ್ತಿಲ್ಲ ಎಂದು ಹೇಳಬೇಕಾಗುತ್ತದ. ಇದು ನಮಗೆ ಮನವರಿಕೆಯಾಗುತ್ತದೆ. ತಮ್ಮ ವಾದ ಏನೇ ಇದ್ದರೂ ಸಹ ಇಲ್ಲಿ ಇರತಕ್ಕ ಅಂಕಿಸಂಖ್ಯೆಗಳ ಪ್ರಕಾರ ಕೇವಲ ೧೨ ಜನಗಳು ಮಾತ್ರ ಈ ಅಪರಾಧಕ್ಕಾಗಿ ಶಿಕ್ಷೆ ಅನುಭವಿಸಿದ್ದಾರೆ ತಮ್ಮ ಇಲಾಖೆಯವರು ಯಾವ ರೀತಿ ಕಾರ್ಯನಿರ್ವಹಿಸುತ್ತಿದ್ದಾರೆ, ಪೋಲೀಸರು ಯಾವ ರೀತಿ ಸಹಕಾರ ನೀಡುತ್ತಿದ್ದಾರೆ ಎಂಬುದನ್ನು ಸಹ ನಾವು ಇದರಿಂದ ತಿಳಿದುಕೊಳ್ಳಬೇಕಾಗುತ್ತದೆ. ಇದೇ ವರದಿಯಲ್ಲಿ ತಾವು ಮತ್ತೊಂದು ಅಂಶವನ್ನು ಕೊಟ್ಟಿದ್ದೀರಿ. ಪಾಠಶಾಲೆಯಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಿದ ಒಂದು ಪ್ರಕರಣ ಮಾತ್ರ ವರದಿಯಾಗಿದೆ ಎಂದು ಕೊಟ್ಟಿದ್ದೀರಿ. ಈ ಶಾಲೆಯವರ ಮೇಲೆ ತಾವು ಏನು ಕ್ರಮ ಕೈಗೊಂಡಿದ್ದೀರಿ ಇಂತಹ ಪ್ರಕರಣಗಳು ಇನ್ನೂ ಎಷ್ಟು ನಡೆದಿದೆ ಎಂಬುದನ್ನು ತಾವು ಹೇಳಬೇಕು. ಮತ್ತು ಇದರಲ್ಲಿ ತಾವು ಬೆಂಡಿಗೇರಿ ಮತ್ತು ತತ್ಸೂರುಗಳಲ್ಲಿ ನಡೆದಂತಹ ಪ್ರಕರಣಗಳನ್ನು ಸೇರಿಸಿಲ್ಲ. ಯಾವ ಪ್ರಕರಣಗಳಲ್ಲಿ ಇದನ್ನು ಅಳವಡಿಸಲಾಗಿದೆ ಎಂಬುದನ್ನು ತಾವು ಹೇಳಬೇಕು.

ಮುಖ್ಯವಾಗಿ ದೌರ್ಜನ್ಯ ಪ್ರಕರಣಗಳನ್ನು ತೆಗೆದುಕೊಂಡರೆ ೧೯೮೭ನೇ ಸಾಲಿನಲ್ಲಿ ೨೬೭ ಪ್ರಕರಣಗಳು ವರದಿಯಾಗಿದ್ದು, ಸುಮಾರು ೨೨೯ ಪ್ರಕರಣಗಳು ಹೋದ ವರ್ಷವಿದ್ದವು ಈ ವರ್ಷ ಸ್ವಲ್ಪ ಹೆಚ್ಚಾಗಿದೆ ಎಂದು ತಮ್ಮ ವರದಿಯಲ್ಲಿ ಕಾಣಿಸುತ್ತದೆ. ಇದು ತಮ್ಮ ಇಲಾಖೆಯ ಮುಖ್ಯ ಸಾಧನೆ. ದೌರ್ಜನ್ಯಗಳು ರಾಜ್ಯದಲ್ಲಿ ಹೋದ ವರ್ಷಕ್ಕಿಂತ ಈ ವರ್ಷ ಹೆಚ್ಚಾಗಿವೆ ಎಂದು ಹೇಳುವಂತಹ ರೀತಿಯಲ್ಲಿ ತಾವು ಬರೆದಿದ್ದೀರಿ ಇದು ತಮ್ಮ ಸಾಧನೆ ಎನ್ನತಕ್ಕಂಥಾ ಮಾತನ್ನು ನಾನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಇನ್ನೂ ಬಹಳ ಮುಖ್ಯವಾದ ವಿಚಾರ ಹೇಳುವುದಾದರೆ ಈ ಒಂದು ಗಿರಿಜನರ ಅಭಿವೃದ್ಧಿ ಯೋಜನೆಯಲ್ಲಿ ಹಿಂದುಳಿದ ವರ್ಗದವರಿಗೆ ಆದ್ಯತೆ ಕೊಟ್ಟಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರತಕ್ಕಂಥ ಬುಡಕಟ್ಟು ಜನಾಂಗದವರು ಯಾರ್ಯಾರು ಇದ್ದಾರೆ ಅವರನ್ನೆಲ್ಲಾ ಈ ಹರಿಜನ ಮತ್ತು ಗಿರಿಜನರ ಗುಂಪಿಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಇನ್ನು ೧೯೮೬-೮೭ನೇ ಸಾಲಿನಲ್ಲಿ ಹರಿಜನ ಮತ್ತು ಗಿರಿಜನರ ಅಭಿವೃದ್ಧಿ ಉಪಯೋಜನೆಯಡಿಯಲ್ಲಿ ಸಾಧಿಸಿದ ಪ್ರಗತಿಯ ಬಗ್ಗೆ ನಾನು ಹೇಳುವುದಾದರೆ ಮೀನುಗಾರಿಕೆ ಇಲಾಖೆಯಿಂದ ಖರ್ಚು ಮಾಡಿ ಎಂದು ೫ ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೆ ಖರ್ಚು ಮಾಡಿರುವುದು ಕೇವಲ ೩.೯೫ ಲಕ್ಷ ರೂಪಾಯಿಗಳು ಮಾತ್ರ. ಅದೇ ರೀತಿ ಸಹಕಾರ ಇಲಾಖೆಗೆ ೫೧.೭೧ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ ಖರ್ಚು ಮಾಡಿರುವುದು ಕೇವಲ ೨೯.೯೫ ಲಕ್ಷ ರೂಪಾಯಿಗಳು ಮಾತ್ರ. ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೊಟ್ಟಿದ್ದ ಹಣ ೩೨೨.೫೦ ಲಕ್ಷ ರೂಪಾಯಿಗಳಲ್ಲಿ ೩೦೦ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. ಅರಣ್ಯ ಇಲಾಖೆ ಮತ್ತು ಭೂಸಂರಕ್ಷಣೆಗೆ ೩೩.೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ ೨೫.೮೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇನ್ನು ಕುಡಿಯುವ ನೀರಿನ ಸಲುವಾಗಿ ೨೩.೩೫ ಲಕ್ಷ ರೂಪಾಯಿಗಳು ಕೊಟ್ಟಿದ್ದರೆ ೨೩.೨೪ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ, ಇವರು ಎಲ್ಲಾ ಹಂತಗಳಲ್ಲಿ ವಿಫಲರಾಗಿದ್ದಾರೆ ಅದೇ ರೀತಿಯಲ್ಲಿ ೧೯೮೭-೮೮ನೇ ಸಾಲಿನಲ್ಲಿ ಹರಿಜನ ಮತ್ತು ಗಿರಿಜನರ ಅಭಿವೃದ್ಧಿ ತೆಗೆದುಕೊಂಡರೆ ಒದಗಿಸಿದ್ದ ಹಣ ೭೧.೪೦ ಲಕ್ಷ ರೂಪಾಯಿಗಳು, ಖರ್ಚು ಮಾಡಿದ್ದು ೪೬.೬೭ ಲಕ್ಷ ರೂಪಾಯಿಗಳು ಮಾತ್ರ. ಅದೇ ರೀತಿ ಭೂಸಾರ ಸಂರಕ್ಷಣೆಗೆ ೫೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೆ ೩೧.೩೫ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ನೀರಾವರಿ ಯೋಜನೆಗೆ ೨೦೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೆ ಖರ್ಚು ಮಾಡಿರುವುದು ಕೇವಲ ೧೩೯.೮೬ ಲಕ್ಷ ರೂಪಾಯಿಗಳು ಮಾತ್ರ. ಇದಕ್ಕಿಂತ ಹೆಚ್ಚಿಗೆ ಇಲ್ಲ. ಎಲ್ಲಾ ಹಂತಗಳಲ್ಲಿ ಯಾವುದೇ ಒಂದು ಕಾರ್ಯಕ್ರಮವನ್ನು ಮಾಡುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಮತ್ತು ಕೊಟ್ಟ ಹಣವನ್ನು ಖರ್ಚು ಮಾಡುವಲ್ಲಿ ಸಹ ಸಂಪೂರ್ಣವಾಗಿ ವಿಫಲರಾಗಿದ್ದಾರೆ, ಇದನ್ನು ನೋಡಿದರೆ ನನಗನಿಸುತ್ತದೆ ನಿಮ್ಮ ಇಲಾಖೆಯ ಅಧಿಕಾರಿಗಳಲ್ಲಿ ಕೋ ಆರ್ಡಿನೇಶನ್ ಇಲ್ಲ. ಜನಗಳಿಗೆ, ಫಲಾನುಭವಿಗಳಿಗೆ ಎಲ್ಲಿ ಅರ್ಜಿ ಹಾಕಬೇಕು, ಯಾರ ಹತ್ತಿರ ಹೋಗಬೇಕು ಯಾವ ಅಧಿಕಾರಿಯನ್ನು ಸಂಪರ್ಕ ಮಾಡಬೇಕು ಅಧಿಕಾರಿ ಎಲ್ಲಿದ್ದಾರೆಂದು ಯಾರಿಗೂ ಗೊತ್ತಿಲ್ಲ ಆ ಅಧಿಕಾರಿ ತಾಲ್ಲೂಕು ಮಟ್ಟದಲ್ಲಿ ಇದ್ದಾರೋ ಜಿಲ್ಲಾ ಮಟ್ಟದಲ್ಲಿ ಇದ್ದಾರೋ ಯಾರು ಹೇಳುವವರೇ ಇಲ್ಲ ಸಾಕಷ್ಟು ಪ್ರಚಾರ ಇಲ್ಲ. ನಾನು ಒಂದು ಉದಾಹರಣೆ ಹೇಳುತ್ತೇನೆ ನಿಮ್ಮಲ್ಲಿ ಹರಿಜನ ಮತ್ತು ಗಿರಿಜನ ಜಾತಿಯ ಎಷ್ಟು ಕುಟುಂಬಗಳು ಇವೆ ಎನ್ನುವ ಸರಿಯಾದ ಅಂಕಿ ಅಂಶಗಳು ಸಹ ಇಲ್ಲವೆಂದು ನಾನು ಹೇಳುತ್ತೇನೆ. ಇದ್ದರೆ ದಯಮಾಡಿ ಹೇಳಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಹಸಿರು ಕಾರ್ಡನ್ನು ಕೊಟ್ಟಿದ್ದೀರಿ. ಆದರೆ ಮನೆ ನಂಬರು ಗೊತ್ತಿಲ್ಲ ಹೆಸರು ಗೊತ್ತಿಲ್ಲ, ಆ ಜನ ಯಾರೆಂದು ಗೊತ್ತಿಲ್ಲ, ಏನೇನೂ ತಮ್ಮ ಇಲಾಖಾಧಿಕಾರಿಗಳಿಗೆ ಗೊತ್ತಿಲ್ಲ. ನಾವು ನಮ್ಮ ಜಿಲ್ಲಾ ಪರಿಷತ್ತಿನಲ್ಲಿ ಕಳೆದ ಸಾರಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ೫ ಕುಟುಂಬಗಳನ್ನು ಜಿಲ್ಲೆಯಲ್ಲಿ ಗುರುತಿಸಿದ್ದೇವೆ. ನಾಲ್ಕು ತಿಂಗಳು ಸತತವಾಗಿ ಜಿಲ್ಲಾ ಪರಿಷತ್ತಿನವರು ಪ್ರಯತ್ನ ಮಾಡಿದರು ಸಹ ತಮ್ಮ ಇಲಾಖಾಧಿಕಾರಿಗಳು ಏನೂ ಕೆಲಸ ಮಾಡಲಿಲ್ಲ. ಗುರುತಿಸುವ ಜವಾಬ್ದಾರಿ ಯಾವ ಇಲಾಖೆಗೆ ಸೇರಿದ್ದು. ನಿಮ್ಮ ಇಲಾಖಾಧಿಕಾರಿಗಳಿಂದ ಯಾವುದೇ ಕಾರ್ಯಕ್ರಮ ತೆಗೆದುಕೊಂಡರೂ ಸಹ ಸುವ್ಯವಸ್ಥಿತವಾಗಿ ಆಗುತ್ತಿಲ್ಲವೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ವಿಧವಾ ಮಾಸಾಶನವನ್ನು ಕೊಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಇದರಲ್ಲಿ ಪ್ರಾಮಾಣಿಕರು ಯಾರಿರುತ್ತಾರೋ ಅವರಿಗೆ ಸಿಕ್ಕುವುದಿಲ್ಲ ಯಾರು ಹೆಂಚಿನ ಮನೆಯಲ್ಲಿರುತ್ತಾರೋ ಯಾರು ಉಪ್ಪರಿಗೆ ಮನೆಯಲ್ಲಿರುತ್ತಾರೋ ಅಂತಹವರಿಗೆ ಕೊಟ್ಟಿದ್ದಾರೆ. ಯಾರು ಹುಲ್ಲಿನ ಮನೆಯಲ್ಲಿರುತ್ತಾರೋ ಅವರು ವಿಧವಾ ಮಾಸಾಶನಕ್ಕೆ ಅರ್ಜಿ ಹಾಕಿದರೆ ನೀನು ನಿಮ್ಮ ಮಗನ ಜೊತೆ

ಯಲ್ಲಿದ್ದೀಯಾ ನೀನು ನಿಮ್ಮ ಮಗಳ ಜೊತೆಯಲ್ಲಿದ್ದೀಯಾ ನಿಮಗೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿ ಕೊಟ್ಟಿಲ್ಲ. ತಾವೊಂದು ಷರತ್ತು ಹಾಕಿದ್ದೀರಿ. ಅದೇನೆಂದರೆ ೧೫೦೦ ರೂಪಾಯಿಗಳಿಗಿಂತ ಹೆಚ್ಚು ವಾರ್ಷಿಕ ವರಮಾನವಿರಬಾರದೆಂದು. ಆಜನ ಮಕ್ಕಳೊಟ್ಟಿಗೆ ಇರಬಾರದೆಂದು ಇದೆ.

ಮಾನ್ಯ ಅಧ್ಯಕ್ಷರೇ, ಅಂಗನವಾಡಿ ಕೇಂದ್ರಗಳ ಬಗ್ಗೆ ಒಂದೆರಡು ವಿಚಾರಗಳನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ. ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆಂದು ಸರ್ಕಾರದ ವತಿಯಿಂದ ಪೌಷ್ಟಿಕ ಆಹಾರವನ್ನು ಕೊಡಲಾಗುತ್ತಿದೆ. ಈ ಪೌಷ್ಟಿಕ ಆಹಾರವು ತುಂಬಾ ಕೆಳಮಟ್ಟದ್ದಾಗಿರುತ್ತದೆ. ಈ ಪೌಷ್ಟಿಕ ಆಹಾರವನ್ನು ಆಗ್ರೋ ಪ್ರಾಡಕ್ಟ್ ಸಂಸ್ಥೆಯವರು ತಯಾರು ಮಾಡುತ್ತಿದ್ದಾರೆ. ಈ ಪೌಷ್ಟಿಕ ಆಹಾರದ ಪ್ಯಾಕೆಟ್ ಮೇಲೆ ಯಾವಾಗ ತಯಾರಾಯಿತು, ಎಷ್ಟು ದಿನದೊಳಗೆ ಇದನ್ನು ಉಪಯೋಗ ಮಾಡಬೇಕೆಂಬ ಬಗ್ಗೆ ಸೂಚನೆಗಳನ್ನು ಕೊಟ್ಟಿರುವುದಿಲ್ಲ. ಈ ಆಹಾರದ ಪೊಟ್ಟಣವನ್ನು ತಮಗೆ ಕಳುಹಿಸಿ ಕೊಡುತ್ತೇನೆ. ತಾವು ಅದನ್ನು ನೋಡಬಹುದು. ಇಂಥ ಕಳಪೆ ಮಟ್ಟದ ಆಹಾರವನ್ನು ಮಕ್ಕಳಿಗೆ ಕೊಟ್ಟರೆ ಮಕ್ಕಳ ಪರಿಸ್ಥಿತಿ ಏನಾಗುತ್ತದೆ? ಸಾಮಾನ್ಯವಾಗಿ ಇಂಥ ಆಹಾರಗಳನ್ನು ತಯಾರು ಮಾಡಿದ ೬೦ ದಿನದೊಳಗೆ ತಿನ್ನಬೇಕೆನ್ನುವ ವಿಚಾರ ಇದ್ದರೂ ಆಹಾರದ ಎಕ್ಸ್‌ಪೈರಿ ಡೇಟ್ ಹಾಕದೆ ಈ ಆಹಾರವನ್ನು ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡಲಾಗುತ್ತಿದೆ.

ಶ್ರೀ ಜಿ. ಬಸವಣ್ಣಪ್ಪ.— ಯಾವ ಅಂಗನವಾಡಿ ಕೇಂದ್ರದಲ್ಲಿ ಈ ತರಹ ಕಳುಹಿಸಲಾಗಿದೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.— ಈ ಆಹಾರವನ್ನು ಆಗ್ರೋ ಪ್ರಾಡಕ್ಟ್ಸ್‌ನವರು ತಯಾರು ಮಾಡುತ್ತಿದ್ದಾರೆ. ಈ ಆಹಾರದ ಪೊಟ್ಟಣದ ಮೇಲೆ ಮ್ಯಾನುಫ್ಯಾಕ್ಚರಿಂಗ್ ಡೇಟ್ ಮತ್ತು ಎಕ್ಸ್‌ಪೈರಿ ಡೇಟನ್ನು ಹಾಕಿರುವುದಿಲ್ಲ. ಅದಕ್ಕೆ ಕಾರಣ ಏನು? ಈ ಆಹಾರವನ್ನು ಯಾವ ಉದ್ದೇಶಕ್ಕಾಗಿ ಸರಬರಾಜು ಮಾಡಲಾಗುತ್ತಿದೆಯೆಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎಂ. ರಾಮಪ್ಪ.— ಆಹಾರ ಪೊಟ್ಟಣವನ್ನು ಮಾನ್ಯ ಮಂತ್ರಿಯವರಿಗೆ ಕಳುಹಿಸಿಕೊಡಿ. ಅವರೂ ಅದರ ರುಚಿ ನೋಡಲಿ.

ಶ್ರೀ ಜಿ. ಬಸವಣ್ಣಪ್ಪ.—ನೋಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಅಮೇಲೆ ಶಿವಮೊಗ್ಗ ಜಿಲ್ಲೆಯ ಭದ್ರಾವತಿಯ ಅಂಗನವಾಡಿ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದ ಕುಮಾರಿ ನಾಗವೇಣಿ ಎನ್ನುವವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರು ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ೪ ಪುಟಗಳಷ್ಟು ಪತ್ರವನ್ನು ಬರೆದು ನನ್ನ ಆತ್ಮಹತ್ಯೆಗೆ ಅಂಗನವಾಡಿಯ ಮುಖ್ಯಾಧಿಕಾರಿಯೇ ಕಾರಣವೆಂದು ತಿಳಿಸಿದ್ದಾರೆ. ಈ ಪತ್ರವನ್ನು ಮಾನ್ಯ ಅಧ್ಯಕ್ಷರಿಗೆ ಕಳುಹಿಸಲಿಕ್ಕೆ ನಾನು ಇಷ್ಟಪಡುತ್ತೇನೆ. ಇವರು ಮಾಡಿಕೊಂಡಿರುವ ಆತ್ಮಹತ್ಯೆಗೆ ಯಾರು ಕಾರಣ ಎಂಬುದನ್ನು ತನಿಖೆ ಮಾಡಬೇಕು. ಈಗಾಗಲೇ ಇದರ ಬಗ್ಗೆ ತನಿಖೆ ಮಾಡುತ್ತೇವೆಂದು ಹೇಳಿ ಕಣ್ಣೊರೆಸುವ ಕೆಲಸವನ್ನು ಮಾಡಿದ್ದಾರೆ. ಆದ್ದರಿಂದ, ಮಾನ್ಯ ಸಚಿವರು ಇದರ ಕಡೆ ಗಮನ ಹರಿಸಿ ಪ್ರಾಮಾಣಿಕವಾಗಿ ತನಿಖೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಂಗನವಾಡಿ ಕಾರ್ಯಕರ್ತೆಯರು ಬಹಳ ಕಷ್ಟ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಆಮೇಲೆ ಮಾನ್ಯ ಅಧ್ಯಕ್ಷರೇ, ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳು ಇಲ್ಲ. ಅಂಗನವಾಡಿ ಕೇಂದ್ರಗಳನ್ನು ನೋಡಿಕೊಳ್ಳುವುದಕ್ಕೆ ಇಡೀ ನಮ್ಮ ರಾಜ್ಯಕ್ಕೆ ಕೇವಲ ೯ ಲಕ್ಷ ರೂಪಾಯಿಗಳನ್ನು ಮಾತ್ರ ಸರ್ಕಾರ ಬಿಡುಗಡೆ ಮಾಡಿದೆ. ಈ ೯ ಲಕ್ಷ ರೂಪಾಯಿಗಳಲ್ಲಿ ಇಡೀ ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳು ಯಾವ ರೀತಿ ನಡೆಯುವುದಕ್ಕೆ ಸಾಧ್ಯ? ಮೊದಲು ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳನ್ನು ಒದಗಿಸುವ ಕಡೆ ಸರ್ಕಾರ ಗಮನ ಹರಿಸಬೇಕು. ಎಷ್ಟೋ ಅಂಗನವಾಡಿ ಕೇಂದ್ರಗಳು ಶಾಲೆಗಳ ಆವರಣಗಳಲ್ಲಿ ದೇವಸ್ಥಾನದ ಜಗಲಿಗಳ ಮೇಲೆ, ಬಸ್ ಸ್ಟ್ಯಾಂಡ್‌ಗಳಲ್ಲಿ ನಡೆಯುತ್ತಿವೆ. ಅಂಗನವಾಡಿ ಕೇಂದ್ರಗಳಿಗೆ ವ್ಯವಸ್ಥಿತವಾಗಿ ಕಟ್ಟಡಗಳನ್ನು ಕಟ್ಟಿಸುವಂಥ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ತಮ್ಮ ಮುಖಾಂತರ ಕೇಳಿಕೊಂಡು ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ನನಗೆ ೨೫ ನಿಮಿಷಗಳಾದರೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀಮತಿ ಮುಖ್ತರ್ ಉನ್ನೀಸಾ.—ನನಗೂ ನೀವು ೨೫ ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಇಬ್ಬರಿಗೂ ೧೭ ಮಿನಿಟ್ ೧೫ ಮಿನಿಟ್ ಅವಕಾಶ ಕೊಡುತ್ತೇನೆ.

† ಶ್ರೀಮತಿ ಲೀಲಾದೇವಿ ಆರ್, ಪ್ರಸಾದ್ (ಅಥಣಿ).—ಸನ್ಮಾನ್ಯ ಅಧ್ಯಕ್ಷರೇ, ಸಮಾಜ ಕಲ್ಯಾಣ ಇಲಾಖೆ ಮತ್ತು ಇದರ ಜೊತೆಯಲ್ಲಿ ಟ್ರಾನ್ಸ್‌ಪೋರ್ಟ್ ಇಲಾಖೆ ಬಗ್ಗೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದೀರಿ. ನಿನ್ನೆಯಿಂದ ಟ್ರಾನ್ಸ್‌ಪೋರ್ಟ್ ಬಗ್ಗೆ ಸಾಕಷ್ಟು ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ನಾನು ಟ್ರಾನ್ಸ್‌ಪೋರ್ಟ್ ಇಲಾಖೆ ಮೇಲೆ ಮಾತನಾಡುತ್ತಾ ಒಂದೆರಡು ಮೂರು ಸಲಹೆಗಳನ್ನು ಮಾನ್ಯ ಮಂತ್ರಿಯವರಿಗೆ ತಮ್ಮ ಮೂಲಕ ಕೊಡುವುದಕ್ಕೆ ಬಯಸುತ್ತೇನೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಾಕಷ್ಟು ಬಸ್‌ಗಳ ವ್ಯವಸ್ಥೆಯಾಗಿದೆ ಎಂದರೆ ತಪ್ಪಾಗಲಾರದು. ಮೊದಲು ನನ್ನ ಮತ ಕ್ಷೇತ್ರಕ್ಕೆ ಬಸ್ಸಿನ ವ್ಯವಸ್ಥೆಯೇ ಇರಲಿಲ್ಲ. ಈ ಮೂರು ವರ್ಷದಲ್ಲಿ ೩ ಬಸ್‌ಗಳನ್ನು ನಮ್ಮ ಮತ ಕ್ಷೇತ್ರಕ್ಕೆ ಮಾನ್ಯ ಮಂತ್ರಿಯವರು ಹಾಕಿ ಕೊಟ್ಟಿದ್ದಾರೆ, ಪ್ರಯಾಣಿಕರ ಬಗ್ಗೆ ನಾನು ಒಂದೆರಡು ಸಲಹೆಗಳನ್ನು ಕೊಡುವುದೇನೆಂದರೆ, ರಾತ್ರಿ ಹೊತ್ತು, ಸ್ಪೆಷಲ್ ಲಕ್ಸುರಿ ಬಸ್‌ಗಳಲ್ಲಿ ಬಹಳ ಜನರು ಪ್ರಯಾಣ ಮಾಡುತ್ತಾರೆ. ರಾತ್ರಿ ಪ್ರಯಾಣ ಮಾಡುವ ಸಂದರ್ಭದಲ್ಲಿ ಮಹಿಳೆಯರಿಗೆ ಬಹಳ ಕಷ್ಟವಾಗುತ್ತದೆ. ಏಕೆಂದರೆ, ಬಸ್ ಸ್ಟ್ಯಾಂಡ್‌ಗಳಲ್ಲಿ ಸರಿಯಾದ ಶೌಚಾಲಯಗಳು ಇರುವುದಿಲ್ಲ. ಚಿತ್ರದುರ್ಗ, ತುಮಕೂರು, ಹಾವೇರಿ, ಹುಬ್ಬಳ್ಳಿಗಳಲ್ಲಿ ಒಳ್ಳೆಯ ರೀತಿಯಲ್ಲಿ ಲೆಟ್ರಿನ್‌ಗಳನ್ನು ಕಟ್ಟಿಸಿದ್ದಾರೆ. ಆದರೆ, ಅವುಗಳ ಪರಿಸ್ಥಿತಿ ಏನಾಗಿದೆ ಎಂದರೆ, ಅವುಗಳನ್ನು ಸರಿಯಾಗಿ ಮೇನ್‌ಟೇನ್ ಮಾಡುತ್ತಿಲ್ಲ. ಒಳಗಡೆಗೆ ಹೋಗುವುದಕ್ಕೇ ಆಗುವುದಿಲ್ಲ. ಚಿತ್ರದುರ್ಗದಲ್ಲಿ ಸುಮಾರು ೬ ತಿಂಗಳಿಂದ ಅಲ್ಲಿರುವ ಲೇಟ್ರಿನ್‌ಗಳಲ್ಲಿ ವಾಚ್‌ಮನ್ ಸಂಜೆಯಾದ ಮೇಲೆ ಇರುವುದೇ ಇಲ್ಲ. ಬೆಳಗಿನವರೆಗೆ ಬರುವುದೇ ಇಲ್ಲವಂತೆ. ನಾನು ಮಂತ್ರಿಗಳಿಗೆ ಈ ಬಗ್ಗೆ ಬರೆದು ಡಿಪೋ ಮ್ಯಾನೇಜರ್‌ಗೂ ಕೇಳಿದ್ದಕ್ಕೆ ಪಾಪ ಹೆಣ್ಣು ಆಳು ಕತ್ತಲಾದ ಮೇಲೆ ಇರಿ ಎಂದು ಹೇಗೆ ಹೇಳುವುದು ಎಂದರು. ಇದು ತಪ್ಪು ಅಭಿಪ್ರಾಯ. ಕೊನೇಪಕ್ಷ ಯಾವನಾದರೂ ಒಬ್ಬ ಸೌಮ್ಯ ರಕ್ಷಕಾವಲುಗಾರನನ್ನು ರಾತ್ರಿವೇಳೆ ಹಾಕಬೇಕು, ಮಂತ್ರಿಗಳು ಈ ಬಗ್ಗೆ ಗಮನಹರಿಸಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇದರ ಜೊತೆಗೆ ಮಧ್ಯೆ ರಾತ್ರಿ ಓಡುವ ಬಸ್‌ಗಳು ಎಲ್ಲಿ ನಿಲ್ಲಬೇಕೋ ಅಲ್ಲಿ ನಿಲ್ಲದೆ, ಪ್ರಯಾಣಿಕರಿಗೆ ಅನುಕೂಲವಾದ ಕಡೆ ನಿಲ್ಲದೆ ಯಾವುದೋ ಗುಡಿಸಲುಗಳಿರುವ ಎಳನೀರು ಅದೂ ಇದೂ ಸಿಕ್ಕುವ ಕಡೆ ನಿಲ್ಲಿಸುತ್ತಾರೆ. ಪಾಪ, ಕತ್ತಲಲ್ಲಿ ಹೆಣ್ಣುಮಕ್ಕಳು ಎಲ್ಲಿ ಹೋಗಬೇಕು. ಡ್ರೈವರ್‌ಗಳಾದವರು ಹೆಣ್ಣುಮಕ್ಕಳೂ ಸಹ ಬಸ್‌ಗಳಲ್ಲಿ ಪ್ರಯಾಣ ಮಾಡುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಕೆಎಸ್‌ಆರ್‌ಟಿಸಿ ಬಸ್ ತಯಾರು ಮಾಡುವವರಾಗಲೀ ಅವನ್ನು ಕೊಂಡುಕೊಳ್ಳುವವರಾಗಲೀ ಬಸ್‌ನಲ್ಲಿ ಪ್ರಯಾಣ ಮಾಡುವುದಿಲ್ಲ. ಒಂದು ಪಕ್ಷ ಅವರು ಪ್ರಯಾಣ ಮಾಡಿದ್ದರೆ ಸೈಡ್ ಕಿಟಕಿಗಳಿಗೆ ಈಗಿರುವಂಥ ಹ್ಯಾಂಡಲ್ಸ್‌ನ್ನು ಹಾಕಿಸುತ್ತಿರಲಿಲ್ಲ. ಡ್ರೈವರ್ ಬ್ರೇಕ್ ಹಾಕಿದಾಗ ಅವು ಪ್ರಯಾಣಿಕರ ತಲೆಗೆ ಹೊಡೆಯುತ್ತವೆ. ಇವನ್ನು ಬದಲಿಸಿ ಎಂದು ನಾನು ಮಂತ್ರಿಗಳಿಗೆ ಬರೆದೆ, ಇವನತ್ತಿನವರೆಗೂ ಏನೂ ಆಗಲಿಲ್ಲ. ಕಿಟಕಿ ತಲೆಗೇ ಬಡಿಯುತ್ತವೆಂದರೂ ಗಮನಕೊಟ್ಟಿಲ್ಲ. ದಪ್ಪವಾಗಿರುವ ಆ ಹ್ಯಾಂಡಲ್ಸ್ ತಲೆಗೆ ಬಡಿದರೆ ತಲೆ ಒಡೆದೇ ಹೋಗುತ್ತದೆ.

ಒಬ್ಬ ಮಾನ್ಯ ಸದಸ್ಯರು.—ನಿಮ್ಮ ತಲೆ ಚೆನ್ನಾಗಿಯೇ ಇದೆಯಲ್ಲ ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಹ್ಯಾಂಡಲ್‌ಗಿಂತ ನನ್ನ ತಲೆ ಗಟ್ಟಿಯಾಗಿದೆ. ಅದರ ಜೊತೆಯಲ್ಲಿ ಗಡಿನಾಡು ಪ್ರದೇಶದಲ್ಲಿ ಇಂಟರ್‌ಸ್ಟೇಟ್ ಪರ್ಮಿಟ್‌ಗಳ ವಿಚಾರವಾಗಿ ಹೇಳುವುದಾದರೆ ನಮ್ಮ ಕಡೆ ಪಕ್ಕದ ಮಹಾರಾಷ್ಟ್ರ ಬಸ್‌ಗಳು ನಮ್ಮ ಗಡಿಯೊಳಕ್ಕೂ ನಮ್ಮವು ಅವರ ಗಡಿಯೊಳಕ್ಕೂ ಹೋಗಿಬರುವುದುಂಟು. ಆದರೆ ಅದರ ಬಸ್‌ಗಳು ನಮ್ಮ ರಾಜ್ಯದ ತುಂಬಾ ಒಳಕ್ಕೇ ಬರುತ್ತವೆ, ನಮ್ಮವು ಮಾತ್ರ ಮಹಾರಾಷ್ಟ್ರದ ಗಡಿಯೊಳಕ್ಕೆ ಹೋಗುತ್ತಿಲ್ಲ, ಇದರಿಂದ ಪ್ರಯಾಣಿಕರಿಗೆ ತೊಂದರೆಯಾಗಿದೆ. ಹಿಂದೆ ಈ ಬಗ್ಗೆ ಸಚಿವರನ್ನು ನಾನು ಕೇಳಿದಾಗ ಅವರ ಬಸ್‌ಗಳು ಎಷ್ಟು ಕಿಲೋ ಮೀಟರ್ ಒಳಕ್ಕೆ ಬರುತ್ತವೆಯೋ ನಮ್ಮವೂ ಅಷ್ಟು ದೂರ ಹೋಗುತ್ತವೆ ಎಂದಿದ್ದರು. ಈ

ವರ್ಷದಲ್ಲಂತೂ ಅವರು ಬಳಸುವ ಕಿಲೋಮೀಟರ್‌ಗಳಷ್ಟು ನಮ್ಮವು ಬಳಸುತ್ತಿಲ್ಲ. ಇನ್ನು, ಹೆಣ್ಣು ಮಕ್ಕಳು ಬಸ್‌ನಲ್ಲಿ ಪ್ರಯಾಣ ಮಾಡುವಾಗ ಅವರ ಪಕ್ಕದಲ್ಲಿ ಕುಡುಕರು ಕುಳಿತುಕೊಂಡರೆ ಅವರ ಗತಿಯೇನು ? ಡ್ರೈವರ್‌ಗಳು ಕುಡಿದು ಬಸ್ ಓಡಿಸುವುದನ್ನು ಬಿಡಿ, ಅದಕ್ಕೆ ಕೊನೆಯಿಲ್ಲ ಬೇರೆ ಯುವರು ಪಕ್ಕದಲ್ಲಿ ಕುಡಿದು ಕೂತರೆ ಕಂಡಕ್ಟರ್‌ಗೆ ರಿಕ್ವೆಸ್ಟ್ ಮಾಡಿಕೊಂಡರೆ ಅವರು ಎಬ್ಬಿಸಬೇಕು. ಕೆಲವು ಚಾಲಕರು ಒಳ್ಳೆಯವರಿದ್ದಾರೆ ಅವರು ಸೇಫಾಗಿ ಡ್ರೈವ್ ಮಾಡಿ ಮುಟ್ಟಿಸುತ್ತಾರೆ. ಆದರೆ ಇನ್ನು ಕೆಲವರು ಬಸ್‌ನ್ನು ಡ್ರೈವ್ ಮಾಡುವಾಗ ಕುಡಿದುಬಿಟ್ಟಿರುತ್ತಾರೆ. ಏರೋಪ್ಲೇನ್ ನಡೆಸುವ ಪೈಲಟ್ ಪ್ಲೇನ್ ಹತ್ತುವುದಕ್ಕೆ ಮುಂಚೆ ಅವನು ಕುಡಿದಿದ್ದಾನಾ ಇಲ್ಲವಾ ಎಂದು ಪರೀಕ್ಷಿಸಿ ಕೊಳ್ಳುವ ವ್ಯವಸ್ಥೆ ಇದೆ. ಅದರಂತೆ ಬಸ್ ಡ್ರೈವರ್ಸ್‌ಗೂ ಏನಾದರೂ ಪರೀಕ್ಷೆ ಮಾಡುವುದು ಒಳ್ಳೆಯದು. ಅಲ್ಲದೆ ಅವರು ದಾರಿಮಧ್ಯದಲ್ಲಿ ಕುಡಿಯದಂತೆ ನೋಡಿಕೊಳ್ಳಬೇಕು.

ಶ್ರೀ ಬಿ. ಬಿ. ನಿಂಗಯ್ಯ.—ಡ್ರೈವರ್ ಸೀಟ್ ಪಕ್ಕದಲ್ಲಿಟ್ಟುಕೊಂಡು ಕುಡಿದರೆ ಏನು ಮಾಡುತ್ತೀರಾ ?

ಶ್ರೀ ಲೀಲಾದೇವಿ ಆರ್, ಪ್ರಸಾದ್.—ಅಧ್ಯಕ್ಷರೇ ನನಗೆ ನೀವು ಕೊಟ್ಟಿರುವುದೇ ೧೦ ನಿಮಿಷ. ಅಂಥಾದ್ದರಲ್ಲಿ ಇವರು ಯಾಕೆ ಡಿಸ್ಟರ್ಬ್ ಮಾಡಬೇಕು ? ಹೀಗಾದರೆ ನೀವು ಮತ್ತೆ ೧೦ ನಿಮಿಷ ಹೆಚ್ಚಾಗಿ ಕೊಡಬೇಕು. ಅಧ್ಯಕ್ಷರೇ, ಕೆಎಸ್‌ಆರ್‌ಟಿಸಿಯಲ್ಲಿ ಮಾನ್ಯ ಮಂತ್ರಿಗಳು ಬಂದ ಮೇಲೆ ಕೆಲವು ಸುಧಾರಣೆಗಳಾಗಿವೆ. ನಮ್ಮ ಸರ್ಕಾರ ಬಂದ ಮೇಲೆ ರಿಮೋಟ್ ಪ್ರದೇಶದಲ್ಲೂ ಕೂಡ ಬಸ್‌ಗಳು ಓಡುತ್ತಿವೆ. ಹೆಚ್ಚಿಗೆ ಹೊಸ ಬಸ್‌ಗಳನ್ನು ಓಡಿಸುತ್ತಿದ್ದಾರೆ. ಸಂಸ್ಥೆಯು ಲಾಭದಾಯಕವಾದ ದಾರಿಗೆ ಹೋಗುತ್ತದೆ. ಇದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇನ್ನು ಬಹಳ ಮುಖ್ಯವಾದ ನಮ್ಮ ಇಲಾಖೆ ಬಗ್ಗೆ ಮಾತನಾಡುತ್ತೇನೆ. ಇವತ್ತು ಸಮಾಜ ಕಲ್ಯಾಣ, ಮಹಿಳೆ ಮತ್ತು ಮಕ್ಕಳ ಕಲ್ಯಾಣ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆ—ಇಂಥಾ ಮೂರ್ನಾಲ್ಕು ಬೇಡಿಕೆಗಳ ಮೇಲೆ ಮಾತಾಡಲು ಕೇವಲ ೧೫ ನಿಮಿಷ ಟೈಮ್ ಕೊಟ್ಟರೆ ಹೇಗೆ ? ಕರ್ನಾಟಕದಲ್ಲಿ ಈ ಇಲಾಖೆಗೆ ೫ ಕೋಟಿಯಲ್ಲಿ ಎರಡೂವರೆ ಕೋಟಿ ಹೆಂಗಸರು, ೨೫.೦೫ ಲಕ್ಷ ಗಂಡುಮಕ್ಕಳು ಮತ್ತು ೧೨ ಲಕ್ಷ ಹೆಣ್ಣುಮಕ್ಕಳು ಸೇರುತ್ತಾರೆ, ಆದರೆ ಸರ್ಕಾರ ಇದಕ್ಕೆ ೨೫೦ ರಿಂದ ೭೦೦ ಕೋಟಿವರೆಗೆ ಮಾತ್ರ ಖರ್ಚು ಮಾಡುತ್ತಿದೆ. ಆದರೂ ಮೊಬಲಗೇನು ಕಡಿಮೆಯಿಲ್ಲ. ಇದು ಬಹಳ ಮುಖ್ಯವಾದ ಇಲಾಖೆ. ಮಹಿಳಾ ಕಲ್ಯಾಣದ ಬಗ್ಗೆ ಹೇಳುವುದಾದರೆ ಈಚಿನ ಎರಡು ವರ್ಷಗಳಲ್ಲಿ ಸಾಕಷ್ಟು ಪ್ರಗತಿ ಕಂಡಿದ್ದರೂ ಸಮಾಧಾನಕರವಾಗೇನೂ ಇಲ್ಲ. ಮಹಿಳೆಯರಿಗಾಗಿ ಈ ಇಲಾಖೆ ಮೂಲಕ ೩೮.೪೫ ಕೋಟಿ ಬಜೆಟ್‌ನಲ್ಲಿ ಖರ್ಚುಮಾಡಿದ್ದರೂ ಒಂದು ಟೈಮ್‌ಬಾಂಡ್ ಪ್ರೋಗ್ರಾಮ್ ಹಾಕಿಕೊಳ್ಳಬೇಕು. ಈ ಇಲಾಖೆ ಅಂದರೆ ಗ್ರ್ಯಾಂಟ್ ಕೊಡುವ ಇಲಾಖೆ ಎಂದು. ಮಾರ್ಚಿ ೩೧ನೇ ತಾರೀಖಿಗೆ ಗ್ರ್ಯಾಂಟ್ ರಿಲೀಸ್ ಮಾಡುವ ಇಲಾಖೆ ಎಂದು ಪ್ರಸಿದ್ಧವಾಗಿದೆ. ಏಕೆಂದರೆ ಇವರು ಹಾಸ್ಟೆಲ್‌ಗಳಿಗೆ, ಮಹಿಳಾ ಮಂಡಲಗಳಿಗೆ ಸೋಸಿಯಲ್ ಇನ್‌ಸ್ಟಿಟ್ಯೂಷನ್ಸ್‌ಗೆ ಗ್ರ್ಯಾಂಟನ್ನು ವರ್ಷಕ್ಕೊಮ್ಮೆ ಮಾರ್ಚಿ ಅಂತ್ಯದಲ್ಲಿ ಬಿಡುಗಡೆ ಮಾಡುತ್ತಾರೆ. ಸ್ವಾಮಿ, ಯಾರು ಸತ್ಯಹರಿಶ್ಚಂದ್ರರದಲ್ಲಿ. ಇವರು ವರ್ಷಕ್ಕೊಮ್ಮೆ ೨೦ ಸಾವಿರ ರೂಪಾಯಿಗಳನ್ನು ಒಂದು ಸಂಸ್ಥೆಗೆ ರಿಲೀಸ್ ಮಾಡಿದರೆ ಆ ವರ್ಷವೆಲ್ಲ ೨೦ ಸಾವಿರ ಖರ್ಚು ಮಾಡಿರುವುದಕ್ಕೆ ಬಡ್ಡಿ ಯಾರು ಕೊಡುತ್ತಾರೆ ? ಅವರು ಕಟ್ಟಡಗಳಿಗೆ ಬಾಡಿಗೆ ಕಟ್ಟುವುದು ಹೇಗೆ ? ಆದ್ದರಿಂದಲೇ ಟೈಮ್‌ಬಾಂಡ್ ಪ್ರೋಗ್ರಾಂ ಹಾಕಿಕೊಂಡ ಮೂರು ತಿಂಗಳಿಗೊಮ್ಮೆ ಅಥವಾ ಪ್ರತಿ ತಿಂಗಳೂ ಭಾಗ ಮಾಡಿ ಬಿಡುಗಡೆ ಮಾಡಿ. ಇಲ್ಲದಿದ್ದರೆ ಪ್ರಯೋಜನವಿಲ್ಲ. ಆದ್ದರಿಂದ ಈ ಹೊಸ ವ್ಯವಸ್ಥೆಯನ್ನು ಅನುಸರಿಸಬೇಕೆಂದು ಸಮಾನ್ಯ ಮಾಜಕಲ್ಯಾಣ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

೧-೩೦ ಪಿ.ಎಂ.

ಇನ್ನು ಟ್ರೈಬಲ್ ಸ್ಕೀಮ್ ಎಂದು ಇದೆ, ೫ ಜಿಲ್ಲೆಗಳಲ್ಲಿ ೧೮ ಉಪ ಯೋಜನೆ ಟ್ರೈಬಲ್ ಸ್ಪೆಷಲ್ ಪ್ಲಾನ್ ಎಂದು ಸಮಾಜ ಕಲ್ಯಾಣ ಇಲಾಖೆಯಲ್ಲಿ ಇದೆ. ೧೯೮೭-೮೮ರಲ್ಲಿ ೧೬.೪೦ ಕೋಟಿ ರೂಪಾಯಿಗಳನ್ನು ಅದಕ್ಕೆ ಇಟ್ಟಾಗಲೂ ಕೂಡ ೧೪.೭೧ ಕೋಟಿ ರೂಪಾಯಿಗಳನ್ನು ಮಾತ್ರ ವೆಚ್ಚ ಮಾಡಿದ್ದಾರೆ. ಇಲಾಖೆಯವರಿಗೆ ಟ್ರೈಬಲ್ಸ್ ಯಾರು ಸಿಕ್ಕಲಿಲ್ಲವೇ? ಒಂದು ಕೋಟಿ ೭೫ ಲಕ್ಷ ರೂಪಾಯಿ ಲ್ಯಾಪ್ಸ್

ಆಗಿದೆ. ಒಂದು ಕಡೆ ಹಣವಿಲ್ಲವೆಂದು ಹೇಳುತ್ತೀರಿ ಇನ್ನೊಂದು ಕಡೆ ಕೊಟ್ಟಿರತಕ್ಕಂತಹ ಹಣವನ್ನು ಯೋಗ್ಯವಾದ ರೀತಿಯಲ್ಲಿ ಖರ್ಚು ಮಾಡಿಲ್ಲ. ಈ ರೀತಿ ಯೋಜನೆಗಳಲ್ಲಿ ಏರುಪೇರಾಗಬಾರದು. ನಮ್ಮಲ್ಲಿ ಸ್ಪೆಷಲ್ ಕಾಂಪೊನೆಂಟ್ ಸ್ಕೀಮ್ ಅಂದರೆ ವಿಶೇಷ ಘಟಕ ಯೋಜನೆ ಎಂದು ಇದೆ, ಇದಕ್ಕೆ ಕಳೆದ ವರ್ಷ ಸುಮಾರು ೯೯ ಕೋಟಿ ರೂಪಾಯಿಯನ್ನು ಬಡ್ಜೆಟ್‌ನಲ್ಲಿ ಇಟ್ಟಿದ್ದಾರೆ. ೧,೨೦,೦೦೦ ಬೆನಿಫಿಷರೀಸ್ ಇದ್ದಾರೆ ಅಂದರೆ ಒಬ್ಬೊಬ್ಬ ಬೆನಿಫಿಷರೀಸ್‌ಗೆ ಹತ್ತು ಸಾವಿರ ಸಿಕ್ಕಿದೆ. ಪ್ರತಿ ಬೆನಿಫಿಷರೀಸ್‌ಗೆ ಹತ್ತು ಹತ್ತು ಸಾವಿರ ತೆಗೆದುಕೊಂಡಾಗ ಯಾರಿಗೆ ಈ ವಿಶೇಷ ಘಟಕ ಯೋಜನೆಯಲ್ಲಿ ಹಣವನ್ನು ಖರ್ಚು ಮಾಡಿದ್ದಾರೆ, ಅವರ ಆರ್ಥಿಕ ಪರಿಸ್ಥಿತಿ ಮೇಲೆ ಬಂದಿದೆಯೋ, ಫಾಲೋ ಆಫ್ ವರ್ಕ್ ಏನಾಗಿದೆ ಎಂಬುದರ ಬಗ್ಗೆ ಇಲಾಖೆ ಏನು ಕ್ರಮ ತೆಗೆದುಕೊಂಡಿದೆ, ಹಣ ಸದುಪಯೋಗವಾಗಿದೆಯೋ ಎಂಬುದರ ಬಗ್ಗೆ ಇಲಾಖೆ ವಿಚಾರ ಮಾಡಬೇಕಾಗುತ್ತದೆ. ಇದರ ಕಡೆಗೆ ಲಕ್ಷ್ಯ ಕೊಡಬೇಕಾಗಿದೆ. ನನಗೆ ತಿಳಿದ ಹಾಗೆ ಫಲಾನುಭವಿಗಳ ಬಗ್ಗೆ ಹೇಳುವುದಾದರೆ ವಿಶೇಷ ಘಟಕ ಯೋಜನೆಯಲ್ಲಿ ಇತ್ತೀಚೆಗೆ ಕೈಗಾರಿಕೆ ಮಾಡಬೇಕೆಂದು, ಕೈಮಗ್ಗಗಳನ್ನು ಮಾಡಬೇಕೆಂದು ಹೇಳುತ್ತೇವೆ. ಇದಕ್ಕೊಂದು ಉಪಯುಕ್ತ ಸಾಮಗ್ರಿಗಳನ್ನು ಕೂಡ ಕೊಡುತ್ತೇವೆ. ಆದರೆ ಹಸು, ಎಮ್ಮೆ ಏನು ಕೊಡುತ್ತೇವೆ ಅದನ್ನು ಕೊಡುವುದನ್ನು ಕಡಿಮೆ ಮಾಡಿದರೆ ಒಳ್ಳೆಯದಾಗುತ್ತದೆಂದು ನನ್ನಗನ್ನಿಸುತ್ತದೆ. ಇದರಿಂದ ಬಹಳ ಅಪವ್ಯಯವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಕೂಡ ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ಕೈಗಾರಿಕೆಗಳನ್ನು ಬೆಳೆಸಲಿಕ್ಕೆ ಸಹಾಯವಾಗುವಂತೆ ಅವಕಾಶವನ್ನು ಕಲ್ಪಿಸಿಕೊಡಬೇಕಾಗುತ್ತದೆ. ಇನ್‌ಕಂ ಜನರೇಟ್ ಆಗತಕ್ಕಂತಹ ಇನ್‌ಕಂ ಪೊಟೆನ್ಷಿಯಾಲಿಟಿಯನ್ನು ಅವರಿಗೆ ಕೊಡಬೇಕು. ಇದನ್ನು ನಾನು ಹೋದಸಲ ಪ್ರಸ್ತಾಪ ಮಾಡಿದ್ದೆ. ಅಲ್ಲಿರತಕ್ಕಂತಹ ಎಸ್‌ಸಿ, ಎಸ್‌ಟಿಗೇ ಆಗಲೀ ಹಿಂದುಳಿದ ವರ್ಗದವರಿಗೇ ಆಗಲೀ ಕೆಲವು ಸಾಮಾನುಗಳನ್ನು ಅಂದರೆ ಬೀಜ, ಗೊಬ್ಬರ, ಪಂಪ್ ಹೊಡೆಯತಕ್ಕಂಥಾದ್ದು ಏನು ಇದೆ ಅವೆಲ್ಲವನ್ನು ಕೊಡುತ್ತಾರೆ. ಇಂತಹ ವಸ್ತುಗಳನ್ನು ಅವರಿಗೆ ಕೊಟ್ಟಾಗ ಅವರು ಉಪಯೋಗ ಮಾಡುತ್ತಾರೆಯೋ ಇಲ್ಲವೇ ಎಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಅವರು ಏನು ಮಾಡುತ್ತಾರೆಂದರೆ ಶ್ರೀಮಂತ ರೈತರು ಅಲ್ಲಿ ವಸ್ತುಗಳನ್ನು ಹಂಚಿದ ತಕ್ಷಣ ತೆಗೆದುಕೊಂಡು ಹೋಗಿ ಮಾರಿಕೊಳ್ಳುತ್ತಾರೆ. ಇವತ್ತು ತಾಲ್ಲೂಕು ಬೋರ್ಡ್, ಮಂಡಲ ಪಂಚಾಯಿತಿ ಎಂದು ಮಾಡಿದ್ದಾರೆ ವಿಶೇಷ ಘಟಕ ಯೋಜನೆಯಲ್ಲಿ ಕೊಡತಕ್ಕಂತಹ ವಸ್ತುಗಳು ಏನು ಇವೆ ಅವುಗಳನ್ನು ಮಂಡಲ ಪಂಚಾಯತಿಯಲ್ಲಿಟ್ಟು ಯಾವ ಬಡವರಿಗೆ ಅದರ ಉಪಯೋಗ ಸಿಗಬೇಕು ಅಂತಹ ಬಡವರು ಅದರ ಉಪಯೋಗವನ್ನು ಮಾಡಿಕೊಳ್ಳುವಂತೆ ನೋಡಿಕೊಳ್ಳಬೇಕು. ಹೊಲಕ್ಕೆ ಎಣ್ಣೆ ಹೊಡೆಯತಕ್ಕಂತಹ ಮಿಷನ್ ಬೆಲೆ ೮೦೦ ರೂಪಾಯಿ ಒಂದು ಸಾವಿರ ರೂಪಾಯಿ ಇದೆ. ಶ್ರೀಮಂತ ರೈತರಾದರೆ ಒಂದೂವರೆ ಸಾವಿರ ರೂಪಾಯಿ ಕೊಟ್ಟು ತೆಗೆದುಕೊಳ್ಳುತ್ತಾರೆ. ಇಂತಹ ವಸ್ತುಗಳನ್ನು ಮಂಡಲ ಪಂಚಾಯತಿಯಲ್ಲಿ ಇಟ್ಟು ಅಲ್ಲಿರತಕ್ಕಂತಹ ಬಡ ರೈತರು ಯಾರಿದ್ದಾರೆ ಅವರಿಗೆ ಇದರ ಉಪಯೋಗವಾಗುವಂತೆ ವ್ಯವಸ್ಥೆ ಮಾಡಬೇಕು. ಇಂತಹ ಹೊಸ ಪದ್ಧತಿಯನ್ನು ಜಾರಿಗೆ ತರಬೇಕೆಂದು ನಾನು ತಮ್ಮ ಮೂಲಕ ಸರಕಾರವನ್ನು ಕೇಳಿಕೊಳ್ಳುತ್ತೇನೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಹರಿಜನರ ಅಭಿವೃದ್ಧಿಗೋಸ್ಕರ ಹರಿಜನರು ವಾಸವಾಗಿರುವಂತಹ ಸ್ಥಳದಲ್ಲಿ ಯಾದರೂ ಪ್ರೊಹಿಬಿಷನ್ ತರಬೇಕು. ಸ್ವಾತಂತ್ರ್ಯ ಬಂದು ೪೦ ವರ್ಷವಾಯಿತು ಆದರೂ ಕೂಡ ಇವರಿಗೆ ಸರಿಯಾದಂತಹ ಅನುಕೂಲ ದೊರಕಿಲ್ಲ. ನಾವು ಹರಿಜನರ ಅಭಿವೃದ್ಧಿ ಬಗ್ಗೆ ಮಾತನಾಡಬಹುದು. ಆದರೆ ಅವರ ಆರ್ಥಿಕ ಮಟ್ಟವನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಆದುದರಿಂದಾಗಿ ಆ ಪ್ರದೇಶದಲ್ಲಿಯಾದರೂ ಪ್ರೊಹಿಬಿಷನ್ ತರಬೇಕು. ಅಲ್ಲಿ ಹೆಂಡದ ಅಂಗಡಿಗಳು ಇರಬಾರದು, ಇದರ ಬಗ್ಗೆ ಹೊಸ ಕಾಯಿದೆ ತಂದರೂ ಚಿಂತೆಯಿಲ್ಲ. ಹರಿಜನರು ಯಾವ ಹಳ್ಳಿಯಲ್ಲಿ ವಾಸಮಾಡುತ್ತಿದ್ದಾರೆ ಆ ಮಟ್ಟಿಗಾದರೂ ಕಮ್ಯಾಂಡ್ ಏರಿಯಾ ಎಂದು ಮಾಡಿ ಅಲ್ಲಿ ಹೆಂಡದ ಅಂಗಡಿ ಇರದ ಹಾಗೆ ನೋಡಿಕೊಳ್ಳಬೇಕು. ಇಂತಹ ಪದ್ಧತಿಯನ್ನು ಜಾರಿಗೆ ತಂದರೆ ಮಾತ್ರ ಅವರನ್ನೂ ಮನುಷ್ಯರನ್ನಾಗಿ ಮಾಡಿ ನಮ್ಮ ಒಟ್ಟಿಗೇ ಕರೆದುಕೊಂಡು ಬರತಕ್ಕಂತಹ ಆರ್ಥಿಕ ಉನ್ನತಿಯನ್ನು ಸಾಧಿಸಿ ಅವರನ್ನು ಮೇಲಕ್ಕೆ ತರತಕ್ಕಂಥಾದ್ದಕ್ಕೆ ಸಹಾಯವಾದೀತು ಎಂದು ನನಗನ್ನಿಸುತ್ತದೆ. ಮೊನ್ನೆ ದಿವಸ ಪತ್ರಿಕೆಯಲ್ಲಿ ಬಂದಿತ್ತು ಅದನ್ನು ತಾವು ಕೂಡ ಓದಿದ್ದೀರಿ ಎಂದು ಅನಿಸುತ್ತದೆ. ಒಬ್ಬ ಹರಿಜನ ಹೆಣ್ಣುಮಗಳು ರಸ್ತೆ ಬದಿಯಲ್ಲಿ ಕುಳಿತುಕೊಂಡು ನೀರಿಗಾಗಿ ಕಾಯುತ್ತಿದ್ದಾಳೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ೪೦ ವರ್ಷಗಳ ನಂತರ ಒಬ್ಬ ಹರಿಜನ ಹೆಣ್ಣುಮಗಳು ತನ್ನ ಮಗಳು ಬಾಣಂತಿ ಮನೆಯಲ್ಲಿ ಇದ್ದಾಗ ಆಕೆ ರಸ್ತೆಯ ಪಕ್ಕದಲ್ಲಿ ಬೋರ್‌ವೆಲ್ ನೀರಿಗೆಂದು ಕಾಯುತ್ತಿದ್ದಾಳೆ.

ಬೋರ್‌ವೆಲ್ ಹತ್ತಿರವಿರತಕ್ಕಂತಹ ಜನ ಆಕೆಯಿಂದ ಬೋರ್‌ವೆಲ್ ಅನ್ನು ಮುಟ್ಟಿಸಕೊಡುತ್ತಿಲ್ಲ. ಆಕೆ ಬೋರ್‌ವೆಲ್ ಹತ್ತಿರ ಹೋಗಿ ನೀರು ತೆಗೆದುಕೊಳ್ಳುವುದಕ್ಕೆ ಆಕೆಗೆ ಅಧಿಕಾರವಿಲ್ಲ. ಬೇರೆಯವರು ಬೋರ್ ಹೊಡೆದು ನೀರು ಕೊಡುವವರೆಗೆ ಕಾದಿದ್ದು ಒಂದು ಗಡಿಗೆ ನೀರನ್ನು ಮನೆಗೆ ತೆಗೆದುಕೊಂಡು ಹೋಗಿದ್ದಾದರೆ ನಾವು ಏನು ಸಮಾಜ ಕಲ್ಯಾಣ ಮಾಡುತ್ತಿದ್ದೇವೆಂದು ನಮಗೆ ದುಃಖವಾಗುತ್ತದೆ. ಇದು ಹೋಗಬೇಕು. ಅವರಿಗೆಂದು ಪ್ರತ್ಯೇಕವಾದ ವ್ಯವಸ್ಥೆಯಾಗಬೇಕು ಮತ್ತು ಅವರ ಆರ್ಥಿಕಮಟ್ಟ ಸುಧಾರಿಸಿ ಅವರು ಮೇಲೆ ಬರುವುದಕ್ಕೆ ಹೆಚ್ಚಿನ ಕಾಳಜಿ ವಹಿಸಬೇಕು. ಇನ್ನು ವಿದ್ಯಾರ್ಥಿ ನಿಲಯಗಳ ಬಗ್ಗೆ ಸಾಕಷ್ಟು ಮಾನ್ಯ ಸದಸ್ಯರು ಮಾತನಾಡಿದ್ದಾರೆ, ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಹಾಸ್ಟೆಲ್‌ಗಳ ಅವ್ಯವಸ್ಥೆಯ ಬಗ್ಗೆ ದೂರೂ ಕೂಡ ಬಂದಿದೆ. ವರ್ಕಿಂಗ್ ವಿಮೆನ್ಸ್ ಹಾಸ್ಟಲ್ಸ್ ಬಗ್ಗೆ ಮಾತನಾಡುವುದಾದರೆ ಹೆಚ್ಚಿನ ಸ್ಕೋಪ್ ಅದಕ್ಕೆ ಇದೆ. ಬೆಂಗಳೂರಿನಲ್ಲಿರತಕ್ಕಂತಹ ಸರಕಾರೀ ವರ್ಕಿಂಗ್ ವಿಮೆನ್ಸ್ ಹಾಸ್ಟೆಲ್‌ನಲ್ಲಿ ಸಾಕಷ್ಟು ಸೀಟುಗಳು ಖಾಲಿ ಇದೆ, ಅಲ್ಲಿ ಏನು ನಡೆಯುತ್ತಿದೆ ಎನ್ನುವುದರ ಬಗ್ಗೆ ತನಿಖೆ ಮಾಡಬೇಕು. ವರ್ಕಿಂಗ್ ವಿಮೆನ್ಸ್ ಅಂದರೆ ೨೦೦-೩೦೦-೪೦೦ ರೂಪಾಯಿ ಸಂಬಳ ತೆಗೆದುಕೊಂಡು ಬಡ ಹೆಣ್ಣುಮಕ್ಕಳು ಕೆಲಸ ಮಾಡುತ್ತಿದ್ದಾರೆ. ಅಂತಹವರಿಗೆ ಸರ್ವ ಸೌಲಭ್ಯವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇವತ್ತು ಚಿನ್ನಪ್ಪರೆಡ್ಡಿಯವರ ಅಲ್ಪ ಸಂಖ್ಯಾತರ ಹಿಂದುಳಿದವರ ಬಗ್ಗೆ ಏನು ಒಂದು ಆಯೋಗವನ್ನು ರಚಿಸಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ನುಡಿದಂತೆ ನಡೆದಿದ್ದಾರೆ. ಆದರೆ ಈ ಆಯೋಗದ ವರದಿಯನ್ನು ಸ್ವಲ್ಪ ಕಾಲದಲ್ಲಿಯೇ ಕೊಡುವುದಕ್ಕೆ ಹೇಳಿದ್ದಾರೆ, ನನ್ನದೊಂದು ಸಲಹೆ ಇದೆ ಸ್ವಾಮಿ. ಚಿನ್ನಪ್ಪರೆಡ್ಡಿಯವರ ಆಯೋಗ ಒನ್ ಮ್ಯಾನ್ ಆಯೋಗವಾಗಿದೆ. ಸಂತೋಷ ಆದರೆ ಇಲ್ಲಿ ಏನಾಗಿದೆ ಎಂದರೆ ಹಿಂದೆ ಮಾಡಿರತಕ್ಕಂಥ ಒನ್ ಮ್ಯಾನ್ ಆಯೋಗ ನಮ್ಮಲ್ಲಿ ಏನೊಂದು ಪರಿಹಾರ ಬಂದುಬಿಟ್ಟಿದೆ ಎಂದರೆ ಈ ಆಯೋಗವನ್ನು ಮಾಡಬೇಕಾದರೆ ಯಾವುದಾದರೂ ಬೇರೆ ಬೇರೆ ಪಂಗಡದವರು ಕೂಡಾ ಆಯೋಗದಲ್ಲಿ ಶಾಮೀಲಾಗಬೇಕು. ಅದಕ್ಕಾಗಿ ಒಂದು ಕಮಿಟಿ ಮಾಡಬೇಕು ಎಂದು ನನ್ನದೊಂದು ಸಲಹೆ. ಉದಾಹರಣೆಗೆ ಆಯೋಗದಲ್ಲಿ ಪ್ರತಿಯೊಂದು ಪಂಗಡದವರೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶವಾಗಬೇಕು, ಇಲ್ಲದೇ ಹೋದರೆ ಏನಾಗುತ್ತದೆ ಎಂದರೆ ಹಿಂದೆ ಸಾಕಷ್ಟು ಆಯೋಗಗಳನ್ನು ನೋಡಿಕೊಂಡು ಬಂದಿದ್ದೇವೆ. ಉದಾಹರಣೆಗೆ ವೀರಶೈವರ ಒಂದು ಕೋಮಿನವರ ರೆಪ್ರಸೆಂಟೇಷನ್ ಏತಕ್ಕೆ ಬೇಕು ? ಆದ್ದರಿಂದ ಆಯಾಯ ಪಂಗಡದವರೇ ಈ ಆಯೋಗದಲ್ಲಿರಬೇಕು ಎಂದು ನನ್ನ ಸಲಹೆ. ಎಲ್ಲಾ ಕೋಮಿನವರು ಇದೇ ರೀತಿ ರೆಪ್ರಸೆಂಟೇಷನ್‌ಗಳನ್ನು ಕೊಡುವುದು ಬೇಡ. ಜಾತಿ ಬಣ್ಣವನ್ನು ಈ ಆಯೋಗಕ್ಕೆ ಕಟ್ಟಬಾರದು. ಈ ಆಯೋಗದಲ್ಲಿ ಹಿಂದೂ ಧರ್ಮದಲ್ಲಿ ಸಂಪೂರ್ಣವಾಗಿ ಪರಿಣಿತರಾದಂಥವರೂ ಒಬ್ಬರು ಅಥವಾ ಯಾರಾದರೂ ಎಕ್ಸ್‌ಪರ್ಟ್ಸ್ ಇರತಕ್ಕಂಥವರು ಒಬ್ಬರು ಇದ್ದರೆ ಈ ಕಮಿಟಿ ವರದಿಯನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಇದರಲ್ಲಿ ನಮ್ಮದೇನೂ ತಕರಾರಿಲ್ಲ. ಅವರಿಗೆ ತಮ್ಮ ಅಭಿಪ್ರಾಯಗಳನ್ನು ಕೊಡುವುದಕ್ಕೆ ಒಂದು ಸಣ್ಣ ಸಬ್ ಕಮಿಟಿ ಮಾಡಿಬಿಟ್ಟು ಈ ವರದಿಯನ್ನು ಪ್ರಷ್ಟೀಕರವಾಗಿ ಅದು ನಿಜವಾಗಿ ಕಾರ್ಯಗತವಾಗುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ತಮ್ಮ ಮುಖಾಂತರ ನಾನು ಸಂಬಂಧಪಟ್ಟವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಮಹಿಳೆ ಮತ್ತು ಮಕ್ಕಳ ಕಲ್ಯಾಣದ ಬಗ್ಗೆ...

ಶ್ರೀ ಎಂ. ವೀರಪ್ಪಮೊಯಿಲಿ.— ನಾನು ಏನು ಹೇಳುವುದು ಎಂದರೆ ಎಲ್ಲಾ ಜಾತಿಯವರನ್ನು ಸೇರಿಸಿ ಆಯೋಗ ಮಾಡುವಂಥದ್ದು ಬೇರೆ. ಎಲ್ಲಾ ಜಾತಿಯವರಿಗೂ ಮೀಸಲಾತಿಯನ್ನು ಕೊಟ್ಟುಬಿಟ್ಟಿದ್ದಾರೆ. ಈ ಆಯೋಗವೇ ಬೇಕಾಗಿಲ್ಲ ಎಂದು ನಾನು ಹೇಳುವುದು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್. — ಅದು ಟೆಂಪೊರರಿ.

ಶ್ರೀ ಎಂ. ವೀರಪ್ಪಮೊಯಿಲಿ.— ನಾನು ಹೇಳುವುದು ಎಲ್ಲಾ ಜಾತಿಯವರನ್ನೂ ಸೇರಿಸಿ ಪುನಃ ಆಯೋಗ ಮಾಡುವುದು ಇದ್ದರೆ ಇದರ ಬಗ್ಗೆ ಈಗಾಗಲೇ ಹಿಂದೆ ಒಂದು ಆರ್ಡರ್ ಇದೆ. ಎಲ್ಲಾ ಜಾತಿಯವರನ್ನು ಸೇರಿಸಿ ೧೦೦ಕ್ಕೆ ೯೯ ರಷ್ಟು ಪಾಲನ್ನು ಪಾಪ್ಯುಲೇಷನ್‌ಗೆ ರಿಸರ್ವೇಷನನ್ನ ಮಾನ್ಯ ಮುಖ್ಯ ಮಂತ್ರಿಗಳು ಮಾಡಿಬಿಟ್ಟಿದ್ದಾರೆ. ಆದ್ದರಿಂದ ಇದೇ ಒಳ್ಳೆಯದು ಎಂದು ಹೇಳಿ ಭಾಷಣವನ್ನು ಮಾಡಿಬಿಟ್ಟರೆ ನಮಗೆ ಬಹಳ ತೃಪ್ತಿಯಾಗುತ್ತದೆ, ನಾನು ಕುಳಿತುಕೊಂಡುಬಿಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.— ಎಷ್ಟೋ ಜಾತಿಗಳು ಇವೆ. ಒಂದಲ್ಲ, ಎರಡು, ಬ್ಯಾಕ್ ವಾರ್ಡ್ ಕ್ಲಾಸ್, ಅದೆಲ್ಲಾ ಸ್ವಲ್ಪ ಹೇಳಲಿ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.— ಈ ಆಯೋಗಕ್ಕೆ ಎಲ್ಲಾ ಜಾತಿಯವರನ್ನು ಮಾಡಬೇಕು ಎಂದು ಹೇಳಲಿಲ್ಲ. ಈ ಆಯೋಗಕ್ಕೆ...

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.— ಈ ಆಯೋಗಕ್ಕೆ ಸಪೋರ್ಟ್ ಆಗಿ ಒಂದು ಸಬ್ ಕಮಿಟಿ ಮಾಡಬೇಕು ಎಂದು ನಾನು ಹೇಳಿದ್ದುದು.

ಶ್ರೀ ಎಂ. ವೀರಪ್ಪಮೊಯಿಲಿ.— ತಾವು ಸ್ವಲ್ಪ ಯೀಲ್ಡ್ ಆಗಿ. ಇದಕ್ಕೆ ಮೊದಲು ತಾವು ಒಂದು ಸೆಂಟೆನ್ಸ್ ಹೇಳಿದಿರಿ. ತಾವು ಅದನ್ನು ಉದ್ದೇಶಪೂರ್ವಕವಾಗಿ ಹೇಳಿದಿರೋ ಅಥವಾ ತಪ್ಪಾಗಿ ಹೇಳಿದಿರೋ ಗೊತ್ತಿಲ್ಲ. ಹರಿಜನ ಮಹಿಳೆ ನೀರಿಗೆ ಗಡಿಗೆಯನ್ನು ತೆಗೆದುಕೊಂಡು ಹೋದಾಗ ಅಲ್ಲಿ ಪ್ರತ್ಯೇಕವಾದ ಏರ್ಪಾಡು ಮಾಡಬೇಕು ಎಂದು ತಾವು ಹೇಳಿದಿರಿ, ಕೊನೆಗೆ ಅದನ್ನು ಹೀಗೆ ಹೇಳಿದಿರಿ ಮೊದಲು ಪ್ರತ್ಯೇಕವಾದ ಏರ್ಪಾಡು ಮಾಡಬೇಕು ಎಂದು ತಾವು ಹೇಳಿದಿರಿ. It is a contradictory statment. ಅದನ್ನು ತಾವು ಈ ತರಹ ಹೇಳಬೇಕು, ಯಾವ ಮಹಿಳೆಯರು ಹರಿಜನ ಹೆಂಗಸರಿಗೆ ನೀರು ಕೊಡುವುದಿಲ್ಲವೋ ಅಂಥ ಮಹಿಳೆಯನ್ನು ಗಲ್ಲಿಗೆ ಹಾಕಬೇಕು ಎಂದು ಹೇಳಿ. Then we can agree with that.

SMT. LEELADEVI R. PRASAD.— You have not understood.

ಶ್ರೀ ಎಂ. ವೀರಪ್ಪಮೊಯಿಲಿ.— ಪ್ರತ್ಯೇಕವಾಗಿ ಮಾಡುವುದಿದ್ದರೆ You are again segregating the society.

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್,— ಪ್ರತ್ಯೇಕವಾಗಿ ಬೇಡ ಎಂದು ಹೇಳುತ್ತಿರುವುದು, ಅವರಿಗೆ ನ್ಯಾಯ ಸಿಗಬೇಕು.

ಶ್ರೀ ಎಂ. ವೀರಪ್ಪಮೊಯಿಲಿ.— ಯಾರು ಅವರಿಗೆ ನೀರನ್ನು ತೆಗೆಯಲಿಕ್ಕೆ ಬಿಡುವುದಿಲ್ಲವೋ ಅಂಥವರಿಗೆ ಶಿಕ್ಷೆಯನ್ನು ಮಾಡುವುದಕ್ಕೆ ಏನು ಕಾನೂನು ಬದಲಾವಣೆಯನ್ನು ಮಾಡಬೇಕೋ ಅದನ್ನು ಮಾಡಿ ಎಂದು ಹೇಳಿ. ಯಾರು ಆ ಹೆಂಗಸಿಗೆ ನೀರನ್ನು ತೆಗೆಯಲಿಕ್ಕೆ ಬಿಡುವುದಿಲ್ಲವೋ ಅಂಥ ಒಂದು ಅಫೆನ್ಸನ್ನು ಕಾಗ್ನಿಸಬಲ್ ಅಫೆನ್ಸ್ ಆಗಿ ಮಾಡಬೇಕು, ಅದನ್ನು ತಿದ್ದುಪಡಿ ಮಾಡಬೇಕು ಎಂದು ಹೇಳಿದರೆ ಅದನ್ನು ನಾವು ಒಪ್ಪುತ್ತೇವೆ. It has to be made a congnisable offence Obstructing them from taking water even though it may look a nuisance or a small offence it has to be made a cognisable offence.

SRI M. P. PRAKASH.— As it is under the present law it is a cognisable offence and non-bailable also.

ಶ್ರೀ ಆರ್. ವೆಂಕಟರಾಮಯ್ಯ — ಪ್ರತ್ಯೇಕತೆ ಇರಬೇಕು ಎಂದು ಹೇಳುತ್ತಿದ್ದೀರಿ, ಅದು ಬೇಡ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಹಿಳಾ ಮತ್ತು ಮಕ್ಕಳ ಡಿಪಾರ್ಟ್‌ಮೆಂಟ್ ಏನಿದೆ ಈ ಡಿಪಾರ್ಟ್‌ಮೆಂಟ್‌ನ್ನು ಬಹುಶಃ ೧೯೭೫ನೇ ಇಸವಿಯಲ್ಲಿ ಇಂಟರ್‌ನ್ಯಾಶನಲ್ ವಿಮೆನ್ಸ್ ಇಯರ್ ಕಾಲದಲ್ಲಿ ಪ್ರತ್ಯೇಕವಾದ ಡಿಪಾರ್ಟ್‌ಮೆಂಟ್ ಎಂದು ಮಾಡಿ ಇಲ್ಲಿಗೆ ೧೩ ವರ್ಷ ಆಗಿದೆ. ಆದರೆ ನನಗೆ ಅರ್ಥವಾಗುವುದಿಲ್ಲ, ಈ ಡಿಪಾರ್ಟ್‌ಮೆಂಟ್ ಡೈರೆಕ್ಟರೇಟ್‌ನಲ್ಲಿ ಮಹಿಳೆಯರಿಗೆ ಸರಿಯಾದಂತಹ ಹಕ್ಕು ಬಾಧ್ಯತೆಗಳನ್ನು ಕೊಡಬೇಕು, ಸರಿಯಾಗಿ, ವ್ಯವಸ್ಥಿತವಾಗಿ ಅವರಿಗೆ ಅನುಕೂಲತೆಗಳನ್ನು ಮಾಡಬೇಕು ಬೇಕು ಅಂದಾಗ ಈ ಡೈರೆಕ್ಟರೇಟ್ ಏನು ಮೆಟರ್‌ನಿಟಿ ಹೋಮ್ ಆಗಿದೆಯೇ ಎಂದು ಕೇಳುತ್ತೇನೆ. ಲೇಡಿ ಡೈರೆಕ್ಟರನ್ನು ಹಾಕಿಕೊಂಡು ಬರುತ್ತಿದೆ, ನನಗೆ ಇದರ ಅರ್ಥ ಆಗುವುದಿಲ್ಲ, ಲೇಡಿ ಡೈರೆಕ್ಟರ್ ಅನ್ನು ಹಾಕಿ. ಸಂತೋಷ ಆದರೆ ಕನ್ನಡ ಬರದೇ ಇರತಕ್ಕವರನ್ನು ಹಾಕಿದ್ದೀರಿ, ಹಳ್ಳಿಗಳಿಗೆ ಹೋಗದೇ ಇರತಕ್ಕ ಡೈರೆಕ್ಟರ್ ಅನ್ನು ಹಾಕಿದರೆ ಹೇಗೆ ಅವರು ಕೆಲಸ ಮಾಡುತ್ತಾರೆ ಎಂದು ನನಗೆ ಅರ್ಥವಾಗುವುದಿಲ್ಲ. ನಾನು ಅನೇಕ ಬಾರಿ ಮಾನ್ಯ ಮಂತ್ರಿಗಳಿಗೆ ಈ ವಿಷಯದ ಬಗ್ಗೆ ಹೇಳಿದ್ದೇನೆ. ವಿಮೆನ್ಸ್ ಮತ್ತು ಚಿಲ್ಡ್ರನ್ ಡೈರೆಕ್ಟೋರೇಟ್‌ಗೆ ಬರೀ ಲೇಡಿ ಡೈರೆಕ್ಟರ್ ಅನ್ನು ಹಾಕಬೇಕು ಎಂದು ಏನಾದರೂ ಕಾನೂನು ಇದೆಯೇ ? ಇವೊತ್ತು ಡಿಪಾರ್ಟ್‌ಮೆಂಟ್‌ನಲ್ಲಿರತಕ್ಕ ಬಹಳಷ್ಟು ತಜ್ಞರು

ವಯಸ್ಸಾದವರು ಹಾಗೂ ಕಷ್ಟ ಸುಖ ತಿಳಿದುಕೊಂಡವರು, ಹೆಣ್ಣು ಮಕ್ಕಳ ಬಗ್ಗೆ ಕಳಕಳಿ ಇದ್ದವರನ್ನು ಡೈರೆಕ್ಟರೇಟ್‌ಗೆ ಹಾಕಿದರೆ ಸಂತೋಷವಾಗುತ್ತದೆ.

ಶ್ರೀ ಜಿ. ಬಸವಣ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಮಹಿಳಾ ಮತ್ತು ಚಿಲ್ಡ್ರನ್ ಫೆಡರೇಶನ್‌ಗೆ ಮಹಿಳೆಯರನ್ನು ಮಾತ್ರವೇ ಹಾಕಬೇಕೆಂದು ನಿಯಮ ಏನೂ ಇಲ್ಲ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ ಈ ಇಲಾಖೆ ಸೀಮಿತ ವಾಗಿರುವುದರಿಂದ ಮಹಿಳೆಯನ್ನು ಹಾಕಿದರೆ ಅದರ ಉದ್ದೇಶ ಸಫಲ ಆಗಿ ಆ ಉದ್ದೇಶ ಈಡೇರ ಬಹುದು ಎಂಬ ದೃಷ್ಟಿಯಿಂದ ಹಾಕಿದ್ದೇವೆಯೇ ಹೊರತು ಬೇರೆ ಯಾವ ಉದ್ದೇಶ ಇಲ್ಲ. ತಾವು ಹೇಳಿದ ಹಾಗೆ ನಿರ್ದೇಶಕರುಗಳು ಬರೀ ಬೆಂಗಳೂರಿನಲ್ಲಿ ಮಾತ್ರವೇ ಇರುವುದಿಲ್ಲ, ಬೇರೆ ಕಡೆ ಅವರು ಪ್ರವಾಸ ಮಾಡುತ್ತಾರೆ. ಜಾಯಿಂಟ್ ಡೈರೆಕ್ಟರ್. ಅಸಿಸ್ಟೆಂಟ್ ಡೈರೆಕ್ಟರ್ ಎಲ್ಲಾ ಸೇರಿ ಮಂತ್ಲೀ, ಕ್ವಾರ್ಟರ್ಲಿ ಮೀಟಿಂಗ್ ಮಾಡುತ್ತಾರೆ, ರೆವ್ಯೂ ಮಾಡುತ್ತಾರೆ, ಸಮಯ ಬಂದಾಗ ಪ್ರವಾಸ ಸಹ ಮಾಡುತ್ತಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಕನ್ನಡ ಬರುವವರನ್ನು ಹಾಕಿ, ಇದು ಮುಖ

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ಕನ್ನಡ ಬಾರದೇ ಇರುವವರನ್ನು ಹಾಕಿದ್ದೀರಿ, ಕನ್ನಡ ಬರುವವರನ್ನು ಮಾತ್ರ ಅಲ್ಲಿ ಹಾಕಿ

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಕನ್ನಡ ಬರುವವರನ್ನು ಮಾತ್ರ ಅಲ್ಲ, ಚತುರ್ವಿಧ ಭಾಷೆಯಲ್ಲಿ ತಜ್ಞರಾದವರನ್ನು ಹಾಕಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ನಾನು ಐಸಿಡಿಎ ಪ್ರೋಗ್ರಾಮ್ ಬಗ್ಗೆ ಹೇಳುವುದಿಲ್ಲ, ಸಾಕಷ್ಟು ಜನ ನನಗಿಂತ ಮೊದಲು ಮಾತನಾಡಿದವರು ಹೇಳಿದ್ದಾರೆ. ಬಾಲ ವಿಕಾಸ ಯೋಜನೆಯಲ್ಲಿ ಹೇಳುತ್ತಿದ್ದೇವೆ. ಅಂಗನವಾಡಿಗಳು ಇವೆ. ಮಕ್ಕಳ ನ್ಯೂಟ್ರಿಷನ್ ಕೊಡುವ ಬಗ್ಗೆ ಪ್ರೋಗ್ರಾಮ್ ಬಗ್ಗೆ ಸಾಕಷ್ಟು ಬಾರಿ ಸರ್ಕಾರದ ಗಮನಕ್ಕೆ ತಂದಿದ್ದೇನೆ. ನ್ಯೂಟ್ರಿಷನ್ ಅವರು ಪೊಟ್ಟಣದಲ್ಲಿ ಮಕ್ಕಳಿಗೆ ಇವೊತ್ತು ಆಗ್ರೋ ಕಾರ್ನ್ ಕೊಡುತ್ತಾರೆ, ಇದು ಬಹುಶಃ ಕೋಳಿ ಆಹಾರವಾಗಿ ಮಾರಾಟ ಆಗುತ್ತಿದೆ. ಇವೊತ್ತು ಇದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವೊತ್ತು ಫುಡ್ ಮಕ್ಕಳು ಏನು ತಿನ್ನುತ್ತಾ ಇದ್ದಾರೆ. ಅದನ್ನು ಲಾರಿಯಲ್ಲಿ ತೆಗೆದುಕೊಂಡು ಹೋಗಿ ಕೋಳಿ ಆಹಾರವಾಗಿ ಪರಿವರ್ತನೆ ಆಗುತ್ತಿದೆ, ಇವೊತ್ತು ಹಸುಗಳಿಗೆ ಮಕ್ಕಳ ಆಹಾರ ಮಾರಾಟ ಮಾಡುತ್ತಿದ್ದಾರೆ. ನೀವು ಮಕ್ಕಳಿಗೆ ಏನು ವ್ಯವಸ್ಥೆ ಮಾಡಿದ್ದೀರಿ ? ಇದರಿಂದ ಅವರಿಗೆ ಏನು ನ್ಯೂಟ್ರಿಷನ್ ಫುಡ್ ಕೊಟ್ಟಹಾಗೆ ಆಗುತ್ತದೆ. ಇವೊತ್ತಿನ ದಿವಸ ಹಳ್ಳಿಯ ಒಳಗೆ ಲೋಕಲ್ ಆಗಿ ಸಿಕ್ಕತಕ್ಕಂತಹ ಪದಾರ್ಥಗಳನ್ನು ಕೊಡಿ. ಕಡಲೇಕಾಯಿ ಬೆಲ್ಲ ಉಂಡೆ ಮಾಡಿ ಕೊಡಿ, ಮಕ್ಕಳು ತಿನ್ನುತ್ತವೆ, ಕುಂಬಳಕಾಯಿ ಬೆಲ್ಲ ಹಾಕಿ ಉಂಡೆ ಮಾಡಿಕೊಡಿ, ಮಕ್ಕಳು ತಿನ್ನುತ್ತವೆ, ಅದನ್ನು ತಿಂದು ಸಂತೋಷ ಪಡುತ್ತವೆ. ಅದು ಬಿಟ್ಟು ಯಾವುದೋ ಪ್ಯಾಕ್ ಆದು ಆರು ತಿಂಗಳು ಆಗಿರಬಹುದು, ಅಥವಾ ವರ್ಷ ಆಗಿರಬಹುದು, ಬೆಂಗಳೂರಿನಿಂದ ತೆಗೆದುಕೊಂಡು ಬಂದು ಗೋಡೌನ್‌ನಲ್ಲಿ ಇಟ್ಟು ವಾಸನೆ ಬಂದ ಫುಡ್‌ಗಳನ್ನು ಮಕ್ಕಳಿಗೆ ಕೊಟ್ಟು ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಆದರೆ ಮಕ್ಕಳು ಯಾರೂ ಪ್ರೀತಿಯಿಂದ ತಿನ್ನುತ್ತಾ ಇಲ್ಲ. ಇದನ್ನು ದಯವಿಟ್ಟು ಬದಲಾಯಿಸಬೇಕು, ಎಂದು ನಾನು ಒತ್ತಾಯದಿಂದ ಹೇಳುತ್ತೇನೆ. ಲೋಕಲ್ ಆಗಿ ಸಿಗತಕ್ಕ ನ್ಯೂಟ್ರಿಷನ್ ಫುಡ್ ಅನ್ನು ಮಕ್ಕಳಿಗೆ ಕೊಡಿ ತಿನ್ನುತ್ತವೆ. ನೀವು ಅವರೇಕಾಯಿ ಬೇಯಿಸಿ ಕೊಡಿ, ಮಕ್ಕಳು ತಿನ್ನುತ್ತವೆ, ಕಡಲೇಕಾಯಿ ಬೇಯಿಸಿ ಕೊಡಿ, ಹುರುಳೀಕಾಯಿ ಬೇಯಿಸಿ ಕೊಡಿ ಮಕ್ಕಳು ತಿನ್ನುತ್ತವೆ. ಆಗ್ರೋ ಕಾರ್ನ್ ತೆಗೆದುಕೊಂಡು ಬಂದು ಪ್ರೈವೇಟ್ ಆಗಿ ಲಾಭ ಮಾಡುವುದಕ್ಕೆ ತೆಗೆದುಕೊಂಡು ಹೋಗಿ ಕೋಳಿ ಆಹಾರವನ್ನು ಮಕ್ಕಳಿಗೆ ಕೊಡುತ್ತಿದ್ದೀರಿ. ಇದನ್ನು ನಿಲ್ಲಿಸಬೇಕೆಂದು ಬಹಳ ಕಳಕಳಿಯಿಂದ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇವೊತ್ತಿನ ದಿವಸ ಬೀದರ್‌ನಲ್ಲಿ ಇಂಟಿಗ್ರೇಟೆಡ್ ರೂರಲ್ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಇದೆ. ಬಹಳ ಜನರಿಗೆ ಗೊತ್ತಿಲ್ಲದೇ ಇರಬಹುದು, ಇದನ್ನು ನಿಲ್ಲಿಸಬೇಕೆಂದು ಯೋಚನೆ ಮಾಡಿದ್ದಾರೆ. ಕಾರಣ ಗೊತ್ತಾಗಲಿಲ್ಲ, ಇದನ್ನು ಬೇರೆ ಡಿಸ್ಟ್ರಿಕ್ಟ್‌ಗೆ ಪರಿವರ್ತನೆ ಮಾಡಿ ಬೇರೆ ಕಡೆ ಅದನ್ನು ಕೊಡುವುದಕ್ಕೆ ಸಾಧ್ಯ ಇಲ್ಲದಿದ್ದರೂ ಸಾಕಷ್ಟು ಹಣ ಅದಕ್ಕೆ ಇದೆ ಎಂದು ಕೇಳಿದ್ದೇನೆ. ಅದನ್ನು ಬೇರೆ ಕಡೆ ಆದರೂ ವರ್ಗಾವಣೆ ಮಾಡಬೇಕೆಂದು ಹೇಳುತ್ತೇನೆ. ಸ್ಪೆಷಲ್ ನ್ಯೂಟ್ರಿಷನ್

ಪ್ರೋಗ್ರಾಮ್‌ನಿಂದ ಅದನ್ನು ಮಿಡ್ ಡೇ ಮೀಲ್ ಆಗಿ ಪರಿವರ್ತನೆ ಮಾಡಿದರೆ ಒಳ್ಳೆಯದು. ಇನ್ನು ಬಾಲ ಅಪರಾಧದ ಬಗ್ಗೆ ಜುವನೇಲ್ ಜಸ್ಟೀಸ್ ಆಕ್ಟ್ ಏನಿದೆ ಅದು ನಮ್ಮ ರಾಜ್ಯದಲ್ಲಿ ಜಾರಿಗೆ ಬಂದಿಲ್ಲ. ಬಾಲ ಅಪರಾಧಗಳ ಬಗ್ಗೆ ಕೇಂದ್ರ ಸರ್ಕಾರದಲ್ಲಿ ಕೂಡ ಮಾತನಾಡಿದ್ದಾರೆ. ಬಾಲ ಅಪರಾಧ ಆಕ್ಟ್ ಅನ್ನು ತಂದು ಸಂಬಂಧಪಟ್ಟ ಸಪ್ಲಿಮೆಂಟರಿ ರೂಲ್ಸ್‌ಗೆ ಇವೊತ್ತಿನ ದಿವಸ ಕಾಯಿದೆ ಮಾಡಿಲ್ಲ. ತಮ್ಮ ಮೂಲಕ ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುವುದೇನೆಂದರೆ ಜುವನೇಲ್ ಜಸ್ಟೀಸ್ ಆಕ್ಟ್ ರೂಲ್ಸ್ ಅನ್ನು ಆದಷ್ಟು ಬೇಗ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ಬಹಳ ಮುಖ್ಯವಾದ ವಿಷಯವೆಂದರೆ ಅದು ಮಹಿಳೆಯರಿಗೆ ಸಂಬಂಧಪಟ್ಟಿದ್ದು. ಮಹಿಳೆಯರಿಗೆ ದುಃಖ ತರುವಂತಹ ಮತ್ತು ಮಹಿಳೆಯರು ಅಸಹ್ಯಪಡುವಂತಹ ವಿಷಯವೊಂದು ಪತ್ರಿಕೆಯಲ್ಲಿ ಬಂದಿದೆ. ಈ ವಿಷಯ ಸಹ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಡುತ್ತದೆ. "ಗರ್ಭಸ್ಥ ಶಿಶುವಿನ ಲಿಂಗ ಪತ್ತೆ" ಎಂಬ ಬಗ್ಗೆ ಪ್ರಕಟವಾಗಿರುವ ವಿಷಯವೇನೆಂದರೆ:

> "ತಾಯಿಯ ಗರ್ಭದಲ್ಲಿರುವಾಗಲೇ ಶಿಶುವಿನ ಲಿಂಗವನ್ನು ಪತ್ತೆ ಹಚ್ಚಲು ಕೈಗೊಳ್ಳುವ ಪರೀಕ್ಷೆಗೆ ಸಂಬಂಧಿಸಿದಂತೆ ಶಾಸನ ರೂಪಿಸುವ ಬಗ್ಗೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಅನಿಸಿಕೆ ಎಂಥದ್ದೆಂಬುದನ್ನು ತಿಳಿಸುವಂತೆ ಕೇಳಿದೆ.
>
> ಮಹಾರಾಷ್ಟ್ರ ಸರ್ಕಾರವು ಇತ್ತೀಚೆಗಷ್ಟೇ ಇಂತಹ ವಿಧೇಯಕವೊಂದನ್ನು ಅಂಗೀಕರಿಸಿತು. ಈ ವಿಧೇಯಕದ ನಕಲುಗಳನ್ನು ಮಾದರಿಯಾಗಿ ಎಲ್ಲ ರಾಜ್ಯಗಳಿಗೆ ಕೇಂದ್ರ ಸರ್ಕಾರವು ಕಳುಹಿಸಿ ಅಭಿಪ್ರಾಯ ತಿಳಿಸುವಂತೆ ಕೋರಿದೆ"

ಇದು ನಿಜಕ್ಕೂ ನಮ್ಮ ಮಹಿಳೆಯರಿಗೆ ಒಂದು ರೀತಿಯ ಶಾಪ. ಅಷ್ಟೇ ಅಲ್ಲ, ಇದು ಒಂದು ರೀತಿಯ ಅಪಮಾನಕರವಾದಂಥ ಸಂಗತಿ. ಆದ್ದರಿಂದ ಇದರ ಬಗ್ಗೆ ನಮ್ಮ ರಾಜ್ಯದಲ್ಲಿಯೂ ಸಹ ತಕ್ಷಣವೇ ಒಂದು ಶಾಸನವನ್ನು ರೂಪಿಸಬೇಕು. ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳೇ ಇವಕ್ಕೆ ಸಂಬಂಧಪಟ್ಟ ವಿಧೇಯಕವನ್ನು ಇಲ್ಲಿ ಮಂಡನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಒಂದು ಕೆಲಸ ಆಗಲೇ ಬೇಕು. ಬೆಂಗಳೂರಿನ ಮೆಟರ್ನಿಟಿ ಹೋಂ ಒಂದರಲ್ಲಿ ಇಂತಹ ಕೆಲಸ ನಡೆಯುತ್ತಿವೆ. ನಾನು ಈಗ ಅದರ ಹೆಸರನ್ನು ಹೇಳುವುದಿಲ್ಲ. ಗರ್ಭದಲ್ಲಿರುವುದು ಹೆಣ್ಣು ಮಗು ಎಂದು ತಿಳಿದಕೂಡಲೇ ಹೆಣ್ಣು ಮಗು ಬೇಡ ಎಂದು ಶಿಶು ಹತ್ಯೆಯನ್ನು ಮಾಡಿದರೆ ಈ ಗಂಡಸರೆಲ್ಲಾ ಎಲ್ಲಿ ಹುಟ್ಟುತ್ತಾರೆ? ತಾಯಿ ಆಗುವಂತಹ ಹೆಣ್ಣು ಎಂತಹ ಮಗು ತನಗೆ ಹುಟ್ಟುತ್ತದೆಂದು ತಿಳಿದುಕೊಳ್ಳಲು ಅಲ್ಲಿಗೆ ಹೋಗುವುದೇ ಮೊದಲನೇ ಅಪರಾಧ; ನಂತರ ತನಗೆ ಹುಟ್ಟುವುದು ಹೆಣ್ಣು ಮಗು ಎಂದು ತಿಳಿದನಂತರ ಶಿಶುಹತ್ಯೆಗೆ ಪ್ರಯತ್ನಿಸುವುದು ಮಾನವಜಾತಿಗೇ ಕಳಂಕ ತರುವಂತಹ ಕೆಲಸವಾದ್ದರಿಂದ ಈ ಕಠೋರ ಕೃತ್ಯವನ್ನು ಮೊದಲು ನಿಲ್ಲಿಸಬೇಕು. ಆದ್ದರಿಂದ ದಯವಿಟ್ಟು ಬೆಂಗಳೂರಿನ ಯಾವುದಾದರೂ ಮೆಟರ್‌ನಿಟಿ ಹೋಂನಲ್ಲಿ ಇಂತಹದ್ದು ನಡೆಯುತ್ತಿದ್ದರೆ, ಅದಕ್ಕೆ ಕೊಟ್ಟಿರುವ ಲೈಸನ್ಸ್‌ನ್ನು ರದ್ದು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಬಹಳ ಮುಖ್ಯವಾದ ವಿಷಯ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಕಡೆಗೆ ಕೂಡಲೇ ಗಮನಹರಿಸಬೇಕು. ಈಗ ನಮ್ಮಲ್ಲಿ ವುಮೆನ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಎಂದು ಮಾಡಿದ್ದಾರೆ. ಹೋದವರ್ಷದ ಮಾರ್ಚ್ ತಿಂಗಳಲ್ಲಿ ಇದಕ್ಕೆ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಬಹುಶಃ ಈ ಹಣವನ್ನು ಇಲ್ಲಿಯವರೆಗೆ ಖರ್ಚು ಮಾಡುವುದಕ್ಕೆ ಸಾಧ್ಯವಾಗಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ಕಾರ್ಪೋರೇಷನ್‌ಗೆ ಒಬ್ಬ ಮಹಿಳೆಯನ್ನು ಅಧ್ಯಕ್ಷೆಯನ್ನಾಗಿ ನೇಮಕ ಮಾಡಿಬಿಟ್ಟರೆ ಸಾಲದು ಎಂದು ನಾನು ತಿಳಿದುಕೊಂಡಿದ್ದೇನೆ. ಈ ಕಾರ್ಪೋರೇಷನ್‌ಗೆ ಗ್ರ್ಯಾಂಟ್-ಇನ್-ಏಡ್ ಸ್ಕೀಮುಗಳನ್ನು ಇನ್ನೂ ವರ್ಗಾವಣೆ ಮಾಡಿಲ್ಲ. ಈ ಕೆಲಸವನ್ನು ಮೊದಲು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ ಅಷ್ಟೇ ಅಲ್ಲ, ಈ ಕಾರ್ಪೋರೇಷನ್‌ಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಈಗ ಇದಕ್ಕೆ ಸಿಬ್ಬಂದಿಯನ್ನು ಕೊಟ್ಟಿಲ್ಲ, ಕಛೇರಿಯನ್ನು ಕೊಟ್ಟಿಲ್ಲ ಟೇಬಲ್ ಕೊಟ್ಟಿಲ್ಲ ಕುರ್ಚಿ ಕೊಟ್ಟಿಲ್ಲ. ಈ ಕಾರ್ಪೋರೇಷನ್ ಚೇರ್‌ಮನ್ ಅವರು ಡೈರೆಕ್ಟರ್ ಅವರಿಗೆ ಫೋನ್ ಮಾಡಿ ಬರಬೇಕೆಂದು ತಿಳಿಸಿದರೆ ಬರುವುದಕ್ಕೆ ತಮಗೆ ಸಮಯವಿಲ್ಲವೆಂದು ಅವರು ಉತ್ತರ ಕೊಡುತ್ತಾರೆ. ಇದು ಸರಿಯಾದ ಕ್ರಮವಲ್ಲ.

SRI G. BASAVANEPPA.—The Corporation is not Yet fully constituted. The Government of India has to nominat two members. I will expedite the matter early.

ಶ್ರೀಮತಿ ಲೀಲಾದೇವಿ. ಆರ್. ಪ್ರಸಾದ್.—ಈ ವರ್ಷದಲ್ಲಿಯೇ ಈ ಕಾರ್ಪೊರೇಷನ್‌ಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಮತ್ತು ಅದರ ಮೂಲಕ ಹೆಚ್ಚಿನ ರೀತಿಯಲ್ಲಿ ಕೆಲಸ ಆಗುವಂತಹ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ,

ಇನ್ನು ಸ್ವಯಂ ಸೇವಾ ಸಂಸ್ಥೆಗಳ ಬಗ್ಗೆ ಹೇಳಬೇಕೆಂದರೆ, ಇತ್ತೀಚೆಗೆ ಯಾವುದಾದರೂ ಮಹಿಳಾ ಮಂಡಳಿಗಳು ಹಾಗೂ ಸೋಷಿಯಲ್ ಆರ್ಗನೈಸೇಷನ್ ಅವರು ಗ್ರಾಂಟ್ ಕೇಳಲು ಬಂದರೆ. ಅವರನ್ನು ಸಂಶಯ ದೃಷ್ಟಿಯಿಂದ ನೋಡುವಂತಹ ಒಂದು ಪ್ರವೃತ್ತಿ ಈ ಇಲಾಖೆಯ ಅಧಿಕಾರಿಗಳಲ್ಲಿ ಬೆಳೆದುಬಂದಿದೆ. ನಮ್ಮ ಈ ಸೋಷಿಯಲ್ ವರ್ಕರ್ಸ್ ಒಳ್ಳೆಯ ಕೆಲಸ ಮಾಡಲು ಮುಂದೆ ಬರುತ್ತಾರೆ. ಆದ್ದರಿಂದ ಅವರಿಗೆ ಮರ್ಯಾದೆ ಕೊಡಬೇಕೇ ಹೊರತು ಅವರನ್ನು ಸಂಶಯ ದೃಷ್ಟಿಯಿಂದ ನೋಡುವುದು ಸರಿಯಲ್ಲ. ಸಮಾಜ ಕಲ್ಯಾಣ ಇಲಾಖೆ ವತಿಯಿಂದ ೩೦೦ ಕೋಟಿ ರೂಪಾಯಿಗಳನ್ನು ಸರಿಯಾದ ರೀತಿಯಿಂದ ಖರ್ಚು ಮಾಡಬೇಕಾದರೆ, ಈ ಸೋಷಿಯಲ್ ಆರ್ಗನೈಸೇಷನ್ ಅವರು ಮುಂದೆ ಬಂದರೆ ಮಾತ್ರ ಸಾಧ್ಯ ಎಂಬುದನ್ನು ಮಾನ್ಯ ಮಂತ್ರಿಗಳು ಮರೆಯಬಾರದು? ಯಾವುದು ನಿಜವಾದಂಥ ಸೋಷಿಯಲ್ ಆರ್ಗನೈಸೇಷನ್ಸ್ ಇವೆಯೋ ಅವುಗಳಿಗೆ ನೀವು ಅನುದಾನವನ್ನು ಕೊಟ್ಟರೆ, ಅದನ್ನು ಅವು ತೆಗೆದುಕೊಂಡು ಸರಿಯಾಗಿ ಹಂಚಿಕೆ ಮಾಡುತ್ತವೆ. ಇಂತಹ ಸಂಸ್ಥೆಗಳು ಮುಂದೆ ಬರದಿದ್ದರೆ ನೀವು ಈ ಮುನ್ನೂರು ಕೋಟಿ ರೂಪಾಯಿಗಳನ್ನು ಯಾರಿಗೆ ಹಂಚಿಕೆ ಮಾಡುತ್ತೀರಿ? ಆದ್ದರಿಂದ ಯಾರು ಸರಿಯಾಗಿ ಕೆಲಸ ಮಾಡುತ್ತಾರೆಂಬುದನ್ನು ನೀವು ಗುರುತು ಮಾಡಿ, ಅಂತಹ ಸೋಷಿಯಲ್ ಆರ್ಗನೈಸೇಷನ್ಸ್‌ಗೆ ಅನುದಾನವನ್ನು ಕೊಡಬೇಕು ಅಷ್ಟೇ ಅಲ್ಲ, ಅದನ್ನು ಸಮಯಕ್ಕೆ ಸರಿಯಾಗಿ ಕೊಡುವಂತಹ ಒಂದು ವ್ಯವಸ್ಥೆ ಆಗಬೇಕು. ಮುಖ್ಯವಾಗಿ ಈ ಒಂದು ಡಿಪಾರ್ಟ್‌ಮೆಂಟ್‌ನ್ನು ಮೇಜರ್ ಡಿಪಾರ್ಟ್‌ಮೆಂಟ್ ಆಗಿ ಕನ್‌ವರ್ಟ್ ಮಾಡಬೇಕು. ಈಗ ಇದು ಮೀಡಿಯಂ ಸೈಜ್ ಡಿಪಾರ್ಟ್‌ಮೆಂಟ್ ಆಗಿದೆ. ಇದನ್ನು ನೀವು ಫುಲ್‌ಫ್ಲೆಡ್ಜ್ಡ್ ಮೇಜರ್ ಡಿಪಾರ್ಟ್‌ಮೆಂಟ್ ಆಗಿ ಕನ್‌ವರ್ಟ್ ಮಾಡಬೇಕು. ಈ ರೀತಿ ಮಾಡುವಂತಹ ಶಕ್ತಿ ಮಾನ್ಯ ಮಂತ್ರಿಗಳಿಗೆ ಬರಬೇಕು ಈ ಇಲಾಖೆಯನ್ನು ಸಂಪೂರ್ಣವಾಗಿ ಮತ್ತು ಸಮಗ್ರವಾಗಿ ಬದಲಾವಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಹಿಳೆಯರಿಗೆ ಸಾಕಷ್ಟು ಪ್ರಾತಿನಿಧ್ಯವನ್ನು ಕೊಡುತ್ತೇವೆಂದು ಸರ್ಕಾರದವರು ಹೇಳಿ ಈಗಾಗಲೇ ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡಾ ೨೦ರಷ್ಟು ಮಹಿಳೆಯರು ಆರಿಸಿ ಬರಲು ಅವಕಾಶ ಮಾಡಿಕೊಟ್ಟಿದ್ದಾರೆ. ಆದರೆ ಇದು ಸಾಲದು. ಆಂಧ್ರದಲ್ಲಿ ಪ್ರತಿಯೊಂದು ಇಲಾಖೆಯಲ್ಲಿಯೂ ಸಹ ನೇಮಕಾತಿಗಳನ್ನು ಮಾಡುವಾಗ ಮಹಿಳೆಯರಿಗೆ ಶೇಕಡಾ ೨೦ರಷ್ಟು ಸ್ಥಾನಗಳನ್ನು ಮೀಸಲಿಟ್ಟಿದ್ದಾರೆ. ಆದ್ದರಿಂದ ನಮ್ಮಲ್ಲೂ ಸಹ ಅದೇರೀತಿ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಆಮೇಲೆ ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನಲ್ಲಿ ಖಾಲಿ ಬೀಳತಕ್ಕ ಹುದ್ದೆಗಳಲ್ಲಿ ೨೦ ಪರ್ಸೆಂಟ್ ರಿಸರ್ವೇಷನ್ ಫಾರ್ ಲೇಡೀಸ್ ಎಂದು ಇರಬೇಕು ಇದನ್ನು ಆಂಧ್ರಪ್ರದೇಶದಲ್ಲಿ ಜಾರಿಗೆ ತಂದಿದ್ದಾರೆ. ಕರ್ನಾಟಕದಲ್ಲೂ ಮಂತ್ರಿಗಳು ಮನಸ್ಸು ಮಾಡಿದರೆ ಆಗುತ್ತದೆ. ಇದರಲ್ಲಿ ೫ ಪರ್ಸೆಂಟ್ ಅಂಗವಿಕಲ ಹೆಣ್ಣುಮಕ್ಕಳಿಗೆ ರಿಸರ್ವ್ ಇಡಬೇಕು. ಆಂಧ್ರಪ್ರದೇಶದಲ್ಲಿ ೨೦ ಪರ್ಸೆಂಟ್ ಹೆಣ್ಣು ಮಕ್ಕಳಿಗೆ ರಿಸರ್ವೇಷನ್ ಮಾಡುವಂಥಾದ್ದನ್ನು ಜಾರಿಗೆ ತಂದಿದ್ದಾರೆ. ಕರ್ನಾಟಕದಲ್ಲೂ ಅದು ಆಗಬೇಕು. ಈ ಸಮಾಜ ಇಲಾಖೆಯನ್ನು ದೊಡ್ಡದಾಗಿ ಪರಿಣಮಿಸಿ, ಇದು ಸಮಗ್ರವಾಗಿ ೫೦ ಪರ್ಸೆಂಟ್ ಜನರನ್ನು ಕವರ್ ಮಾಡತಕ್ಕಂಥಾದ್ದು. ಈ ಇಲಾಖೆಯ ಬೇಡಿಕೆಗಳನ್ನು ಸ್ವಾಗತಿಸುತ್ತೇನೆ; ಇಷ್ಟನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

2-00 P. M.

† SMT. MUKTARUNNISA (Narasimharaja).—First of all I would like to seek one clarification from the Hon'ble Minister. This is the report on the Women and Children Welfare Department. But while

going through the Report, I find in page 30 (G) that there is a mention about the State Home for Men. Hubli and District Centres for Men at Belgaum and Mysore. I am surprised to see why men are interferring in the Annual Report on the Women and Children Welfare Department. I request the Hon'ble Minister to kindly clarify because it looks very awkward.

Sir, the budget for the Women and Children Welfare Department has been increased from 538 lakhs to 7279 lakhs within a period of ten years. Along with this financial target, physical achievement and relevant figures are not furnished in this Annual Report. I would like to know as to what are your achievements? Unless the achievement is shown, it is not possible to assess the progress made. We will not know as to the entire amount allotted has been spent o lapsed during the particular year. The Women Welfare and Children Welfare Department was created during the International Women Year 1975 during the regime of our late Prime Minister Indira Gandhiji. At that time, most of the workers from the Rural Development Department were transferred to Women and Children Welfare Department, with a view to utilising their rich knowledge and experience like lady officials in Anganawadis etc., Unfortunately. the fate and future of the lady officials is at stake. The Strength of the women officials is 1200 in this Department as against the total strength of 3000. Why? Why women are at the back of the men? Women are wandering on the roads without jobs. Out of 3000 Government officials in this Department, there are only 1200 Women officials. Is it justice I would like to know from the Hon ble Minister. I have got every right to ask this Today the whole country knows that the population of women is more than 52%. Even then, men are grabbing all our chances in all fields more particularly in the Women and Children Welfare Department. In the political field, also our woman Minister is sitting quiet and you are not given any chances for her to reply. You know that women are hard workers and they are sincere always. There are many women I P.S. officers. You must have heard about Mrs. Kiran Bedi. an important I.P.S. Police Officer There are so many lady I. A. S. officers in the rank of Commissioners, Secretaries, Divisional Commissioners etc. There are women Pilots also. Smt. Indira Gandhi was the first woman Prime Minister of our country. Women have earned good name in politics also, know Women even Karate, Motor-driving etc.. and in all fields, women are experts. Unfortunately men grab all the chances, even in the Women and Children Welfare Department. In Women and Children Welfare Department, there are gramasevikas, Balasevikas Gruhasevikas, Mukyasevikas, Supervisors in Anganawadi etc. These are the categories in this

Department. I congratulate the Hon'ble Minister because he has expanded the activities in this Department. The package service of Anganawadi is given effect in many taluks and districts. There are lot of promotional avenues for lady officials. Unfortunately, lady officials are treated very badly by men and their promotional avenues have been knocked off by men officials. If any justice is caused to men, they can fight even physically. But women cannot do like that. All the promotional avenues have been swallowed by men officials and women officials are virtually deprived of their promotional chances in their own field of service.

I will tell you one example. In Tamil Nadu, Andhra Pradesh. Kerala Gramasevikas, Mukhyasevikas have been promoted to the supervisors and Child Development Project Officers respectively. In some centres Mukhya sevikas have been promoted as Assistant Directors also in Tamil Nadu and Kerala and Andhra Pradesh. In our district administration nothing has happened.

SRI G. BASAVANNAPPA.—Here also in our state Supervisors has been promoted as CDPOs.

SMT. MUKTHARUNNISSA.—Please give me the list.

SRI G. BASAVANNAPPA.—Anganawadi workers are honorary workers. They cannot be treated on par with Government servants.

SMT. MUKTHARUNNISSA.—You are extending the scheme of Anganawadi, In Karnataka all posts of CDPOs and Assistant Directors have gone to the clerical officials of the Remand Home Section. The most important surprising thing is that 300 posts of female servants in Family and Child Welfare Projects, have been abolished as per the recommendation of the high officials. Why it is abolished ? I want the reply tomorrow. Instead of extending the benefit of the women welfare schemes the concerned area, such prominent post meant for ladies are abolished it has resulted in the loss of job apportunities.

SRI G. BASAVANNAPPA.—It is not in our department, It may be in Health and Family Welfare Deparment.

SMT. MUKTHARUNNISSA.—Under the above circumstances, I would request the Hon. Speaker to look into it and Government may be directed to issue instructions to the Director of Women and Children Welfare on the following suggestions.—

1. Government Order of abolishing about recently should be withdrawn.
2. All vacant posts of Gramasevikas and Balasevikas should be filled immediately. 50% of the vacancies must be filled up

by Anganawadi (SSLC Candidates) Workers and remaining 50% by the direct candidates.

3. All senior supervisors and Mukhyasevikas should be considered to promote as CDPOs to all promotional vacancies.

Recruitment rules framed according to their conveniant may be amended benefitting the above women functionaries. That is my humble suggestion and request to you.

I would like to mention about the voluntary organisations. Mahila Voluntary and Co-operative Societies are not getting full co-operation and grant-in-aid from the Director of Women and Children Welfare Smt. Leeladevi Prasad also mentioned, that in time they do not received the grant. Any grant which is due to the voluntary organisation is not released in time. Due to that so many voluntary organisations are closed. So many women co-operative societies are closed. Instead voluntary women organisations are recognised, but grants are not released in time. Lot of lower level corrupt practices are encouraged. I do not know whether it comes to your notice or not There is corrupt practice in lower leval. Many women co-operatives have not been considered in giving tenders for supplies of rations. supply of food to the Government institutions like the State Home. Beggars' Home Deaf and Dumb School Instead they take ration from the Janata Bazars. Nowadays the Janata Bazars are also running under loss. Some Janata Bazars are closed. My appeal is that the women co-operative societies in each district should be given a chance to supply the ration to the orphanages, destitute home, State Home, Deaf and Dumb school and to encourage the Mahila societies.

Can I ask the concerned Minister as to whether the Govarnment and the Department are really doing sincere efforts in establishing Mahila organisations in all levels like Mahila Mandals Mahila Federation and Multipurpose Women Co-operatives in the District Level. The purpose of involving rural local women in economic activities will be achieved by entrusting all supplies to the women organisation. That is my aim.

There is a most important scheme called 'STEP' i.e., Support to Employment Programme. Government of India have spensored many grant-in-aid, women welfare scheme. Women Welfare Minister Mr. Margaret Alva use to tell that the Director of Women and Children Welfare has not availed benefits of these schemes for batterment and economic upliftment of rural women. I will give one or two examples as to how a lot of grant-in-aid funds from Central

Government has been lapsed, by the Directer. EX: 'STEP'- support to employment programme for women and short-stay home for orphan girls and women are started during 1986. But, no voluntary agency has been sanctioned with this scheme during 1986 and 1987. Is not the money lapsed? I do not know whether the State Government is aware of this scheme or not. It is the duty of of the Government. They should inform the voluntary organisation with literature, or notice or advertisement or TV advertisement or paper advertisement, that such a scheme is there for women, for the benefit of women and for the development of women and for the welfare of women. Then, all the voluntary organisation will come to take that benefit. But, they have not informed such a beautiful scheme like STEP and the money is lapsed. Like that so many schemes are lapsed. If the Government is aware of these things, why Director of Women and Children Welfare should not be dealt for her omissions and neglect of her duties? I would like to ask the the Minister.

There is another thing. Free supply of Nutrisious Food, health check and Immunisation to poor children and women, free pre-school education to children. free adult education to mothers and imparting education on health and nutrition to mother in the rural areas are main package of services made available under Anganwadi scheme. These are the schemes which are under Anganwadi.

If this scheme is sincerely implemented no child should die due to malnutrition and no child should be born with blindness in Anganwadi villages.

I remember, it must be last year, 1987, more than 16 children died due to malnutrition and 40 infants of one village called Pollenahalli in Madhugiri Taluk were admitted in the Tumkur General Hospital. This happened in the taluk where Central Government anganwadi scheme is in force for the last 3 or 4 years. No action has been taken against the concerned CDPO, Supervisors and Health Staff for this mass killing. What is the report given, what action has been taken, nobody knows. Because they are children nobody has come forward. If there were important persons like ministers or any officer there would have been full galaata here on the floor of the House. Because they are children who have died you have not taken action. I would requests you to see that Anganwadi scheme is implemented according to Government of India scheme.

On page No. 13 you have said Creches for children of working women have been started in rural areas. Mostly these women workers are agricultural labourers or casual labourers. But,

unfortunately, these grants creches have not been given by the Zilla Parishads during 1987–88 to the voluntary organisations who are running theses creches. Why it is delayed ? Even grants for destitute cottages i.e., orphanage institutions have not been released. Many a time the vdontary organisations approach the concerned office but for small mistakes the files are sent back for some clarification and in the process it will take more than a year and they will not receive the grant. Like this many destitute cottages and creches have not received their grants in 1987–88.

On page-7 you have mentioned about Thaliya Bhagya, a famous scheme which the Janata Government had introduced. It is a failure. It has gone. But it is mentionee hare that 3, All couples were benefitted. The amount spent is Rs. 350 on each couple. I would like to ask whether this amount is mean both for Thali and clothing ?

SRI G. BASAVANAPPA.—It is separate.

SMT. MUKHTARUNNISA.—But it is mentioned here. I am happy that Thaliya Bhagya scheme is closed now. Whether those marriages which were conducted were successful ? Now you are saying that Assembly would be dissolved. Whether they will also dissolve and send back their Thali ?

Coming to the "Physically Handicapped", since 2 or 3 years the demand for a separate department for the welfare of physically handicapped is pending in the Government. It is a very important department which should be started immediately. It is my suggestion that experienced officers should be posted to that department and sponsor full benefit to the physically handicapped per ons. Otherwise, it is a sin to us. So at least you form a separate department for the welfare of the physically handicapped and appoint experienced person, whether he is a man or woman and give full benefit to the handicapped persons.

Sir, I am happy to read that "Women Development Corporation", which I had asked for last time, has been formed on 1-9 1987 and the Chairman and Managing Director is appointed on 17-2-1988. What is the achievement of that Corporation since 1-9-87; how much financial assistance was given ? are not mentioned. This is a very very important Corporation to promote women enterprenuers, help them in marketing and other income generating schemes, which are very important. When you have started this Women Development Corporation you should sanction more finance to it. I suggest that all grant-in-aid-schemes and income generating schemes now implemented by voluntary organisations may be transferred to the Women Development Corporation immediately so that the corporation can

start functioning right now. Further. I would like to suggest that a Women Officer of the Department of Women Welfare who has both theoretical and practical knowledge of women welfare scheme be posted as Managing Director of that Corporation.

About ICDS, 30 Integrated Child Development schemes sanctioned by the State Government have not been brought under Saturation programme by sanctioning additional sufficient Anganwadis to 30 development blocks. Now the saturation programme for the State's ICDS projects may be sanctioned immediately. Otherwise, the Government will be making discrimination between the children of one village and that of another village in the same development block of ICDS. Necessary steps may please be taken in this regard.

Regarding "Nutrition" programme, as per the instructions of the Government of India the Special Nutrition Programme which is a mere feeding programme, may please be converted into Anganawadi Scheme which is providing a package of services to the poor children and mothers, ಕುಂಬಳಕಾಯಿಯನ್ನು ತಿನ್ನಬಹುದು, ಹೀರೇಕಾಯಿಯನ್ನು ತಿನ್ನಬಹುದು, ಕಡ್ಲೇಕಾಯಿಯನ್ನು ತಿನ್ನಬಹುದು, ತೆಂಗಿನಕಾಯಿ ತಿನ್ನಬಹುದು, ಆದರೆ ಆಗ್ರೋ ಫುಡ್ ಇದೆಯಲ್ಲ ಅದನ್ನು ಮಕ್ಕಳು ತಿನ್ನುವುದಕ್ಕಾಗುವುದಿಲ್ಲ. That is just like powder which is used for animals. You are spending crores of rupees under the nutrition programme and provide mid-day meals. So this special nutrition programme which is a mere feeding programme may please be converted into Anganawadi scheme. I don't understand why this issue is still pending, Within the same budget allocation of funds, without any additional financial burden this issue can be settled. It is not difficult. I hope this Government will do it without delay.

Then about Scholarship Grants to Backward Classes Hostels and SC/ST Hostels, the allotment is delayed due to lot of corruption in districts/talukas. It has come to my notice. I don't want to express the name. Voluntary agencies and hostels are suffering a lot of trouble due to discouragement and delays by the department. Further, while giving grants, the quantity and quantum of food per student my be taken into account instad of so much of rupees per boy or girl. This is my humble suggestion which may please be considered for the benefit of Backward Classes, SC/STs, minorities and poor students.

In Mysore district Kollegal Taluka there is a big tribal colony called Poonachi which 12-15 KMs from Tala Betta in M.M. Hills. Whatever programmes sanctioned to Poonachi tribes, all have been located and started at Tala Betta. Actually no child or woman of Poonachi tribal is getting benefit of the scheme. Has it come to the notice of the Government ? Have you visited that area ?

SRI G. BASAVANNAPPA.—I kave personally visited that place. I don't think there is any discrimination.

SMT. MUKHTARUNNISA.—That tribal area is at a distance of 12 to 15 KMs from Tala Betta. People are getting benefit at Tala Betta. But whether tribals are benefitted ? you please check up, and also who is responsible ? Otherwise, I would not have put this question.

On page No. 21 you have mentioned about Dowry Prohibition Act and Supression of Immoral Traffic Act. You always mention about dowry in your report. We used to read in the newspapers about murders taking place for want of dowry. Since three years I am here I have been asking to form a Small or Mini Court to do justice to the victims of dowry. because many cases will not go direct to the Womens Court. It is also very difficult for the courts to dispose of the cases early. So. I request you to form Mini Courts which can look into the cases of victims of dowry.

About child labour, you know that children work from the morning till evening in Agarbathi factories, hotels, beedi factories, etc. But unfortunately they are not getting full wages. Their age ranges between 12 to 15 years. What an elder person does the same work is done by the child also You please pay a visit to hotels where so many children come to you to take out your plates and wash the tables. Are they getting full wages ? No. Even in agarbathi industry also you have not implemented the Childrens welfare. I am very sorry to say that no body has come forward to the rescue of the children. They are suffering. On the other hand you say you are providing nutritious food. clothing, scholarship and free education. but at the same time they are exploited in these industries. The owners/employers who are taking the benefit of the child labour should be put behind the bar.

Lastly. I would like to say a few words about our Vehicles Department. Sir, when I visited London in 1975 somebody came and invited me for a dinner there. I was surprised to know that the dinner is hosted there to the persons who haveobtained a driving licence. Greeting cards are sent for having obtained a licence. But here you can get a driving licence by just entering into the RTO's office. The most important purpose of issuing a licence is to see that safety is maintained. But here any one can get a licence. I don't know driving, but I have got a driving licence. how? Even children in the agro group of 14 or 15 years have obtained licence by paying Rs. 100 or Rs. 200. I am unfit to drive, still I have a licence.

2-30 p. m.

SRI A. LAKSHMISAGAR.—Please don't drive.

SMT. MUKTARUNNISA — I am unfit to drive but I got the licence. I cannot drive and i. I drive, I will commit hundred accidents, The point is, I got the licence.

ಶ್ರೀ ಎ. ಲಕ್ಷ್ಮೀಸಾಗರ್.— ಸ್ವಲ್ಪ ಕೇಳಿ, ನಿಮ್ಮ ಹತ್ತಿರ ಡ್ರೈವಿಂಗ್ ಲೈಸೆನ್ಸ್ ಇದೆ. ಸಿಂಧ್ಯಾರವರ ಕಾನೂನಿನ ಪ್ರಕಾರ ನೀವು ಮೋಟಾರನ್ನು ದಯ ಮಾಡಿ ಬಿಡಬೇಡಿ.

SMT. MUKTARUNNISA.— There is some age limit which they should follow. The Hon'ble Minister will not be able to know what is happenning at the lower levels. 14 years boy and 12 years boy are having driving licence They are driving mopeds and motor cycles. I can bring those boys if you want. They are in my family but I don't know how they got it. I refused to buy a motor cycle but he brought the licence. This is the work of the middleman or brokers who are doing all these illegal acts. If you just approach a broker, you will be able to get a licence within 3-4 hours. There is a big recket in RTO's Office and the Hon'ble Minister should take steps to eliminate the brokers. If you want a driving licence or to pay a tax or to renew the driving licence or to get an insurance cover, these brokers will do the job within 2 days for which the RTO office peiple will takeatleast a week. Even if we, influential people. go there, it will take one week out theseLbbrokers will get it done within 2 days. Thisdriving licence is very important and it should not be issuedliberally. Unfit and handicapped people are getting driving licence with the help of brokers.

Regarding drivers taking drinks before they start the bus, you can have a Cell and before they start the bus, you can see whether they have taken drinks or not.

I will narrate my experience whenever I used to travel on Bangalore-Mysore route. There is no jack and tyre i.e., stephney in KSRTC buses. Once, there was a puncture near Channapatna and there was no jack and tyre (Stephney) People have to put to great inconvenience. The driver had to go in another vehicle to bring the tyres. Actually the passengers were so angry that they started abusing the driver and were about to beat the driver. It is not the driver's mistake. I had to control the angry passengers. Therefore I request you to kindly see that spare tyres (stephnies) are provided to each bus. You are collecting life time tax and what has happened to that money ? please see that extra tyres and other equipments are provided in each bus so that the driver should not face any difficulty.

Then, Sir, there is a "Sugestion Box" in the KSRTC buses but there is no lock. The 'suggestion box' should be locked and the key should not be given to the driver. It should be opened by your Officer. Once I was very angry about the poor service and wrote my suggestion and put it on the 'suggestion box' but later I saw that both the Driver and the Conductor were reading it. That should not happen. It is an insult to us.

Then, there is a "First Aid Box" in the buses but it is only a board and no medicines are there. Action should be taken to provide necessary medicines etc., so that the First Aid Box will really be useful to the passengers in times of emergency.

There are certain minor thinge like taking some passengers in cabins or keeping some luggages in cabins etc., For one or two rupees, they do all taese thing and no serious attention be taken on these minor things

As regards bus stands there is some improvement. I congretulate the Hon'ble Minister for this. But still lot of things to be dona. He should take more interest and improvs things. He is an enthusiastic person and he will definitely improve the transport fecilities in our State He should take action to improve this KSRTC and the Motor Vehicles Department. We will congratulate him and we will do 'Sanman' if he take steps to run this Department on profit lines.

I thank the Chair for having given me this opportunity to speak a few words on all these demends.

ಅಧ್ಯಕ್ಷರು.—ಮಾನ್ಯ ಧರ್ಮಸಿಂಗ್‌ರವರು ಮಾತನಾಡಿ.

ಶ್ರೀ ಪಟವುಕ್ಕಿ ರತ್ನಾಕರ್.—ನಾವು ಊರಿಗೆ ಹೋಗಬೇಕಾಗಿದೆ. ಈಗಾಗಲೇ ಸಮಯ ಎರಡೂವರೆ ಗಂಟೆಯಾಗಿದೆ.

ಅಧ್ಯಕ್ಷರು.—ನೀವು ಊರಿಗೆ ಹೋಗಬೇಕಾದರೆ ಹೋಗಿ. ನಾನು ಹೇಳುವುದನ್ನು ಕೇಳಿ, ಈ ಸದನ ನಡೆಸುವುದಕ್ಕೆ ನನಗೂ ಜವಾಬ್ದಾರಿಯಿದೆ. ಸದನದ ಕಾರ್ಯಕಲಾಪ ಸಮಿತಿಯ ಅಡ್ವೈಸ್ ಪ್ರಕಾರ ನಾನು ಕೆಲಸ ನಡೆಸಬೇಕಾಗುತ್ತದೆ. ಇಲ್ಲಿಯವರೆಗೆ ೨೩ ದಿವಸ ಚರ್ಚೆ ನಡೆಸಿದ್ದೇವೆ, ೩೪ ಡಿಮಾಂಡ್‌ಗಳನ್ನು ಪಾಸ್ ಮಾಡಿದ್ದೇವೆ. ಇನ್ನು ಉಳಿದಿರತಕ್ಕ ನಾಲ್ಕೈದು ದಿವಸಗಳಲ್ಲಿ ೩೦ ಡಿಮಾಂಡ್‌ಗಳನ್ನು ಪಾಸ್ ಮಾಡಬೇಕಾಗಿದೆ ಸದನದ ಕಾರ್ಯಕಲಾಪ ಸಮಿತಿಯ ತೀರ್ಮಾನದ ಪ್ರಕಾರ ೧೭ನೇ ತಾರೀಖಿಗೆ ಎಲ್ಲಾ ಡಿಮಾಂಡ್‌ಗಳು ಪಾಸ್ ಆಗಬೇಕು. ನಾವು ಜವಾಬ್ದಾರಿಯಿಂದ ಸಭೆಯನ್ನು ನಡೆಸಬೇಕು, ನೀವು ಜವಾಬ್ದಾರಿಯಿಂದ ಮಾತನಾಡಬೇಕು, ನಾನು ಸದನದ ಕಾರ್ಯಕಲಾಪ ಸಮಿತಿಯ ತೀರ್ಮಾನದಂತೆ ಹೋಗಬೇಕು ಐದು ದಿವಸಗಳಲ್ಲಿ ೩೦ ಡಿಮಾಂಡ್‌ಗಳನ್ನು ಮುಗಿಸಬೇಕು. ನಾನು ಹೇಳುವುದನ್ನು ಸ್ವಲ್ಪ ದಯಮಾಡಿ ತಿಳಿದುಕೊಳ್ಳಿ. ನನ್ನದು ಡ್ಯೂಟಿ ಇದೆ, ಐದು ದಿವಸಗಳಲ್ಲಿ ೩೦ ಡಿಮಾಂಡ್‌ಗಳು ಪಾಸ್ ಮಾಡಬೇಕು. ನಾಲ್ಕು ದಿವಸಗಳಲ್ಲಿ ಮುಗಿಯಲಿಲ್ಲ ಅಂದರೆ ೫ನೇ ದಿವಸ ಗಿಲೆಟಿನ್‌ಗೆ ಹಾಕಬೇಕಾಗುತ್ತದೆ. ಅಂದರೆ ಡಿಸ್‌ಕಷನ್ ಇಲ್ಲ, ಏನೂ ಇಲ್ಲ ಏಕದಂ ಪಾಸ್ ಮಾಡುವುದು. ನಿಮ್ಮ ಹಕ್ಕಿಗೆ ಅಡ್ಡಿ ಬರಬಾರದು ಎಂದು ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಸಾಕಷ್ಟು ಮಾತನಾಡಿದ್ದೀರಿ. ೧೭ನೇ ತಾರೀಖು ಕೊನೆಯ ದಿವಸ ಎಷ್ಟು ಡಿಮಾಂಡ್‌ಗಳು ಉಳಿಯುತ್ತವೆಯೋ ಅವುಗಳೆಲ್ಲವನ್ನು ಗಿಲೆಟಿನ್‌ಗೆ ಹಾಕಬೇಕು. ನಿಮ್ಮೆಲ್ಲರ

ಹಿತದೃಷ್ಟಿಯಿಂದ ಸ್ವಲ್ಪ ಸ್ವಲ್ಪ ಮಾತನಾಡಲಿ ಎಂದು ಅವಕಾಶ ಕೊಟ್ಟಿದ್ದೇನೆ. ೧೭ನೇ ತಾರೀಖು ಎಲ್ಲಾ ಡಿಮಾಂಡ್‌ಗಳು ಮುಗಿಯಲೇಬೇಕು.

ಶ್ರೀ ಆರ್. ಎನ್. ನಾಯಕ್.—ನೀವು ಅರೇಂಜ್ ಮಾಡುವಾಗ ಸರಿಯಾದ ರೀತಿಯಲ್ಲಿ ಮಾಡಬೇಕು, ಸದನದ ಕಾರ್ಯಕಲಾಪದ ಸಮಿತಿಯಲ್ಲಿ ಸರಿಯಾಗಿ ಮಾಡಬೇಕು.

ಅಧ್ಯಕ್ಷರು.— ಸದನದ ಕಾರ್ಯಕಲಾಪ ಸಮಿತಿಯಲ್ಲಿ ವಿರೋಧಪಕ್ಷದ ನಾಯಕರು ಉಪ ನಾಯಕರು, ಸಭಾನಾಯಕರು ಎಲ್ಲರೂ ಇರುತ್ತಾರೆ. ನಾಯಕ್‌ರವರೇ ನಾನು ಹೇಳುವುದನ್ನು ಸ್ವಲ್ಪ ಕೇಳಿ. ಸದನದ ಕಾರ್ಯಕಲಾಪ ಸಮಿತಿಯಲ್ಲಿ ನಾನೇ ಅಧ್ಯಕ್ಷನಾಗಿರುತ್ತೇನೆ, ಅದರಲ್ಲಿ ಮುಖ್ಯಮಂತ್ರಿಗಳು ಇರುತ್ತಾರೆ, ವಿರೋಧ ಪಕ್ಷದ ನಾಯಕರು ಎಲ್ಲಾ ಪಕ್ಷಗಳ ನಾಯಕರುಗಳು ಇರುತ್ತಾರೆ ಒಬ್ಬಿಬ್ಬರು ಮಂತ್ರಿಗಳು, ಹಿರಿಯ ಸದಸ್ಯರುಗಳು ಇರುತ್ತಾರೆ, ಅವರೆಲ್ಲರೂ ಕುಳಿತು ಕೊಂಡು ತೀರ್ಮಾನ ಮಾಡಿದ್ದಾರೆ.

ಶ್ರೀ ಆರ್. ಎನ್. ನಾಯಕ್.—ಇಷ್ಟೆಲ್ಲಾ ಬುದ್ಧಿವಂತರು ಇರುವಾಗ ಏತಕ್ಕೆ ಹೀಗಾಯಿತು ? ಏನಾದರೂ ವ್ಯವಸ್ಥೆ ಮಾಡಲು ಸಾಧ್ಯವಾಗುತ್ತದೆಯೋ ಎಂಬುದನ್ನು ನೋಡಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ನಾಯಕ್ ಅವರಿಗೆ ಬಹುಶಃ ವಿಚಾರ ಗೊತ್ತಿಲ್ಲವೆಂದು ಕಾಣುತ್ತದೆ. ಹಿಂದಿನ ವರ್ಷಗಳಲ್ಲಿ ಈ ಇಲಾಖೆಗಳ ಮೇಲೆ ಚರ್ಚೆಯಾಗುತ್ತಿದ್ದುದು ೨೧-೨೨ ದಿನಗಳು ಅಷ್ಟೆ. ಈ ಸಲ ೩೦ ದಿನಗಳು ಇರಬೇಕೆಂದು ತೀರ್ಮಾನವಾಗಿ ಅದರ ಪ್ರಕಾರ ಕ್ಯಾಲೆಂಡರ್ ಆಫ್ ಈವೆಂಟ್ಸ್‌ನ್ನು ಹಾಕಿಕೊಂಡಿದ್ದೇವೆ. ಏತಕ್ಕೋಸ್ಕರ ನಿಧಾನ ಆಯಿತು ಎಂಬುದು ತಮಗೇ ಗೊತ್ತಿರತಕ್ಕಂಥದ್ದು. ಆದ್ದರಿಂದ ಇರತಕ್ಕಂಥ ಬೇಡಿಕೆಗಳ ಮೇಲೆ ಚರ್ಚೆ ನಡೆಸತಕ್ಕಂಥ ಸಂದರ್ಭ ದಲ್ಲಿ ಆದಷ್ಟು ಕ್ಲುಪ್ತವಾಗಿ ಹೇಳಬೇಕಾದುದನ್ನು ಬೇಗ ಹೇಳತಕ್ಕದ್ದು. ಈ ಪ್ರಯತ್ನ ಎಲ್ಲರಿಂದಲೂ ಆಗಬೇಕು. ಇಲ್ಲದಿದ್ದರೆ ಚರ್ಚೆಯೇ ಇಲ್ಲದೆ ಎಲ್ಲಾ ಬೇಡಿಕೆಗಳನ್ನು ಕೊನೆಯ ದಿನ ಓಟಿಗೆ ಹಾಕಬೇಕಾಗುತ್ತದೆ. ಇದು ಪರಿಸ್ಥಿತಿ ಇರತಕ್ಕದ್ದು. ದಯಮಾಡಿ ತಾವು ಸಹಕಾರ ಮಾಡಬೇಕು. ಈಗ ಎರಡು ಗಂಟೆಯಾಯಿತು, ಎರಡೂವರೆಗೆ ಮನೆಗೆ ಹೋಗುತ್ತೇವೆ ಎಂದು ಇಟ್ಟುಕೊಳ್ಳಿ ಈ ಬೇಡಿಕೆಗಳ ಮೇಲೆ ಚರ್ಚೆ ಮುಗಿದ ಮೇಲೆ ಉತ್ತರ ಆಗಬೇಕು. ಆದ್ದರಿಂದ ದಯವಿಟ್ಟು ನಾವೆಲ್ಲರೂ ಇದರ ಬಗ್ಗೆ ಪೂರ್ಣವಾದಂಥ ತಿಳುವಳಿಕೆಯ ಆಧಾರದ ಮೇಲೆ ನಡೆಯಬೇಕಾಗುತ್ತದೆ.

ಶ್ರೀ ಆರ್. ಎನ್. ನಾಯಕ್,—ಇವತ್ತು ಊರಿಗೆ ಹೋಗತಕ್ಕಂಥ ಜನ ಇದ್ದಾರೆ ಉಳಿದ ದಿನಗಳಲ್ಲಿ ಕಾಲಾವಧಿಯನ್ನು ಹೆಚ್ಚು ಇಟ್ಟುಕೊಳ್ಳಿ. ಬಾಕಿ ದಿವಸ ಜಾಸ್ತಿ ಮಾಡಿ. ಬೆಳಿಗ್ಗೆ ಒಂಭತ್ತು ಗಂಟೆಯಿಂದ ರಾತ್ರಿ ಒಂಭತ್ತು ಗಂಟೆಯವರೆಗೆ ಮಾಡಿ. ಯಾರು ಬೇಡ ಎನ್ನುತ್ತಾರೆ ?

ಶ್ರೀ ಧರ್ಮಸಿಂಗ್.—ಸೋಮವಾರ ದಿವಸ ಬೆಳಿಗ್ಗೆಯಿಂದ ರಾತ್ರಿತನಕ ಬೇಕಾದರೆ ಕುಳಿತು ಕೊಳ್ಳೋಣ.

ಅಧ್ಯಕ್ಷರು.—ಆಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಇದೆಲ್ಲ ಯೋಚನೆ ಮಾಡಿ ೨೧ನೇ ತಾರೀಖಿಗೆ ಮುಗಿಸತಕ್ಕಂಥ ಕಾರಣ ಏನು ಎಂದರೆ ನಾವು ಚುನಾವಣೆಗೆ ಹೋಗಬೇಕು ನೀವೂ ಚುನಾವಣೆಗೆ ಹೋಗಬೇಕು. ತಮ್ಮ ಪಕ್ಷದ ನಾಯಕರ ಪೂರ್ಣವಾದ ತಿಳುವಳಿಕೆ ಆಧಾರದ ಹಿನ್ನೆಲೆಯಲ್ಲಿ ಈ ತೀರ್ಮಾನವನ್ನು ತೆಗೆದು ಕೊಂಡಿದ್ದೇವೆ. ಈಗ ನಾವೆಲ್ಲರೂ ಚುನಾವಣೆಗೆ ಹೋಗಬೇಕಾಗಿದೆ. ಅದಕ್ಕೋಸ್ಕರ ಈ ೨೦ ದಿನಗಳು. ಇದೆಲ್ಲವನ್ನೂ ಗಣನೆಗೆ ತೆಗೆದುಕೊಂಡು ಈ ತೀರ್ಮಾನಕ್ಕೆ ಬಂದಿರುವುದು. ಈ ಸಭೆ ನಡೆಯತಕ್ಕಂಥ ಸಮಯದಲ್ಲಿ ಚುನಾವಣೆ ಬರುತ್ತದೆ ಎಂದು ಜುಲೈ ೩ನೇ ತಾರೀಕಿನವರೆಗೆ ಅವನ್ನು ಮುಂದೂಡುವುದ ಕ್ಕೋಸ್ಕರ ಆ ಪ್ರಯತ್ನವನ್ನೂ ಕೂಡ ಮಾಡಿದ್ದೇವೆ. ಇದು ತಮ್ಮ ಗಮನಕ್ಕೆ ಬಾರದೇಹೋದರೆ ಅದಕ್ಕೆ ನಾನು ಕಾರಣ ಅಲ್ಲ, ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡೇ ಈ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು.—ಶ್ರೀ ಧರ್ಮಸಿಂಗ್‌ರವರೇ, ನೀವು ಮಾತನಾಡಿ.

† ಶ್ರೀ ಧರ್ಮಸಿಂಗ್.—(ಜೇವರ್ಗಿ).—ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಇಬ್ಬರು ಮಂತ್ರಿಗಳು ತಮ್ಮ ಬೇಡಿಕೆಗಳನ್ನು ಮಂಡಿಸಿದ್ದಾರೆ. ನಾನು ಇವತ್ತಿನ ದಿವಸ ವಿಶೇಷವಾಗಿ ಸಾಮಾಜಿಕ ಕಲ್ಯಾಣ

ಮಂತ್ರಿಗಳು ಮಂಡಿಸಿದ ಬೇಡಿಕೆಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ಸಾಕಷ್ಟು ಸದಸ್ಯರು ಈ ಒಂದು ಬೇಡಿಕೆಯ ಮಹತ್ವದ ಬಗ್ಗೆ ಮಾತನಾಡಿ ನಾನಾ ಕೆಲಸ ಕಾರ್ಯಗಳು ಆಗಬೇಕು ಎಂದು ಹೇಳಿ ಇದರ ಗಂಭೀರತೆ ಬಗ್ಗೆ ಕೂಡ ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ ಈಗಾಗಲೇ ಶ್ರೀಮತಿ ಮುಕ್ತಉನ್ನೀಸಾ ಬೇಗಮ್. ಅವರಾಗಲೀ ಶ್ರೀ ಪ್ರತಾಪಚಂದ್ರಶೆಟ್ಟಿಯವ ರಾಗಲೀ ಎಲ್ಲರೂ ಕೂಡ ಈ ಸಮಾಜ ಕಲ್ಯಾಣ ಇಲಾಖೆ, ಇದು ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಕೆಲಸ ಮಾಡತಕ್ಕಂಥ ಇಲಾಖೆ, ಹರಿಜನ ಗಿರಿಜನ ಸಮಸ್ಯೆಗಳ ಬಗ್ಗೆ ಕೆಲಸ ಮಾಡತಕ್ಕಂಥ ಇಲಾಖೆ, ಮಹತ್ವವಾದ ಇಲಾಖೆ ಎನ್ನತಕ್ಕಂಥ ರೀತಿಯಲ್ಲಿ ಕೂಡ ಪ್ರಸ್ತಾಪ ಮಾಡಿದ್ದಾರೆ ನಾನು ಈ ಇಲಾಖೆಯ ಬೇಡಿಕೆಗೆ ಸಂಬಂಧಿಸಿದಂತೆ ನಿಮ್ಮ ಪರ್‌ಫಾರ್ಮೆನ್ಸ್ ಬಡ್ಜೆಟ್ ಏನಿದೆ ಅದನ್ನು ಕೂಡ ನೋಡಿದ್ದೇನೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥ ೫೬ ಲಕ್ಷ ಜನರು ಪರಿಶಿಷ್ಟ ಜಾತಿಗೆ ಸಂಬಂಧಪಟ್ಟವರು ಇದ್ದಾರೆ

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಸುಮಾರು ೧೯ ಲಕ್ಷ ಶೆಡ್ಯೂಲ್ಡ್ ಟ್ರೈಬ್‌ನವರು ಇದ್ದಾರೆ. ಮತ್ತು ೫೦-೬೦ ಪರ್ಸೆಂಟ್‌ನಷ್ಟು ಹಿಂದುಗಡೆ ವರ್ಗಗಳಿಗೆ ಸಂಬಂಧಪಟ್ಟವರು ಇದ್ದಾರೆ. ಇದು ತಮಗೆಲ್ಲರಿಗೂ ಗೊತ್ತಿದೆ, ಇಂತಹ ಒಂದು ಇಲಾಖೆಯನ್ನು ತಾವು ನಿರ್ವಹಣೆ ಮಾಡುತ್ತಿದ್ದೀರಿ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಶ್ರೀಮಾನ್ ವಿ. ಎಲ್. ಪಾಟೀಲರು ಸಮಾಜ ಕಲ್ಯಾಣ ಮಂತ್ರಿಗಳಾಗಿದ್ದಾಗ ನಾವು ಅಷ್ಟೇನೂ ಅಪೇಕ್ಷೆಯನ್ನು ಅವರಿಂದ ನಿರೀಕ್ಷಣೆ ಮಾಡಿರಲಿಲ್ಲ. ಏಕೆಂದರೆ ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಅವರು ಕೂಡ ಹಿಂದುಳಿದ ವರ್ಗಕ್ಕೆ ಸಂಬಂಧಪಟ್ಟವರು ಆಗಿದ್ದರು, ಇವತ್ತು ನಾನು ತಮ್ಮನ್ನು ಬಹಳ ವರ್ಷಗಳಿಂದ ಬಲ್ಲೆ. ತಾವು ಹಿಂದೆ ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ನ ಅಧ್ಯಕ್ಷರಾಗಿ ಕೆಲಸ ಮಾಡಿದ್ದೀರಿ. ಕರ್ನಾಟಕ ರಾಜ್ಯದಲ್ಲಿ ೧೯೭೮ ರಿಂದ ರಾಜಕೀಯ ಪರಿಸ್ಥಿತಿ ಬದಲಾವಣೆಯಾದ ಹಿನ್ನೆಲೆಯಲ್ಲಿ, ೧೯೭೨ ರಿಂದ ದೇವರಾಜ ಅರಸರು ಮುಖ್ಯಮಂತ್ರಿಯಾಗಿ ೧೯೭೨ ರಿಂದ ೧೯೮೦ ರ ವರೆಗೆ ೮ ವರ್ಷಗಳ ಕಾಲದಲ್ಲಿ, ಕರ್ನಾಟಕದಲ್ಲಿ ಯಾರು ತುಳಿಯಲ್ಪಟ್ಟ ಜನರಿದ್ದಾರೆ, ಯಾವ ಜನರಿಗೆ ಈ ದಿನದವರೆಗೆ ಪ್ರಾಶಸ್ತ್ಯ ಸಿಗಲಿಲ್ಲ, ಅಂತಹ ಜನರಿಗೆ ಹೆಚ್ಚಿನ ಕಾರ್ಯಕ್ರಮ ಹಾಕಿಕೊಂಡು, he has created hopes in the minds of SCs, Sts and back ward classes. ಇದು ಕರ್ನಾಟಕ ರಾಜ್ಯದಲ್ಲಿ ಆಗಿತ್ತು. ಅದರ ಪರಿಣಾಮವಾಗಿ ೧೯೭೫ ರಲ್ಲಿ ಹಾವನೂರು ಕಮೀಷನ್ ಪ್ರಾರಂಭವಾಯಿತು, ಆ ಕಮೀಷನ್ ರಿಪೋರ್ಟ್ ಬಂತು. ಈ ಕಮೀಷನ್ ರಿಪೋರ್ಟ್ ಬಗ್ಗೆ ಅನಂತರ ಬರುತ್ತೇನೆ That is a most scientific report. ಕರ್ನಾಟಕ ರಾಜ್ಯದಲ್ಲಿ ಹಾವನೂರು ಕಮೀಷನ್ ರಿಪೋರ್ಟ್ ಕೊಟ್ಟಿದೆ. ಈ ಒಂದು ಆಧಾರದ ಮೇಲೆ ಬ್ಯಾಕ್‌ವರ್ಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಆಯಿತು, ಷೆಡ್ಯೂಲ್ಡ್ ಕ್ಯಾಸ್ಟ್ ಕಾರ್ಪೊರೇಷನ್ ಆಯಿತು. ಇದೆಲ್ಲವನ್ನೂ ಮಾಡಿ ಸಂಬಂಧಪಟ್ಟ ಎಲ್ಲಾ ಜನರಿಗೆ ದಿನನಿತ್ಯದ ಜೀವನಕ್ಕೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನು ಒದಗಿಸಲಾಗಿಲ್ಲ. ಇವತ್ತು ದೇಶದಲ್ಲಿರತಕ್ಕ ಇಕನಾಮಿಕ್ ಕಂಡೀಷನ್‌ನಿಂದಾಗಿ ಬಹಳಷ್ಟು ಸವಲತ್ತುಗಳನ್ನು ಕೊಡುವ ರೀತಿಯಲ್ಲಿ ಇಲ್ಲ. ಚುನಾವಣೆ ಸಮಯದಲ್ಲಿ ಆಶ್ವಾಸನೆ ಕೊಡುತ್ತಾರೆ. ವಾಗ್ದಾನ ಕೊಡುತ್ತಾರೆ. ಆದರೆ ಇವತ್ತು ೧೦೦ ಕ್ಕೆ ೫೦-೬೦ ಪರ್ಸೆಂಟ್ ಜನರು ನಿರ್ಗತಿಕರಾಗಿದ್ದಾರೆ. ಇಂತಹ ಜನರಿಗೆ ಇವತ್ತಿನ ದಿವಸ ಅವರು ಕೂಡ ಎದ್ದು ನಿಲ್ಲಬೇಕಾದರೆ, Economic security is very important factor. ಇವತ್ತು ಏನಾಗಿದೆ, ರಷ್ಯಾದೇಶದಲ್ಲಿ ನೋಡುತ್ತೇವೆ. ಬೇರೆ ಬೇರೆ ಕಡೆ ನೋಡುತ್ತೇವೆ. ೧೯೧೭ ರಲ್ಲಿ ಲೆನಿನ್ ಕಾಲದಲ್ಲಿ ಕ್ರಾಂತಿ ಆಯಿತು, ಬಸವೇಶ್ವರರ ಕಾಲದಲ್ಲಿ ದೊಡ್ಡ ವೈಚಾರಿಕ ಕ್ರಾಂತಿ ಪ್ರಾರಂಭವಾಯಿತು. ಈ ಫಿಲಾಸಫಿ ಎಲ್ಲಿದೆ ಎಂದು ಎಲ್ಲರಿಗೂ ಗೊತ್ತಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಮಾನ್ಯ ದೇವರಾಜ ಅರಸರು ಮಾಡಿದ ಆಂದೋಳನ ಏನಿದೆ ಆ ಒಂದು ಆಸೆ ಆಕಾಂಕ್ಷೆಗಳು ಜನರ ಹೃದಯದಲ್ಲಿ ಮಾಡಿವೆ. ೧೯೮೮-೮೯ ರಲ್ಲಿ ಮಾನ್ಯ ಬಸವಣ್ಣಪ್ಪನವರು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಾಗಿ ಎಲ್ಲಿಯವರೆಗೆ ಇದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡುತ್ತಾರೆ ಎಂಬುದನ್ನು ನಾವು ನೋಡಬೇಕಾಗಿದೆ. ಈ ಮಹತ್ವವಾದ ಡಿಪಾರ್ಟ್‌ಮೆಂಟ್‌ಗೆ II Floor ನಲ್ಲಿ ಅಧಿಕಾರ ಶಾಹಿಗಳು ಇದ್ದಾರೆ, ಇವರೆಲ್ಲರೂ ಎಷ್ಟರವರೆಗೆ ಸಹಕಾರ ಮಾಡುತ್ತಾರೆ ಎನ್ನುವುದನ್ನು ಪರಿಗಣಿಸಬೇಕಾಗಿದೆ ಇದರ ಮೇಲೆ ಗಮನ ಸೆಳೆಯಬೇಕಾಗಿವೆ, ಈ ಸಂದರ್ಭದಲ್ಲಿ ನಾವು ನೋಡಿದಾಗ. ಈಗಾಗಲೇ ನಾನು ಹೇಳಿದ್ದೇನೆ. ಈ ಡಿಪಾರ್ಟ್‌ಮೆಂಟ್‌ಗೆ ನೇರವಾಗಿ ಹರಿಜನ ಗಿರಿಜನರಿಗೆ ಸಂಬಂಧಪಟ್ಟ ೫೬ ಲಕ್ಷ ಜನರು

ಇದ್ದಾರೆ. ೧೯ ಲಕ್ಷ ಷೆಡ್ಯೂಲ್ಡ್ ಟ್ರೈಬ್ ಜನ ಇದ್ದಾರೆ, ೫೦-೬೦ ಪರ್ಸೆಂಟ್ ನಷ್ಟು ಹಿಂದುಳಿದ ಜನಾಂಗಕ್ಕೆ ಸಂಬಂಧಪಟ್ಟವರು ಇದ್ದಾರೆ. ಇವತ್ತು ಸ್ಟೇಟ್ ರೆವಿನ್ಯೂ ೧೯೮೩-೮೪ ರಲ್ಲಿ

Rs, 1280 Cro es and total State expenditure was Rs. 1238 Crores. in 1988-89, the State Revenue will be Rs 2922 Crores and the State expenditure will be Rs. 3106 Croses. Development expenditure comes to Rs. 2065 Crores i. e., 66% For Social Services including Health, Urban Development, you have provided Rs. 1254 Crores.

In 1983-84 it was Rs. 1715.76 lakhs i. e., 3.46% but in 1988-89 it will be Rs. 581 48 lakhs i. e., 0,46% Where is the fund to spend now ?

ಇವತ್ತು ಏನಾಗಿದೆ, ೧೯೮೮-೮೯ರಲ್ಲಿ ೫೮೧.೪೮ ಲಕ್ಷ ಖರ್ಚು ಮಾಡಿದ್ದೀರಿ. ಇದು ೦.೪೬ ಪರ್ಸೆಂಟ್ ಆಗುತ್ತದೆ. ಇವತ್ತು ಎಲ್ಲಾ ಸದಸ್ಯರೂ ಇದರ ಬಗ್ಗೆ ಹೇಳಿದ್ದಾರೆ. Where is the funds to spend ?

ಶ್ರೀ ಜಿ. ಬಸವಣ್ಣಪ್ಪ.—೧೯೮೮-೮೯ರ ಬಜೆಟ್ ಪ್ರಾವಿಜನ್ ೩೮.೪೧ ಲಕ್ಷ ರೂಪಾಯಿಗಳು For 1988-89 the budget provision is Rs. 38.41 crores, both plan and non-plan with regard to Special Component Programme, Tribal Sub-Plan, I will give the allocations made.

ಶ್ರೀ ಧರ್ಮಸಿಂಗ್ —ನಾನು ಪ್ಲಾನ್‌ಗೂ ಕೂಡಾ ಬರುತ್ತೇನೆ. ಇವತ್ತು ನಾನು ಈ ಪುಸ್ತಕದ ಆಧಾರ ಇಟ್ಟುಕೊಂಡು ಹೇಳುತ್ತಿದ್ದೇನೆ. ವೆಲ್‌ಫೇರ್ ಆಫ್ ಷೆಡ್ಯೂಲ್ಡ್ ಕ್ಯಾಸ್ಟ್ ಬಗ್ಗೆ ೧೯೮೩-೮೪ ರಲ್ಲಿ ೩.೪೬ ಪರ್ಸೆಂಟ್ ಅಚೀವ್‌ಮೆಂಟ್ ಇದ್ದರೆ, ಇವತ್ತು ೧೯೮೮-೮೯ರಲ್ಲಿ ಏನಾಗಿದೆ ಎಂದರೆ ಇದು ೦.೪೬ ಪರ್ಸೆಂಟ್ ಆಗಿದೆ. ಇನ್ನು ವೆಲ್‌ಫೇರ್ ಆಫ್ ಬ್ಯಾಕ್‌ವರ್ಡ್ ಕ್ಲಾಸಸ್‌ದು ಇವತ್ತು ಏನಾಗಿದೆ ಎಂದರೆ ೮೫೪.೪೬ ಲಕ್ಷ ಕೊಟ್ಟಿದ್ದೀರಿ. ಇದನ್ನು ನೀವು ತರಿಸಿ ನೋಡಬಹುದು.

SRI G. BASAVANNAPPA.—You are giving percentage to total income, is it?

ಶ್ರೀ ಧರ್ಮಸಿಂಗ್.—ಟೋಟಲ್ ರೆವಿನ್ಯೂ ಕಲೆಕ್ಷನ್ ಎಷ್ಟಿದೆ, ಟೋಟಲ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಎಷ್ಟಿದೆ ಅದನ್ನು ನಾನು ನೋಡುತ್ತಿದ್ದೇನೆ. ಅದರಲ್ಲಿ ಟೋಟಲ್ ಸೋಷಿಯಲ್ ಸರ್ವೀಸ್‌ಗೆ ಎಷ್ಟಿದೆ, ಅದರಲ್ಲಿ ನೇರವಾಗಿ ಎಸ್‌ಸಿ : ಎಸ್‌ಟಿ : ಬಿಸಿ : ಬಿಟಿ : ಗೆ ಎಷ್ಟಿವೆ ಅದನ್ನೂ ನಾನು ನೋಡುತ್ತಿದ್ದೇನೆ.

SRI G. BASAVANNAPPA.—I will give that figures also.

ಶ್ರೀ ಧರ್ಮಸಿಂಗ್.—ಫಿಗರ್ ಬೇಕಾಗಿಲ್ಲ. ಕರ್ನಾಟಕ ಬಜೆಟ್ ಗ್ಲಾನ್ಸ್ ಏನು ಕೊಟ್ಟಿದ್ದೀರಿ ಇದರಲ್ಲಿ ಇದೆ.

SRI G. BASAVANNAPPA.—Year by year it is increasing.

ಶ್ರೀ ಧರ್ಮಸಿಂಗ್.—ವೆಲ್‌ಫೇರ್ ಆಫ್ ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ೧೯೮೩-೮೪ರಲ್ಲಿ ೮೫೪.೬೭ ಲಕ್ಷ ಇಟ್ಟಿದ್ದು ಇದು ೧.೭೩ ಪರ್ಸೆಂಟ್ ಆಯಿತು. ೧೯೮೮-೮೯ರಲ್ಲಿ ಇದಕ್ಕೆ ೬೩೯.೧೫ ಲಕ್ಷ ಇದ್ದು ಇದು ೦.೫೧ ಪರ್ಸೆಂಟ್ ವೆಲ್‌ಫೇರ್ ಆಫ್ ಷೆಡ್ಯೂಲ್ಡ್ ಟ್ರೈಬ್ಸ್, ಡಿನೋಟಿಫೈಡ್ ಅಂಡ್ ನೊಮ್ಯಾಡಿಕ್ ಟ್ರೈಬ್ಸ್‌ಗೆ ೧೯೮೩-೮೪ರಲ್ಲಿ ೨೮೪.೫೭ ಲಕ್ಷ ಇದ್ದು ಇದು ೦.೫೭ ಪರ್ಸೆಂಟ್ ಆಗಿದ್ದರೆ, ಅದೇ ೧೯೮೮-೮೯ರಲ್ಲಿ ಇದಕ್ಕೆ ೭.೭೩ ಲಕ್ಷ ಇಟ್ಟಿದ್ದು ಇದು ಜಸ್ಟ್ ೦.೦೪ ಪರ್ಸೆಂಟ್ ಆಗಿದೆ. This is your achievement and this is the budget provision you have made. ಇದಕ್ಕೆ ನಾನು ಮುಂದೆ ಬರುತ್ತೇನೆ. ಈ ರೀತಿಯಾಗಿ ಇವತ್ತಿನ ದಿವಸ ಈ ಡಿಮ್ಯಾಂಡ್ಸ್ ಬಗ್ಗೆ ನಾವು ಒಂದು ಮಾತನ್ನು ಹೇಳಬೇಕಾಗುತ್ತದೆ. ನಾವು ಈ ಡಿಮ್ಯಾಂಡ್ಸ್‌ನ್ನು ನೋಡಿದಾಗ

ಸಾಕಷ್ಟು ಕೆಲಸ ಕಾರ್ಯಗಳು ಇನ್ನೂ ಆಗಬೇಕಾದ ರೀತಿಯಲ್ಲಿ ಇದು ಇದೆ. ಇದರ ಬಗ್ಗೆ ನಾವು ಪ್ರಸ್ತಾಪ ಮಾಡಿದಾಗ ನೇರವಾಗಿ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಿಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಇವತ್ತು ಈ ರೀತಿಯಾಗಿ ತಾವು ಬಜೆಟ್ ಪ್ರಾವಿಜನ್ ಮಾಡಿದರೆ ಯಾವ ರೀತಿಯಲ್ಲಿ ತಾವು ಎಲ್ಲಾ ಕೆಲಸ ಕಾರ್ಯಗಳನ್ನು ಮಾಡುತ್ತೀರಿ. ಏನು ಈ ವರ್ಗದ ಜನರು ಇದ್ದಾರೆ ಯಾವ ಜನರ ಬಗ್ಗೆ ತಾವು ಬಹಳಷ್ಟು ಹೇಳುತ್ತೀರಿ, ಇವರ ಕೆಲಸ ಕಾರ್ಯಗಳು ಏನೂ ಆಗುವುದಿಲ್ಲ ಎಂಬ ಮಾತನ್ನು ನಾವು ನೇರವಾಗಿ ಹೇಳಬೇಕಾಗುತ್ತದೆ. ೧೯೮೮ರ ಬಜೆಟ್‌ನಲ್ಲಿ ಪ್ಲಾನ್‌ನಲ್ಲಿ ಏನಾಗಿದೆ ಎಂದರೆ ೪೭.೨೧ ಕ್ರೋರ್ಸ್ ಮತ್ತು ನಾನ್ ಪ್ಲಾನ್‌ನಲ್ಲಿ ೨೭.೦೮ ಕ್ರೋರ್ಸ್ ಒಟ್ಟು ೭೪.೨೯ ಕ್ರೋರ್ಸ್ ತಾವು ಕೊಟ್ಟಿದ್ದೀರಿ. ಇವತ್ತು ಇದರಲ್ಲಿ ೬.೨೮ ಕ್ರೋರ್ಸ್ ಸ್ಪೆಷಲ್ ಸೆಂಟ್ರಲ್ ಅಸಿಸ್ಟೆನ್ಸ್‌ನ್ನು ಸೆಂಟ್ರಲ್ ಗೌರ್ನಮೆಂಟ್‌ನಿಂದ ತಾವು ಪಡೆಯುತ್ತಿದ್ದೀರಿ. ಇದರಲ್ಲಿ ೨.೩೦ ಕ್ರೋರ್ಸ್ ಕೂಡಾ ಎಕ್ಸ್‌ಪೆಂಡೀಚರ್ ಆಗುತ್ತಿದೆ. ಎಸ್.ಸಿ ಎಸ್.ಟಿ. ಎಜುಕೇಷನಲ್ ಸ್ಕೀಮ್ ಎಂದು ಹೇಳಿ ಅವರಿಗೆ ಸ್ಕಾಲರ್‌ಷಿಪ್ ಕೊಡುವುದಕ್ಕೆ ೯.೨೫ ಕ್ರೋರ್ಸ್ ಪ್ರೊವೈಡ್ ಮಾಡಿರುತ್ತೀರಿ. ಹಾಸ್ಟೆಲ್ಸ್‌ಗೆ ೧೩.೩೭ ಕ್ರೋರ್ಸ್ ಕೊಟ್ಟಿದ್ದೀರಿ. ಆದರೆ ಎಕ್ಸ್‌ಪೆಂಡೀಚರ್ ೨೫.೮೩ ಕೋಟಿ ಇದೆ. ಜಿಲ್ಲಾಪರಿಷತ್‌ಗೆ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದೀರಿ. ಜಿಲ್ಲಾ ಪರಿಷತ್‌ಗೆ ೨೮ ೫೮ ಕೋಟಿ ಇದಕ್ಕಾಗಿ ಕೊಟ್ಟಿದ್ದೀರಿ. ಇದರಲ್ಲಿ ಎಸ್ಟಾಬ್ಲಿಷ್‌ಮೆಂಟ್ ಎಕ್ಸ್‌ಪೆಂಡೀಚರ್ ಎಷ್ಟಿದೆ ಎಂದರೆ ೨ ಕೋಟಿ ಇದೆ. ಇಷ್ಟೆಲ್ಲಾ ದೊಡ್ಡ ಪ್ರಮಾಣದಲ್ಲಿ ಇಷ್ಟು ದೊಡ್ಡ ಡಿಪಾರ್ಟ್‌ಮೆಂಟ್ ಇಟ್ಟುಕೊಂಡು ಎಸ್.ಸಿ ಎಸ್.ಟಿ. ಯವರನ್ನು ನೋಡತಕ್ಕಂಥ ಜವಾಬ್ದಾರಿಯುತವಾದ ಕೆಲಸ ಮಾಡುತ್ತಿದ್ದೀರಿ. ಬ್ಯಾಕ್‌ವರ್ಡ್ ಕ್ಲಾಸಸ್ ಡೈರೆಕ್ಟೊರೇಟ್ ಬೇರೆ ಇದೆ. ಇವರಿಗೆ ಏನು ಕೆಲಸ ಇದೆ. ಎಲ್ಲಾ ಕಡೆ ನಿಮ್ಮ ಡಿಪಾರ್ಟ್‌ಮೆಂಟ್‌ನ್ನು ಮುಖ್ಯವಾಗಿ ಜಿಲ್ಲಾ ಪರಿಷತ್‌ಗೆ ಕೊಟ್ಟಿದ್ದೀರಿ. ಹಾಸ್ಟೆಲ್ಸ್ ನೋಡಿಕೊಳ್ಳತಕ್ಕ ಕೆಲಸ ಕೊಟ್ಟಿದ್ದೀರಿ. ಸ್ಕಾಲರ್‌ಷಿಪ್ ಬಗ್ಗೆ ನೀವು ಮೆನ್‌ಷನ್ ಮಾಡಿಲ್ಲ. ಅದಕ್ಕೆ ಇವತ್ತು ಡಿಪಾರ್ಟ್‌ಮೆಂಟ್ ಮೇಲೆ ಏನು ಜವಾಬ್ದಾರಿ ಇದೆ ಎಂದು ನಾನು ಕೇಳುತ್ತಿದ್ದೇನೆ. ಮುಖ್ಯವಾಗಿ ಇವತ್ತು ಒದಗಿಸಿರುವ ಹಣ ಕೂಡಾ ಕಡಿಮೆ ಇದೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಮುಖ್ಯವಾಗಿ ನೀವು ಎಜುಕೇಷನ್ ಮೇಲೆ ಎಂಫಸೈಸ್ ಮಾಡಬೇಕು. ಟೋಟಲ್ ಲಿಟ್ರೆಸಿ ಏನಿದೆ ನೋಡಬೇಕು. ಆಲ್ ಇಂಡಿಯಾದಲ್ಲಿ ಇವತ್ತು ೨೬ ಪರ್ಸೆಂಟ್ ಲಿಟ್ರೆಸಿ ಇದೆ. ಕರ್ನಾಟಕದಲ್ಲಿ ೩೮.೪ ಪರ್ಸೆಂಟ್ ಇದೆ. ನಮ್ಮ ರಾಜ್ಯ ಇಡೀ ಭಾರತ ದೇಶದಲ್ಲಿ ೭ನೇ ರ್‍ಯಾಂಕ್‌ನಲ್ಲಿದೆ. ಶಾಲೆಗಳಿಗೆ ಮಕ್ಕಳು ಹೋಗದೆ ಡ್ರಾಫ್ ಔಟ್ ಆಗುವವರ ಸಂಖ್ಯೆಯನ್ನು ನಾವು ತೆಗೆದುಕೊಂಡರೆ ಸುಮಾರು ೪೪ ಪರ್ಸೆಂಟ್ ಇದೆ. ೬ ವರ್ಷಗಳಿಂದ ೧೦ ವರ್ಷಗಳವರೆಗೆ. ೧೦ ವರ್ಷಗಳಿಂದ ೧೩ ವರ್ಷಗಳವರೆಗೆ ಮಕ್ಕಳು ಡ್ರಾಫ್ ಔಟ್ ಆಗುತ್ತಾರೆ. ಇದನ್ನು ತಡೆಯುವುದಕ್ಕೆ ಏನು ಕ್ರಮ ತಾವು ತೆಗೆದುಕೊಂಡಿದ್ದೀರಿ ಎಂದು ತಿಳಿಸಬೇಕೆಂದು ಕೇಳುತ್ತಾ ಇನ್ನು ೧೩ ವರ್ಷಕ್ಕಿಂತ ಮೇಲ್ಪಟ್ಟವರು ಸುಮಾರು ೭೨ ಪರ್ಸೆಂಟ್ ಇದ್ದಾರೆ. ಟೋಟಲ್ ಪಾಪ್ಯುಲೇಶನ್ ಏನು ಇದೆ ಇದರಲ್ಲಿ ಹರಿಜನ ಮತ್ತು ಗಿರಿಜನರು ಸುಮಾರು ೨೭ ಲಕ್ಷ ಜನರು ಶಾಲೆಗಳಿಗೆ ಹೋಗದೆ ಇರತಕ್ಕಂಥ ಪರಿಸ್ಥಿತಿಯಲ್ಲಿದ್ದಾರೆ. ಅವರು ಬೀದಿಯಲ್ಲಿ ತಿರುಗಾಡುತ್ತಿದ್ದಾರೆ. ಅದಕ್ಕಾಗಿ ತಾವು ಏನು ಒಂದು ಸ್ಕಾಲರ್‌ಷಿಪ್‌ಗೆ ಪ್ರಾವಿಜನ್ ಮಾಡಿದ್ದೀರಿ, ಹಾಸ್ಟೆಲ್‌ಗೆ ಪ್ರಾವಿಜನ್ ಮಾಡಿದ್ದೀರಿ, ತಾವೇನೇನು ಮಾಡಿದರೂ ಸಹ ಅದು ಬಹಳ ಕಡಿಮೆ ಆಯಿತು. ಇದರಲ್ಲಿ ಪೋಸ್ಟ್ ಮೆಟ್ರಿಕ್ ಸ್ಟೂಡೆಂಟ್ಸ್ ೨.೭ ಲಕ್ಷ ಜನ ಹುಡುಗರು ಇದ್ದಾರೆ. ಮೆರಿಟ್‌ನಲ್ಲಿ ೦.೨೪ ಲಕ್ಷದಷ್ಟು ಜನ ಇದ್ದಾರೆ. ಮೆಟ್ರಿಕ್‌ನಲ್ಲಿ ೦.೬೨ ಲಕ್ಷದಷ್ಟು ಜನ ಇದ್ದಾರೆ. ಇದೆಲ್ಲಾ ಸೇರಿಸಿದರೆ ೩.೬೫ ಲಕ್ಷದಷ್ಟು ಆಗುತ್ತದೆ. ತಾವು ಏನು ಹುಡುಗರಿಗೆ ಸೌಕರ್ಯವನ್ನು ಒದಗಿಸಿ ಕೊಟ್ಟಿದ್ದೀರಿ, ಇದು ಟೋಟಲ್ ಪಾಪ್ಯುಲೇಶನ್‌ಗೆ ಸಾಲದು. ಪೋಸ್ಟ್ ಮೆಟ್ರಿಕ್ ಹಾಸ್ಟೆಲ್ಸ್‌ಗಳಲ್ಲಿ ಪ್ರಯೋಜನ ಪಡೆದುಕೊಳ್ಳುತ್ತಿರುವವರು ೮೬೫೦ ಜನ ಆ ಮೇಲೆ ಅನುದಾನ ಪಡೆಯುತ್ತಿರುವ ಹಾಸ್ಟೆಲ್‌ಗಳಲ್ಲಿ ೧೩ ಸಾವಿರ ಜನ ಇದ್ದಾರೆ ಕಾಲೇಜು ಹಾಸ್ಟೆಲ್‌ಗಳಲ್ಲಿ ಇರುವವರು ೧೨,೪೪೭ ಜನ ಮತ್ತು ಇತರೆ ಬೇರೆ ಬೇರೆ ಕಡೆಗಳಲ್ಲಿರುವವರ ಸಂಖ್ಯೆ ೩೦,೬೬೭. ಒಟ್ಟು ೪೪ ಸಾವಿರ ಚಿಲ್ಲರೆ ಜನ ಹುಡುಗರು ಹಾಸ್ಟೆಲ್ ಪ್ರಯೋಜನ ಪಡೆಯುತ್ತಿದ್ದಾರೆ. ತಾವು ಮಾಡಿರುವ ಸ್ಕಾಲರ್‌ಷಿಪ್ ಕೊಡುವ ಸ್ಕೀಮ್, ಹಾಸ್ಟೆಲ್ ಫೆಸಿಲಿಟೀಸ್ ಕೊಡುವ ಸ್ಕೀಮ್ ಇದು ಬಡವರ್ಗದ ಜನರಿಗೆ ಸಹಾಯ ಮಾಡಿದಂತಾಗುತ್ತದೆ. ಸುಮಾರು ೨೭ ಲಕ್ಷದಷ್ಟು ಜನರಲ್ಲಿ ನಾನು ಏಜ್ ಗ್ರೂಪ್ ಸಮೇತ ತಮಗೆ ಮಾಹಿತಿ ಕೊಟ್ಟಿದ್ದೇನೆ. ಇದರಲ್ಲಿ ಬಡವರು, ಕೂಲಿ ಕಾರ್ಮಿಕರು ಇದ್ದಾರೆ. ಬಡವರ ಮಕ್ಕಳು ಶಾಲೆಗೆ ಹೋಗದೆ ಇರತಕ್ಕಂಥ ಪರಿಸ್ಥಿತಿಯಲ್ಲಿದ್ದಾರೆ. ಟೋಟಲ್ ಪಾಪ್ಯುಲೇಶನ್ ೭೪ ಲಕ್ಷದಲ್ಲಿ ಎಸ್.ಸಿ. ಮತ್ತು ಎಸ್.ಟಿ. ಯವರು

ಏನಿದ್ದಾರೆ ಅವರಲ್ಲಿ ಸುಮಾರು ೫ ಲಕ್ಷ ಜನರಿಗೆ ಮಾತ್ರ ತಾವು ಈ ಹಾಸ್ಟಲ್ ಫೆಸಿಲಿಟಿ ಸ್ಕಾಲರ್‌ಷಿಪ್ ಫೆಸಿಲಿಟಿ ಕೊಟ್ಟಿದ್ದೀರಿ. ಇವತ್ತು ಇನ್ನುಳಿದ ಜನರಿಗೆ ಯಾವ ರೀತಿಯ ಫೆಸಿಲಿಟಿ ತಾವು ಕೊಟ್ಟಿಲ್ಲ. ಅವರನ್ನು ಗುರುತಿಸಿ ಸಹ ಇಲ್ಲ. ೧೯೭೨ನೇ ಇಸವಿಯಿಂದ ಇಲ್ಲಿಯವರೆವಿಗೂ ನಾವು ತುಲನಾತ್ಮಕ ದೃಷ್ಟಿಯಿಂದ ನೋಡಿದರೂ ಕೂಡ ನಮಗೆ ಕಾಣುತ್ತಿಲ್ಲ, ಶ್ರೀಮಾನ್ ದೇವರಾಜ ಅರಸ್‌ರವರ ಕಾಲದಲ್ಲಿ......

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಉಪಾಧ್ಯಕ್ಷರೇ ಕೋರಂ ಇಲ್ಲ.

ಉಪಾಧ್ಯಕ್ಷರು.—ಕೋರಂ ಇದೆ. ತಾವು ಕುಳಿತುಕೊಳ್ಳಿ.

ಶ್ರೀ ಆರ್ ವೆಂಕಟರಾಮಯ್ಯ.—ಬೇಕಾದರೆ ತಾವು ಲೆಕ್ಕಮಾಡಿ ನೋಡಿ. ೨೦ ಜನ ಮಾತ್ರ ಇದ್ದಾರೆ.

ಉಪಾಧ್ಯಕ್ಷರು.—ಕೋರಂ ಇದೆ ಕುಳಿತುಕೊಳ್ಳಿ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಧರ್ಮಸಿಂಗ್‌ರವರು ಚೆನ್ನಾಗಿ ಮಾತನಾಡುತ್ತಿದ್ದಾರೆ ಅವರು ಮಾತನಾಡಲಿ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ ಕೋರಂ ಇಲ್ಲ. ಮತ್ತು ಪ್ರೆಸ್‌ನವರು ಸಹ ಇಲ್ಲ. ನಮಗೆ ಕಷ್ಟವಾಗುತ್ತದೆ. ಊಟ ಬೇರೆ ಇಲ್ಲ.

ಉಪಾಧ್ಯಕ್ಷರು.—ಆಯಿತು, ಕುಳಿತುಕೊಳ್ಳಿ.

ಶ್ರೀ ಆರ್ ಎನ್. ನಾಯಕ್.—ಬಲಾತ್ಕಾರದಿಂದ ಸದಸ್ಯರನ್ನು ಕುಳಿತುಕೊಳ್ಳುವಂತೆ ಹೇಳಿ ಸಭೆ ನಡೆಸುತ್ತೀರೇನು ?

ಉಪಾಧ್ಯಕ್ಷರು.— ಹೇಳಿದ್ದೆ ಹೇಳಿದರೆ ಏನು ಪ್ರಯೋಜನ ?

ಶ್ರೀ ಆರ್.ಎನ್. ನಾಯಕ್.—ಹೇಳಿದ್ದೇ ಹೇಳುವುದಕ್ಕೆ ದಾಸರು ಬೇರೆ ಇದ್ದಾರೆ ಅವರು ಅದನ್ನು ಹೇಳುತ್ತಾರೆ.

ಉಪಾಧ್ಯಕ್ಷರು.—ಕೋರಂ ಇದೆ. ತಾವು ಕುಳಿತುಕೊಳ್ಳಿ.

೩-೦೦ ಪಿ.ಎಂ.

ಧರ್ಮಸಿಂಗ್‌ರವರೇ ನೀವು ಮುಂದುವರಿಸಿ.

ಶ್ರೀ ಆರ್. ವೆಂಕಟರಾಮಯ್ಯ.—ಕೋರಂ ಇಲ್ಲ. ಸದನವನ್ನು ಮುಂದೂಡಿ.

ಶ್ರೀ ಎ. ಲಕ್ಷ್ಮೀಸಾಗರ್.—ವೆಂಕಟರಾಮಯ್ಯನವರು ಆಗೋ ಕೆಲಸಕ್ಕೆ ಅಡ್ಡಿ ಮಾಡ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಕೋರಂ ಇಲ್ಲ ಅಂತ ನಾನು ಹೇಳಿದರೆ, ಇವರು ಸರ್ವಜ್ಞ ಮೂರ್ತಿಗಳ ತರಹ ಹೇಳುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಸದನದಲ್ಲಿ ೨೩ ಜನ ಇದ್ದಾರೆ. ಕೋರಂ ಇಲ್ಲ ಅನ್ನುವುದನ್ನೇ ದೊಡ್ಡದು ಮಾಡಿ ಹೇಳಬೇಡಿ.

ಉಪಾಧ್ಯಕ್ಷರು.—ಧರ್ಮಸಿಂಗ್‌ರವರೇ ಮುಂದುವರಿಸಿ,

ಶ್ರೀ ಧರ್ಮಸಿಂಗ್.— ಸದನದಲ್ಲಿ ಮೆಂಬರ್ಸ್‌ಗಳು ಕಡಿಮೆ ಇದ್ದಾರೆ. ನಾನೂ ಭಾಷಣ ಮಾಡಬೇಕೆಂದೇನೂ ಇಲ್ಲ.

ಉಪಾಧ್ಯಕ್ಷರು.—ಕೋರಂ ಇದೆ. ತಾವು ಮುಂದುವರಿಸಿ.

ಶ್ರೀ ಆರ್.ಎನ್. ನಾಯಕ್.—ಸರ್ಕಾರದ ಕೆಲಸ ಆಗುವುದಕ್ಕೆ ಸದಸ್ಯರುಗಳನ್ನು ಒತ್ತಾಯದಿಂದ ಹಿಡಿದು ಕೂರಿಸುವುದು ಸರಿಯಲ್ಲ.

ಉಪಾಧ್ಯಕ್ಷರು.—ನೀವು ದಯವಿಟ್ಟು ಕುಳಿತುಕೊಳ್ಳಿ. ಧರ್ಮಸಿಂಗ್‌ರವರೇ ತಾವು ಮುಂದುವರಿಸಿ.

ಶ್ರೀ ಆರ್.ಎನ್. ನಾಯಕ್.—ಎಷ್ಟು ಗಂಟೆಯೊಳಗೆ ಸಭೆಯನ್ನು ಮುಕ್ತಾಯ ಮಾಡುತ್ತೀರಿ? ಯಾವುದೇ ಕೆಲಸಕ್ಕೆ ಒಂದು ನಿಗದಿತ ಸಮಯ ಇರಬೇಕು. ಇಲ್ಲ ಅಂದರೆ ಅದು ಕೆಲಸ ಅಲ್ಲ.

ಉಪಾಧ್ಯಕ್ಷರು.—ತಾವು ಮುಂದುವರಿಸಿ.

ಶ್ರೀ ಆರ್. ಎನ್. ನಾಯಕ್.—ನಿರ್ದಿಷ್ಟ ಸಮಯಕ್ಕೆ ಮುಗಿದರೆ ಅದು ಕೆಲಸವಾಗುತ್ತದೆ. ಇದನ್ನು ಕೆಲಸ ಅನ್ನಬೇಕಾ? ಅಥವಾ ಇದು ನಮ್ಮ ಕರ್ಮ ಎನ್ನಬೇಕಾ?

ಶ್ರೀ ಎ. ಲಕ್ಷ್ಮೀಸಾಗರ್.—ಒಂದೊಂದು ಸಾರಿ ರಾತ್ರಿ ೧೧ ಗಂಟೆಯವರೆಗೆ ಕಲಾಪವನ್ನು ನಡೆಸಿದ್ದೇವೆ.

ಶ್ರೀ ಆರ್.ಎನ್. ನಾಯಕ್.—ಯಾವಾಗಲೂ ಸಭೆ ನಡೆಯುವುದಕ್ಕೆ ತಾವು ಒಂದು ಕೆಲಸಮಾಡಿ. ಐವತ್ತು, ಐವತ್ತು ಸದಸ್ಯರುಗಳು ಇರುವಂತೆ ೪ ಪಾರ್ಟ್ ಮಾಡಿ. ಒಂದೊಂದು ಪಾರ್ಟ್ ಸದನದಲ್ಲಿ ಇರಲೇಬೇಕೆಂದು ಮಾಡಿ ಶಿಫ್ಟ್ ಪ್ರಕಾರ ದಿನದ ೨೪ ಗಂಟೆಯೂ ಸಭೆಯನ್ನು ನಡೆಸಿ.

ಉಪಾಧ್ಯಕ್ಷರು.—ತಾವು ಕೂಡ್ರಿ. ಧರ್ಮಸಿಂಗ್‌ರವರೇ ತಾವು ಮುಂದುವರಿಸಿ.

ಶ್ರೀ ಧರ್ಮಸಿಂಗ್.—ಮಾನ್ಯ ಉಪಾಧ್ಯಕ್ಷರೇ, ಇವತ್ತಿನ ದಿವಸದಲ್ಲಿ ಸುಮಾರು ೨೭ ಲಕ್ಷ ಹುಡುಗರು ನಮ್ಮ ರಾಜ್ಯದಲ್ಲಿ ಬೀದಿಪಾಲಾಗಿದ್ದಾರೆ. ಇವತ್ತು ನಿಮ್ಮ ಬಜೆಟ್‌ನಲ್ಲಿ ಕೇವಲ ನಾಲ್ಕೂವರೆ ಲಕ್ಷ ಹುಡುಗರಿಗೆ ಅನುಕೂಲವಾಗುವಷ್ಟು ಮಾತ್ರ ಹಣವನ್ನು ಪ್ರಾವಿಷನ್ ಮಾಡಿದ್ದೀರಿ. ಇನ್ನ ಮಿಕ್ಕ ಮಕ್ಕಳ ಗತಿ ಏನು? ಸಮಾಜ ಕಲ್ಯಾಣ ಇಲಾಖೆಯವರು ಬೀದಿಪಾಲಾಗಿರುವ ಮಕ್ಕಳಿಗೆ ಯಾವ ರೀತಿ ಅನುಕೂಲ ಒದಗಿಸಿಕೊಡುತ್ತಾರೆ. ಇದಕ್ಕೆ ಮಾನ್ಯ ಮಂತ್ರಿಯವರು ಹೇಳಬೇಕು. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಹಿಂದುಳಿದ ಮಕ್ಕಳ ಅನುಕೂಲಕ್ಕಾಗಿ ಪೂರ್ಣ ಪ್ರಮಾಣದಲ್ಲಿ ಹಾಸ್ಟೆಲ್‌ಗಳನ್ನು ಕಟ್ಟಿಸಿಲ್ಲ. ಯಾವಾಗ ಈ ಹಾಸ್ಟೆಲ್‌ಗಳನ್ನು ಒದಗಿಸಿಕೊಡುತ್ತೀರಿ?
(ಈ ಸಮಯದಲ್ಲಿ ಶ್ರೀಮತಿ ಮನೋರಮಾ ಮಧ್ವರಾಜ್‌ರವರು ಸಭೆಯಿಂದ ಹೊರಗೆ ಹೋಗುವುದಕ್ಕೆ ಎದ್ದರು)

ಉಪಾಧ್ಯಕ್ಷರು.—ತಾವು ಕೂಡ್ರಿ. ಇನ್ನು ಸ್ವಲ್ಪ ಹೊತ್ತು ಇರಿ.

ಶ್ರೀಮತಿ ಮನೋರಮಾ ಮಧ್ವರಾಜ್.—ಬೆಳಿಗ್ಗೆ ೯-೩೦ ಕ್ಕೆ ಬಂದದ್ದು ನಾವು

ಶ್ರೀ ಧರ್ಮಸಿಂಗ್.—ನಾನೂ ಸಹ ಬೆಳಿಗ್ಗೆ ಒಂಭತ್ತೂವರೆ ಗಂಟೆಗೆ ಬಂದಿದ್ದು.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಮಂತ್ರಿಗಳಾಗಿದ್ದಾಗ (ಶ್ರೀ ಧರ್ಮಸಿಂಗ್‌ರವರನ್ನು ಉದ್ದೇಶಿಸಿ) ನಾವು ನಿಮಗೆ ಸಹಕಾರ ಕೊಟ್ಟಿದ್ದೇವೆ. ೧೨ ಗಂಟೆಗಳ ಕಾಲ ೧೪ ಗಂಟೆಗಳ ಕಾಲ ಸದನದಲ್ಲಿ ನಾವು ಇದ್ದು ನಿಮಗೆ ಸಹಕಾರ ಕೊಟ್ಟಿರುವುದನ್ನು ತಾವು ಮರೆತುಬಿಡಬಾರದು.

ಶ್ರೀ ಧರ್ಮಸಿಂಗ್.—ಮಾನ್ಯ ಉಪಾಧ್ಯಕ್ಷರೇ. ನಮ್ಮ ರಾಜ್ಯದಲ್ಲ ಎಸ್.ಸಿ, ಎಸ್.ಟಿ. ಡೆವಲಪ್‌ಮೆಂಟ್ ಕಾರ್ಪೊರೇಷನ್ ೧೯೭೫ರಲ್ಲಿ ಪ್ರಾರಂಭವಾಗಿದೆ. ಈ ಕಾರ್ಪೊರೇಷನ್ ಮೂಲಕ ಎಸ್.ಟಿ. ಮತ್ತು ಎಸ್.ಸಿ ಜನಗಳಿಗೆ ಸಾಲವನ್ನು ಕೊಟ್ಟು ಅವರುಗಳನ್ನು ಬಡತನದಿಂದ ಮೇಲಕ್ಕೆ ಎತ್ತುವ ಕೆಲಸವನ್ನು ಮಾಡಲಾಗುತ್ತಿದೆ. ಈ ಕಾರ್ಪೊರೇಷನ್‌ಗೆ ರಾಜ್ಯ ಸರ್ಕಾರವು ೫೧ ಪರ್ಸೆಂಟ್ ಹಣವನ್ನು ಕೊಡುತ್ತದೆ. ಸೆಂಟ್ರಲ್ ಗೌರ್ನಮೆಂಟ್ ೪೯ ಪರ್ಸೆಂಟ್ ಹಣವನ್ನು ಕೊಡುತ್ತದೆ ೧೯೭೫ರಲ್ಲಿ ಪ್ರಾರಂಭವಾದ ಈ ಕಾರ್ಪೊರೇಷನ್ ೧೯೮೦ನೇ ಇಸವಿಯವರೆಗೂ ಕೇವಲ ೩೮ ಕೋಟಿ ರೂಪಾಯಿಗಳನ್ನು ಎಸ್.ಸಿ. ಎಸ್.ಟಿ. ಜನರಿಗೆ ಸಾಲವಾಗಿ ಹಣವನ್ನು ವಿತರಣೆ ಮಾಡಿದ್ದಾರೆ. ತಾವು ಯಾವ ರೀತಿ ಬಡವರಿಗೆ ಸಹಾಯ ಮಾಡುತ್ತಿದ್ದೀರಿ ಎಂದು ಇದರಿಂದ ಗೊತ್ತಾಗುತ್ತದೆ. ಎಸ್.ಸಿ., ಮತ್ತು ಎಸ್.ಟಿ. ಜನಾಂಗದವರಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡುವ ಕಡೆ ಸರ್ಕಾರ ಗಮನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನಾನು ಇವೊತ್ತು ಸಮಯದ ಮಿತಿಯು ಇದ್ದ ಕಾರಣ ಕೇವಲ ನಾಲ್ಕೈದು ವಿಷಯಗಳ ಬಗ್ಗೆ ಮಾತ್ರ ಮಾತನಾಡಬೇಕೆಂದು ನಿರ್ಧಾರ ಮಾಡಿದ್ದೇನೆ. ಇವೊತ್ತು ಶೆಡ್ಯೂಲ್ಡ್ ಟ್ರೈಬ್ಸ್ ಬಗ್ಗೆ ಹೆಲ್ತ್, ಹೌಸಿಂಗ್, ಎಲೆಕ್ಟ್ರಿಫಿಕೇಶನ್, ಮತ್ತು ಲೀಗಲ್ ಅಸಿಸ್ಟೆನ್ಸ್ ಕೊಡತಕ್ಕಂಥ ಒಂದು ಕಾರ್ಯಕ್ರಮ ಇದೆ.

ತಾವು ಪರ್‌ಫಾರ್ಮೆನ್ಸ್ ಬಜೆಟ್‌ನ್ನು ಹಾಕಿ ಒಂದು ವರ್ಷದ ಬಜೆಟ್‌ನ್ನು ಮಾಡಿ ಅದನ್ನು ಈ ಸಭೆಯ ಸದಸ್ಯರಿಗೆ ಕೊಡುತ್ತೀರಿ, ಅದಕ್ಕೂ ಮುಂಚೆ ತಾವು ಎಲ್ಲಾ ಡಿಪಾರ್ಟ್‌ಮೆಂಟ್‌ಗಳ ಅಧಿಕಾರಿಗಳ ಜೊತೆಗೆ ಸಮಾಲೋಚನೆ ಮಾಡಿದ್ದೀರೋ ಇಲ್ಲವೋ ಎಂಬ ಒಂದು ಅನುಮಾನವು ನನಗೆ ಬರುತ್ತದೆ. ಇವೊತ್ತು ನಿಮ್ಮ ರಿಪೋರ್ಟನ್ನು ನೋಡಿದರೆ ನಮಗೆ ನಗು ಬರುತ್ತದೆ. ಇಲ್ಲಿ ಸದನದಲ್ಲಿ ಕೇವಲ ಮಂತ್ರಿಗಳಾಗಿ ಮಾತ್ರ ಜವಾಬ್ದಾರಿ ವಹಿಸಿಕೊಂಡಿರಬೇಕೆಂದು ಇಲ್ಲ. ಈ ಮನೆಯ ಎಲ್ಲಾ ಸದಸ್ಯರಿಗೂ ಈ ವಿಚಾರದ ಕುರಿತು ಜವಾಬ್ದಾರಿ ಇದ್ದೇ ಇರುತ್ತದೆ. ಸರಕಾರದವರು ಹಾಕಿಕೊಂಡಿರತಕ್ಕಂಥ ಕಾರ್ಯಕ್ರಮಗಳ ಬಗ್ಗೆ ನಾವೆಲ್ಲರೂ ನೋಡಬೇಕಾಗುತ್ತದೆ. ನಾವೂ ಕೂಡ ಅದರಲ್ಲಿ ಬಾಗಿಗಳಾಗಬೇಕಾಗುತ್ತದೆ. ಈ ವಿಚಾರದಲ್ಲಿ ನನಗೆ ನಾಚಿಕೆ ಏತಕ್ಕೆ ಆಗುತ್ತದೆ ಎಂದರೆ, ಇವೊತ್ತು for providing Electricity to the Scheduled Tribes in 1986–87, you have allotted only Rs. 61,000 for 1988–89, you have provided only Rs. 88,000 ಈ ಎಲೆಕ್ಟ್ರಿಫಿಕೇಶನ್ ಮತ್ತು ಲೀಗಲ್ ಅಸಿಸ್ಟೆನ್ಸ್ ಕೊಡತಕ್ಕಂಥಾದ್ದರಲ್ಲಿ. ವಿವರಗಳನ್ನು ಕೊಟ್ಟಿದ್ದೀರಿ ಈ ಜನರಿಗೆ ದೀಪ ಕೊಡತಕ್ಕಂಥ ಕಾರ್ಯಕ್ರಮಕ್ಕೆ ನೀವು ೧೯೮೬-೮೭ರಲ್ಲಿ ಕೇವಲ ೬೧ ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ಅದೇ ರೀತಿಯಲ್ಲಿ ೧೯೮೮-೮೯ಕ್ಕೆ ಕೇವಲ ೮೮ ಸಾವಿರ ರೂಪಾಯಿಗಳನ್ನು ಇಟ್ಟಿದ್ದೀರಿ. ಎಲೆಕ್ಟ್ರಿಫಿಕೇಶನ್‌ಗೆ you have provided only Rs. One lakh, to cover 50 families. ಹೀಗೆ ಕರ್ನಾಟಕ ರಾಜ್ಯದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ೫೦ ಕುಟುಂಬಗಳಿಗೆ ದೀಪವನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ನೀವು ಹಾಕಿಕೊಂಡಿದ್ದೀರಿ. ಇಷ್ಟು ಕಡಿಮೆ ಮಟ್ಟದಲ್ಲಿ ಈ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಾದಲ್ಲಿ ಇಂಥ ಕಾರ್ಯಕ್ರಮಗಳನ್ನು ಏತಕ್ಕಾಗಿ ಹಾಕಿಕೊಂಡಿದ್ದೀರಿ ಎಂದು ಕೇಳಬೇಕಾಗುತ್ತದೆ ನಿಮಗೆ ಇಂಥ ಕಾರ್ಯಕ್ರಮಗಳ ಮೇಲೆ ವಿಶ್ವಾಸವಿದ್ದರೆ, ಇಂತಹ ವಿಷಯಗಳಲ್ಲಿ ಕೆಲಸ ಮಾಡಬೇಕೆಂದು ಆಸಕ್ತಿ ಇದ್ದರೆ, ಆ ಜನರಿಗೆ ಸಹಾಯ ಮಾಡಬೇಕೆಂದು ಮನಸ್ಸು ಇದ್ದರೆ, ಅದನ್ನು ಸೂಕ್ತ ರೀತಿಯಲ್ಲಿ ಮಾಡಬೇಕು. ಯಾರು ಬಡವರಿದ್ದಾರೆ ಅವರಿಗೆ ಕಾನೂನು ನೆರವು ಕೊಡುವ ಬಗ್ಗೆ ೧.೨೬ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇಷ್ಟು ಹಣದಿಂದ ಏನು ಕಾರ್ಯ ಸಾಧನೆಯಾಗುತ್ತದೆ ? ಆದುದರಿಂದ ದಯವಿಟ್ಟು ಈ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕು. ಇನ್ನು ಹೆಲ್ತ್, ಹೌಸಿಂಗ್, ಲೀಗಲ್ ಅಸಿಸ್ಟೆನ್ಸ್ ಮತ್ತು ಎಲೆಕ್ಟ್ರಿಫಿಕೇಶನ್ ಕೊಡುವ ವಿಚಾರದಲ್ಲಿ ಯಾರು ಈ ವರ್ಗದ ಜನರಿಗೆ ತಮ್ಮ ಎಫೆಕ್ಟೀವ್ ರೆಪ್ರಸೆಂಟೇಶನ್ ಮೂಲಕ ಇಲ್ಲಿ ಹೇಳುವ ಶಕ್ತಿ ಇಲ್ಲವೋ ಅವರಿಗೆ ಹೆಚ್ಚಿನ ರೀತಿಯಲ್ಲಿ ಈ ಕಾರ್ಯಕ್ರಮಗಳ ಬಗ್ಗೆ ಆದ್ಯತೆಯನ್ನು ಕೊಡಬೇಕು. ಮಾನ್ಯ ಬಸವಲಿಂಗಪ್ಪನವರು ಮೊದಲು ನಗರಾಭಿವೃದ್ಧಿ ಮಂತ್ರಿಗಳಾಗಿದ್ದಾಗ ಈ ಮಲ ಹೊರುವ ಪದ್ಧತಿಯು ಮಾನವೀಯತೆಗೆ ಧಕ್ಕೆ ತರುವಂಥ ವಿಚಾರವಾಗಿದೆ ಎಂದು ಹೇಳಿ ಅದನ್ನು ತೆಗೆದುಹಾಕುವುದಕ್ಕೆ ಸಾಕಷ್ಟು ಪ್ರಯತ್ನಗಳನ್ನು ಮಾಡಿ, ಆ ಬಗ್ಗೆ ಒಂದು ಕಾನೂನನ್ನು ಕೂಡ ತಂದರು. ಆದರೆ ಇವೊತ್ತು ನೀವು ನಿಮ್ಮ ರಿಪೋರ್ಟ್‌ನಲ್ಲಿ carrying of night soil is still continued ಎಂಬ ಪದವನ್ನು ಉಪಯೋಗ ಮಾಡಿದ್ದೀರಿ. ಇವೊತ್ತು ಬೆಳಗಾಂ ಜಿಲ್ಲೆಯ ಗೋಕಾಕ್, ನಿಪ್ಪಾಣಿ, ಗದಗ, ಬೆಟಗೇರಿ, ಜಮಖಂಡಿ ಮತ್ತು ಬಾಗಲಕೋಟೆಗಳಲ್ಲಿ ಈ ಒಂದು ವ್ಯವಸ್ಥೆ ಇರುವುದಾಗಿ ಹೇಳಿದಂತಾಗಿದೆ. ಈ ರಿಪೋರ್ಟ್‌ನಲ್ಲಿರುವ ವಿಚಾರವನ್ನು ನೋಡಿ ನಿಜಕ್ಕೂ ನಾವು ನಾಚಿಕೆ ಪಡಬೇಕಾಗಿ ಬಂದಿದೆ. ಅಂದರೆ ಈ ಬಗ್ಗೆ ೧೯೭೩ರಲ್ಲಿ ಕಾನೂನು ಆಗಿದ್ದರೂ ಇನ್ನೂ ಅದು ನಡೆದುಕೊಂಡು ಬಂದಿದೆ ಅಂದರೆ ಆಶ್ಚರ್ಯವಾಗುತ್ತದೆ. ನಾನು ಈ ವಿಚಾರದಲ್ಲಿ ಕೆಲವು ಮೈನ್ಯೂಟ್ ಥಿಂಗ್ಸ್ ಮಾತ್ರ ಹೇಳುತ್ತಾ ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಇಂತಹ ೧೮೬೩ ಕುಟುಂಬಗಳು ಇವೊತ್ತು ಇವೆ. ಅವರಿಗೆ ಲೋನ್ ಕೊಡತಕ್ಕಂಥ ರೀತಿಯಲ್ಲಿ ೧೯ ೧೦ ಲಕ್ಷ ಬಜೆಟ್‌ನಲ್ಲಿ ಮಾಡಿದ್ದೀರಿ ಅದರಲ್ಲಿ ಗವರ್ನ್‌ಮೆಂಟ್ ಸಬ್ಸಿಡಿ ೬೦ ಪರ್ಸೆಂಟ್ ಆದರೆ, ೪೦ ಪರ್ಸೆಂಟ್‌ನಷ್ಟು ಹಣವನ್ನು ಆ ಕುಟುಂಬಗಳು ಬ್ಯಾಂಕ್‌ಗಳ ಮೂಲಕ ಲೋನ್ ಪಡೆಯಬೇಕಾಗಿದೆ. ಇಂಥ ಕಾನೂನು ಅಥವಾ ನಿಬಂಧನೆಗಳನ್ನು ಮಾಡುವಾಗ ನಿಮ್ಮ ಅಧಿಕಾರಿಗಳಿಗೂ ಕೂಡ ಕಮಿಟ್‌ಮೆಂಟ್ಸ್ ಇರಬೇಕು, ಅವರಿಗೂ ನಿಷ್ಠೆ ಎಂಬುದು ಇರಬೇಕು. ಅವರ ಆದ್ಯಾವುದು ಇದ್ದಂತೆ ಕಾಣುವುದಿಲ್ಲ. ನೀವು ಹೀಗೆ ಒಂದು ನಿಯಮವನ್ನು ಮಾಡಿ ೪೦ ಪರ್ಸೆಂಟ್ ಲೋನ್ ತೆಗೆದುಕೊಳ್ಳಿ ಎಂದು ಹೇಳಿದರೆ ಅವರಿಗೆ ಯಾರು ಲೋನ್ ಕೊಡಬೇಕು ? ಅವರಿಗೆ ಯಾರು ಗ್ಯಾರಂಟಿಯಾಗಿ ಇರುತ್ತಾರೆ ? ಆದುದರಿಂದ ಈ ಒಂದು ನಿಯಮ ವ್ಯವಹಾರಿಕವಾಗಲಾರದು. ಆದುದರಿಂದ ಇಂಥ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಕಾರ್ಯಗತವಾಗಬೇಕಾದರೆ ಪದೇ ಪದೇ

ನೀವು ಅಧಿಕಾರಿಗಳ ಜೊತೆಗೆ ಮೀಟಿಂಗ್ ಮಾಡಿ, ಇರುವ ಲೋಪದೋಷಗಳ ಬಗ್ಗೆ ಚರ್ಚೆ ಮಾಡಿ ಒಂದು ಸೂಕ್ತ ನಿರ್ಧಾರಕ್ಕೆ ಬರಬೇಕು. ಇಂತಹ ವಿಚಾರಗಳು ಬೇರೆ ಮತ್ತು ರೆವಿನ್ಯೂ, ಅಬಕಾರಿ, ಪಿ.ಡಬ್ಲ್ಯೂ.ಡಿ. ಇಲಾಖೆಗಳ ಮೇಲೆ ಬರುವ ಬೇಡಿಕೆಗಳ ವಿಚಾರ ಬೇರೆ. ಈ ಸಮಾಜ ಕಲ್ಯಾಣ ಇಲಾಖೆ ನೇರವಾಗಿ ಬಡವರ, ಹಿಂದುಳಿದವರ ಮಹಿಳೆಯರ ಮತ್ತು ಮಕ್ಕಳ ಬಗ್ಗೆ ಇರುವ ಇಲಾಖೆ. ಇದನ್ನು ಸರಿಯಾಗಿ ನಡೆಸುವ ಬಗ್ಗೆ ಕಾಳಜಿ ವಹಿಸಬೇಕಾಗುತ್ತದೆ.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ, ಪ್ರೆಸ್‌ನವರು ಯಾರೂ ಇಲ್ಲ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.— ಬೇಕಾದರೆ ನೀವು ಮಾತಾಡಿದ್ದೊದನ್ನೆಲ್ಲ ಪ್ರೆಸ್‌ಗೆ ರವಾನಿಸುತ್ತೇವೆ, ಹೆದರಿಕೊಳ್ಳಬೇಡಿ.

ಶ್ರೀ ಆರ್. ಎನ್. ನಾಯಕ್.—ಏನು ಹಾಗೆಂದ್ರೆ ? ಜನತೆಗೆ ನಾವು ಮಾತಾಡುವುದು ತಿಳಿಯಬೇಕಾಗುತ್ತದೆ.

(ಗದ್ದಲ)

ಉಪಾಧ್ಯಕ್ಷರು.—ಇನ್ನೊಂದಿಬ್ಬರು ಮಾತಾಡುತ್ತಾರೆ, ಆಮೇಲೆ ಕನ್‌ಕ್ಲೂಡ್ ಮಾಡೋಣ.

ಶ್ರೀಮತಿ ಮನೋರಮಾ ಮಧ್ವರಾಜ್.—ನಾವೆಲ್ಲ ಊರಿಗೆ ಹೋಗಬೇಕು, ಲೇಟಾಗುತ್ತದೆ.

ಶ್ರೀ ಜಿ. ಬಸವಣ್ಣಪ್ಪ.—ಪೌರ ಕಾರ್ಮಿಕರಿಗೆ ಪುನರ್ ವಸತಿ ಸೌಲಭ್ಯ ಒದಗಿಸುವುದಕ್ಕೋಸ್ಕರ ೬೦ ಪರ್ಸೆಂಟ್ ಸಬ್ಸಿಡಿ ಮತ್ತು ೪೦ ಪರ್ಸೆಂಟ್ ಲೋನ್ ನೀಡುತ್ತಿರುವುದನ್ನು ನೀವು ಮೆಚ್ಚಬೇಕು.

ಶ್ರೀ ಆರ್. ಧರ್ಮಸಿಂಗ್.—ತಲೆ ಮೇಲೆ ಮಲ ಹೊರುವ ಜನರಿಗೆ ೪೦ ಪರ್ಸೆಂಟ್ ಲೋನ್‌ಗೆ ಗ್ಯಾರಂಟಿ ಕೊಡೋಕೆ ಯಾರು ಬರ್ತಾರ್ರೀ ? ನೀವೇ ಗ್ಯಾರಂಟಿ ಕೊಡಬೇಕಾಗುತ್ತದೆ. Regarding P.C.R. Act cases in the year 1984, 532 cases are reported, cases punished are only 7 and the cases pending trial are 296 ; In 1985, cases reported-659, cases punished-2. 382 cases are pending and 153 cases are under investigation In 1986, 817 cases are reported, cases dunished 3,394 cases are pending trail and 328 cases are under investigation, In 1987, 679 cases reported, cases punished-nil, 106 cases are pending trial and 548 cases are under investigation. Now coming to Attrocity cases, in 1984, 171 cases are reported murder cases-18, number of cases punished-4, number of cases pending trial-88 and 17 cases are under investigation. In 1985, 295 cases are reported, murder cases-21, no. of cases punished-two 167 cases are pending and 72 cases are under investigation. In 1986, 229 cases are reported, murders-9, no. of cases punished-nil, 82 cases are pending trial and 122 cases are under investigation. In 1987, 268 cases are reported, murders-9, cases punished-nil, 13 cases are pending trail and 252 cases are under investigation.

ಈ ರೀತಿ ಏಕೆ ನಿಧಾನವಾಗುತ್ತಿದೆ ಎಂಬ ಬಗ್ಗೆ ಹೇಳುತ್ತಿದ್ದೇನೆ. ಬಡ್ಜೆಟ್ ಬಗ್ಗೆ ಈಗಾಗಲೇ ಹೇಳಿದ್ದೇನೆ. ಈ ರೀತಿಯಾಗಿ ಎಲ್ಲೆಲ್ಲಿ ಅವ್ಯವಹಾರಗಳಾಗಿವೆ ಅದರ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇನೆ. ಅದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ, ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿ ಬೇರೆ ಜಾತಿಯವರ ತುಳಿತಕ್ಕೆ ಸಿಕ್ಕಿ ಹಿಂದುಳಿದ ವರ್ಗದವರು ಏನು ತೊಂದರೆಯನ್ನು ಅನುಭವಿಸುತ್ತಿದ್ದರು ಅವರಿಗೆ ನೆರವು ಸಿಗಬೇಕು, ಉದ್ಯೋಗ ಸಿಗಬೇಕು ಎಂಬ ದೃಷ್ಟಿಯಿಂದ ೧೯೭೭ ರಲ್ಲಿ

ಹಾವನೂರ್ ಕಮಿಷನ್ ಅನ್ನು ನೇಮಕ ಮಾಡಿದರು. ಮಾನ್ಯ ಚಾಲಪ್ಪನವರಿಗೂ ಗೊತ್ತಿರಬಹುದು. ಜಾಬ್ ರಿಸರ್ವೇಷನ್, ಶಿಕ್ಷಣ ದೊರಕುವ ಹಾಸ್ಟೆಲ್, ಸ್ಕೂಲ್ ಕೊಡುವ ಉದ್ದೇಶದಿಂದ ಕೂಡ ಅವರು ಇದನ್ನು ಜಾರಿಗೆ ತಂದರು. ಆದರೆ ನಿಮ್ಮ ಸರಕಾರ ಬಂದ ಮೇಲೆ ಹಾವನೂರ್ ಕಮಿಟಿ ವರದಿಯನ್ನು ಸರಿಯಾಗಿ ಇಂಪ್ಲಿಮೆಂಟ್ ಮಾಡಲಿಲ್ಲ. It is the only Scientific Report in the State of Karnataka ಇದನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ. ಎಜುಕೇಶನ್ ಫೆಸಿಲಿಟೀಸ್, ಹಾಸ್ಟೆಲ್ ಫೆಸಿಲಿಟೀಸ್, ಎಸ್‌ಸಿ. ಎಸ್‌ಟಿ. ಡೆವಲಪ್‌ಮೆಂಟ್ ಕಾರ್ಪೊರೇಷನ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡಿದರು. ಆದರೆ ಅದೆಲ್ಲಾ ಇವತ್ತು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಎಂಬುದನ್ನು ತಾವು ಒಪ್ಪಲೇ ಬೇಕಾಗುತ್ತದೆ. ಇವತ್ತು ಪ್ರತಿಗಾಮಿ ಶಕ್ತಿಗಳು ಏನು ಇವೆ ಅವು ಹಾವನೂರ್ ಕಮಿಟಿಯವರಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿವೆ ಅದರ ಬಗ್ಗೆ ತಾವು ಗಮನ ಕೊಡಬಾರದು. ಇವತ್ತು ವೆಂಕಟಸ್ವಾಮಿ ಆಯೋಗವನ್ನು ನೇಮಕ ಮಾಡಿದ್ದೀರಿ ಆದರೆ ಅದೂ ಕೂಡ it is a Methodical report. ಎಕನಾಮಿಕ್ ಸರ್ವೆ ಮಾಡಿ ಎಲ್ಲಾ ಕಡೆ ವರದಿ ಕೂಡ ಬಂತು. ಅದೂ ಕೂಡ ಇವತ್ತು ಹೋಗಿದೆ, ಈ ಚೆನ್ನಪ್ಪ ರೆಡ್ಡಿ ಆಯೋಗವನ್ನು ಮಾಡಿದೆ. ಯಾವುದಾದರೂ ಆಯೋಗವನ್ನು ಸರಕಾರ ಮಾಡಬೇಕಾದರೆ ಆ ಆಯೋಗದಲ್ಲಿರ ತಕ್ಕಂತಹ ಸದಸ್ಯರು ಏನು ಇದ್ದಾರೆ ಅವರಿಗೆ ಕರ್ನಾಟಕ ರಾಜ್ಯದಲ್ಲಿರತಕ್ಕಂತಹ ಹಿಂದುಳಿದವರ ಬಗ್ಗೆ ಆಶಾ ಭಾವನೆ ಹುಟ್ಟಬೇಕು. ಅದರ ಬಗ್ಗೆ ಕಾಳಜಿ ಇರತಕ್ಕಂತಹ ಕಮಿಟ್‌ಮೆಂಟ್ ಇರತಕ್ಕಂತಹ ಒಂದು ವರದಿ ಬರಬೇಕು, ಅದನ್ನು ತಯಾರು ಮಾಡತಕ್ಕಂತಹ ಜನರೇ ಅದರ ಸದಸ್ಯರಾಗಬೇಕು. ಇದು ನಮ್ಮ ಸಲಹೆ. ದಿನಾಂಕ ೧೩-೧೦-೮೬ರಲ್ಲಿ ಏನು ಆಜ್ಞೆ ಮಾಡಿದಿರಿ ಅದೂ ಕೂಡ ಎಲ್ಲಿ ಇದೆ ? ಇದರ ಬಗ್ಗೆ ನಾನು ಮತ್ತು ಮಾನ್ಯ ಮೊಯಿಲಿಯವರು ಮಾತನಾಡಬೇಕೆಂದು ವಿಚಾರ ಮಾಡಿದ್ದೇವೆ. ಹಾವನೂರ್ ವರದಿ ಏನು ಸೈಂಟಿಫಿಕ್ ಆಗಿ ಬಂದಿತ್ತು ಆಗ ಹಿಂದುಳಿದವರ ಮನಸ್ಸಿನಲ್ಲಿ ಒಂದು ಆಶಾಭಾವನೆ ಹುಟ್ಟಿತ್ತು. ಆದರೆ ಇವತ್ತಿನ ದಿವಸ ಅದು ಎಲ್ಲಾ ಹೋಯಿತು. ನಾವು ಪೊಲಿಟಿಕಲ್ ಫಿಲಾಸಫಿಯನ್ನು ಒಪ್ಪಬೇಕು. ಯಾರು ತುಳಿಯಲ್ಪಡುತ್ತಿದ್ದಾರೆ ಮತ್ತು ಯಾರಿಗೆ ರೆಪ್ರಸೆಂಟ್ ಮಾಡತಕ್ಕಂತಹ ಶಕ್ತಿಯಿಲ್ಲ ಅಂತಹವರಿಗೆ ಪ್ರಾಶಸ್ತ್ಯ ಕೊಡಬೇಕೆಂಬ ಮನಸ್ಸು ಇರಬೇಕು. ನಮಗೂ ಆ ಮನಸ್ಸು ಇರಬೇಕು, ನಿಮಗೂ ಆ ಮನಸ್ಸು ಇರಬೇಕು. ಆ ತಳಹದಿಯ ಮೇಲೆ ಮೂರನೇ ಕಮಿಷನ್ ವರದಿಯನ್ನು ಬಹಳ ಪ್ರಾಮಾಣಿಕವಾದ ರೀತಿಯಲ್ಲಿ ಸರಿಯಾದ ರೀತಿಯಲ್ಲಿ ಅವರಿಗೆ ಸಹಾಯವಾಗತಕ್ಕಂತಹ ರೀತಿಯಲ್ಲಿ ಬರುತ್ತದೆಂದು ಹೇಳಿ ನನಗೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಅಧ್ಯಕ್ಷರೇ, ಸಮಾಜ ಕಲ್ಯಾಣ ಇಲಾಖೆಯ, ಸರಕಾರದ ಕೆಲವು ನಿರ್ಲಕ್ಷ್ಯ ಭಾವನೆಗಳನ್ನು ಹಾಗೂ ಅವ್ಯವಸ್ಥೆಯನ್ನು ಕುರಿತ ಬೇಡಿಕೆಯನ್ನು ವಿರೋಧಿಸುತ್ತಾ, ಒಂದೆರಡು ಮಾತನ್ನು ಹೇಳಲು ಇಚ್ಛೆಪಡುತ್ತೇನೆ. ಮುಖ್ಯವಾಗಿ ಹೇಳುವುದಾದರೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ನಾವು ಆಗಾಗ ಕಾಣುತ್ತಿದ್ದೇವೆ. ಹೆಚ್ಚಿನ ಜಾಹಿರಾತುಗಳನ್ನು ಸರಕಾರ ಕೊಡುತ್ತಿದೆ. ಹರಿಜನ ವಿಶೇಷ ಯೋಜನೆ ಹಾಗೂ ಇನ್ನಿತರ ಕೇಂದ್ರ ಸರಕಾರದ ಯೋಜನೆಗಳನ್ನೂ ಕೂಡ ಕಾರ್ಯಗತ ಮಾಡುವಾಗ ಕೇವಲ ಜಾಹಿರಾತುಗಳಲ್ಲಿ ಮಾನವೀಯ ಯೋಜನೆಯೆಂದು ಹೇಳುವಂತಹ ದೊಡ್ಡ ಹೆಡ್ಡಿಂಗ್ ಅನ್ನು ನಾವು ಪೇಪರ್‌ಗಳಲ್ಲಿ ಕಾಣುತ್ತಿದ್ದೇವೆ. ಸರಕಾರ ಈ ಮಾನವೀಯತೆ ಯೋಜನೆಯನ್ನು ಕುರಿತು ಕಳಕಳಿಯನ್ನು ವ್ಯಕ್ತಪಡಿಸುವುದು ಕೇವಲ ವೃತ್ತಪತ್ರಿಕೆಗಳಲ್ಲಿ ಮಾತ್ರ.

ಈ ಸರ್ಕಾರಕ್ಕೆ ಮಾನವೀಯತೆ ಎಷ್ಟಿದೆ ಎಂಬುದನ್ನು ಹೇಳಲಿಕ್ಕೆ ನಾಚಿಕೆ ಯಾಗುತ್ತದೆ. ಈ ಸರ್ಕಾರ ೧೯೮೧ನೇ ಇಸವಿಯಲ್ಲಿ ಜಿ ಓ ನಂ. ಎಸ್‌ಡಬ್ಲ್ಯೂಎಲ್ ೮೧ ಎಸ್‌ಎಸ್ ೮೦, ೧-೧೨-೧೯೮೧ ರಂತೆ ಒಂದು ಪ್ರೊಸೀಡಿಂಗ್ಸ್‌ನ್ನು ಕೂಡಾ ಹೊರಡಿಸಿತ್ತು. ಇದರಲ್ಲಿ ಹೇಳುವುದಾದರೆ ಜಿಲ್ಲಾ ಮಟ್ಟದಲ್ಲಿ ಹರಿಜನ ಗಿರಿಜನರ ಕುರಿತು ಅವರ ಅಭಿವೃದ್ಧಿ ಕಾರ್ಯಕ್ಕೆ ಒಂದು ಸಮಿತಿಯನ್ನು ರಚಿಸಲಿಕ್ಕೆ ಅದೇ ರೀತಿಯಲ್ಲಿ ವಿಭಾಗ ಮಟ್ಟದಲ್ಲಿ ಅದೇ ರೀತಿಯಲ್ಲಿ ತಾಲ್ಲೂಕು ಮಟ್ಟದಲ್ಲಿ ಸರ್ಕಾರಿ ಮತ್ತು ಸರ್ಕಾರೇತರ ಸದಸ್ಯರನ್ನು ಸೇರಿಸಿಕೊಂಡು ಒಂದು ಸಮಿತಿಯನ್ನು ರಚಿಸಲಿಕ್ಕೆ ಸರ್ಕಾರ ಆದೇಶ ನೀಡಿತ್ತು. ಆ ಆದೇಶಕ್ಕೆ ೧೯೮೩ ರಲ್ಲಿ ನಂ. ಡಿಎಸ್‌ಎ ಎಸ್‌ಡಿ ಡಬ್ಲ್ಯೂ. ಸಿಆರ್. ೩೦, ೮೪-೮೫ ರಲ್ಲಿ ಪುನಃ ರಿವೈಂಡರ್ ಕೂಡಾ ಹಾಕಿತ್ತು ಆದರೆ ಇಷ್ಟರವರೆಗೂ ಯಾವುದೇ ಒಂದು ಸಮಿತಿಯನ್ನು ಸರ್ಕಾರ ಕನ್‌ಸ್ಟಿಟ್ಯೂಟ್ ಮಾಡಿದ್ದನ್ನು ನಾವು ಕಾಣುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಬೆಂಗಳೂರು

ಜಿಲ್ಲೆಯಲ್ಲಿ ನೋಡಿದರೂ ಕೂಡಾ ಈ ಸಮಿತಿಯ ರಚನೆಯಾಗಿಲ್ಲ. ಅದೇ ರೀತಿಯಲ್ಲಿ ಎಸ್.ಇ.ಪಿ. ಯೋಜನೆಯಾಗಲೀ ಅಥವಾ ಸ್ಪೆಷಲ್ ಕಾಂಪೊನೆಂಟ್ ಪ್ರೋಗ್ರಾಮ್ ಆಗಲಿ, ಅಥವಾ ಇನ್ನಾವ ಯೋಜನೆಗಳಾಗಲಿ ಸರಿಯಾಗಿ ಆಗಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಇದರ ಬಗ್ಗೆ ಒಂದು ಸಮಿತಿಯನ್ನು ರಚಿಸಲಿಕ್ಕೆ ಆದೇಶ ಇತ್ತು. ಆದರೂ ಇಂಥ ಲೀಗಲ್ ಕಮಿಟಿ, ನಾನ್ ಅಫಿಷಿಯಲ್ ಕಮಿಟಿಗಳನ್ನು ರಚಿಸಲಿಕ್ಕೆ ಇಷ್ಟರವರೆಗೆ ಸರ್ಕಾರ ಈ ಆದೇಶವನ್ನು ಕೊಟ್ಟರೂ ಕೂಡಾ ಅದರ ಬಗ್ಗೆ ಕ್ರಮಕೈಗೊಂಡು ಕಾನ್‌ಸ್ಟಿಟ್ಯೂಟ್ ಮಾಡದೇ ಇದರ ಬಗ್ಗೆ ನಿರ್ಲಕ್ಷತೆ ತೋರಿರುವುದನ್ನು ನಾವು ಕಾಣುತ್ತಿದ್ದೇವೆ. ಅದೇ ರೀತಿಯಲ್ಲಿ ಹರಿಜನ ಗಿರಿಜನರ ಬಗ್ಗೆ ಅಟ್ರಾಸಿಟಿ ಕಮಿಟಿಯನ್ನು ಸರ್ಕಾರ ಮಾಡಬೇಕು ಎಂದು ಆದೇಶವನ್ನು ಇತ್ತಿತ್ತು. ಆದರೆ ದುರಾದೃಷ್ಟವಶಾತ್ ಯಾವುದೇ ಕಮಿಟಿ ನೇಮಕ ಆದದ್ದು ನಾವು ಕಾಣುತ್ತಿಲ್ಲ. ಅದೇ ರೀತಿಯಲ್ಲಿ ಹರಿಜನರ ಬಗ್ಗೆ ಅಟ್ರಾಸಿಟಿ ಕಮಿಟಿ ಯಾಗಲೀ, ಎಸ್.ಇ.ಪಿ. ಆಗಲೀ ಆಗಿಲ್ಲ. ಎಸ್.ಟಿ. ಯೋಜನೆಯಲ್ಲಿ ಸೌಕರ್ಯ ಪರಿಶೀಲನೆಗೆ ಸಮಿತಿಯನ್ನು ನೇಮಕ ಮಾಡಲಿಕ್ಕೆ ಹೇಳಿತ್ತು. ಇದರಲ್ಲಿ ಹರಿಜನ ಗಿರಿಜನರಿಗೆ ಅನ್ಯಾಯ ಆದಾಗ ಕೊಲೆಪಾತಕ ಕೇಸ್‌ಗಳಲ್ಲಿ ಅನ್ಯಾಯ ಆದಂಥ ಸಂದರ್ಭದಲ್ಲಿ ಪರಿಹಾರ ಒದಗಿಸುವಂಥ ಒಂದು ಸಮಿತಿಯನ್ನು ರಚಿಸಲಿಕ್ಕೆ ಯೋಚಿಸಿತ್ತು. ಆದರೆ ಇದುವರೆಗೂ ಯಾವುದೇ ಸಮಿತಿ ಆದದ್ದನ್ನು ನಾವು ಕಾಣುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ ಅಡ್ವೈಸರಿ ಕಮಿಟಿಯನ್ನು ಶಾಸಕರ ಸದಸ್ಯತ್ವದಲ್ಲಿ ನೇಮಿಸಬೇಕು ಎಂದು ಹೇಳಿ

ಯಲ್ಲಿ ಕರೆಯಲಾಗಿದೆ. ಇದರಲ್ಲಿ ಎರಡು ಸಾರಿ ಸಭೆ ನಡೆದಿದೆ. ಅದರಲ್ಲಿ ಎರಡು ಸಭೆ ಕೋರಂ ಇಲ್ಲದೇ ಮುಂದೂಡಿದ್ದನ್ನು ನಾವು ಕಾಣುತ್ತಿದ್ದೇವೆ. ೮೮-೮೯ರಲ್ಲಿ ಯೋಜನೆಗಳನ್ನು ಕುರಿತು ಹೇಳುವುದಿದ್ದರೆ ಎಸ್.ಇ.ಪಿ. ಮತ್ತು ಟಿ.ಎಸ್.ಪಿ. ಯೋಜನೆಯಲ್ಲಿ ಇಂಡಿವಿಜುಯಲ್ ಇರಿಗೇಷನ್ ಬೋರ್‌ವೆಲ್ ಅಥವಾ ಓಪನ್ ವೆಲ್‌ಗೆ ಕೇಂದ್ರ ಸರ್ಕಾರ ೪.೨೪ ಕೋಟಿ ರೂಪಾಯಿಗಳನ್ನು ಸರ್ಕಾರ ಕೊಟ್ಟಿತ್ತು. ಇದರಲ್ಲಿ ೧೬೦೦ ಕೊಳವೆ ಬಾವಿ ಅಥವಾ ತೆರೆದ ಬಾವಿಗಳನ್ನು ತೆಗೆಯಬೇಕಾಗಿತ್ತು. ಇದು ಒಬ್ಬ ಫಲಾನುಭವಿಗೆ ೩೫ ಸಾವಿರ ರೂಪಾಯಿ ಉಚ್ಚಿತ ಸಬ್ಸಿಡಿ ಸಿಗುವಂಥ ಯೋಜನೆ. ಇದರಲ್ಲಿ ೭೫ ಶೇಕಡ ಸಬ್ಸಿಡಿ ಶೇಕಡ ೨೫ ಸಾಲದ ರೂಪದಲ್ಲಿ ದೊರೆಯುತಕ್ಕಂಥ ಅವಕಾಶ ಇದೆ. ೧೬೦೦ ಕೊಳವೆ ಬಾವಿ ಪೈಕಿ ೮೮-೮೯ರಲ್ಲಿ ಎಷ್ಟು ಬಾವಿಗಳನ್ನು ತೆರೆಯಲಾಗಿದೆ ಎಂದು ನನ್ನ ಪ್ರಶ್ನೆ. ಇಷ್ಟರವರೆಗೂ ಒಂದೇ ಒಂದು ಬಾವಿಗಳನ್ನು ತೆಗೆಯಲಿಕ್ಕೆ ಆಗಲಿಲ್ಲ. ಅದೇ ರೀತಿಯಲ್ಲಿ ೮೭-೮೮ರಲ್ಲಿ ಹೇಳುವುದಾದರೆ ಈ ವಿಶೇಷ ಘಟಕ ಯೋಜನೆಯಲ್ಲಿ ಒಂದೇ ಒಂದು ಕೊಳವೆ ಬಾವಿಗಳನ್ನು ಕಾರ್ಯಗತ ಮಾಡಲಿಕ್ಕೆ ಸರ್ಕಾರ ವಿಫಲವಾಗಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಏಕೆಂದರೆ ನಮ್ಮ ತಾಲ್ಲೂಕಿಗೆ ಕೊಳವೆ ಬಾವಿಗಳು ಪರಿಶಿಷ್ಟ ಜಾತಿಗೆ ಇವತ್ತು ಅವರಿಗೆ ಒಂದೇ ಒಂದು ಬಾವಿಗಳನ್ನು ಕೂಡಾ ತೋಡಲಿಕ್ಕೆ ಸರ್ಕಾರದಿಂದ ಸಾಧ್ಯವಾಗದ ವಿಷಯವನ್ನು ನಾವು ಕಾಣುತ್ತಿದ್ದೇವೆ. ಈ ಹರಿಜನ ಗಿರಿಜನ ಅಭಿವೃದ್ಧಿ ಯೋಜನೆಗಳು ಕಾರ್ಯಗತವಾಗಬೇಕಾದರೆ ಮುಖ್ಯವಾಗಿ ಹೇಳುವುದಿದ್ದರೆ ಜಿಲ್ಲಾ ಮಟ್ಟದಲ್ಲಿ ಈ ಅಭಿವೃದ್ಧಿ ಯೋಜನೆಯನ್ನು ಕಾರ್ಯಗತ ಮಾಡಲಿಕ್ಕೆ ಅಥವಾ ಇಂಪ್ಲಿಮೆಂಟ್ ಮಾಡಲಿಕ್ಕೆ ಯಾವುದೇ ಒಬ್ಬ ಅಧಿಕಾರಿಗಳನ್ನು ಇಷ್ಟರವರೆಗೆ ನೇಮಕ ಮಾಡಿಲ್ಲ. ಈ ಹಿಂದೆ ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬರುವುದಕ್ಕೆ ಮೊದಲು ಈ ಕಾರ್ಯವನ್ನು ಜಿಲ್ಲಾ ಮಟ್ಟದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಅಥವಾ ಜಿಲ್ಲಾ ಅಭಿವೃದ್ಧಿ ಸಮಿತಿಯ ಯೋಜನೆಯಲ್ಲಿ ಅಭಿವೃದ್ಧಿ ಮಾಡಲಿಕ್ಕೆ ಅವಕಾಶ ಇತ್ತು. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಿದ್ದರೆ ಕಳೆದ ಎಷ್ಟೋ ವರ್ಷಗಳಿಂದ ಹರಿಜನರ ಗಿರಿಜನರ ಯೋಜನೆಯಲ್ಲಿ ಹಾಕಿದಂಥ ಹಣವನ್ನು ವೆಚ್ಚ ಮಾಡದೇ ಲ್ಯಾಪ್ಸ್ ಆಗತಕ್ಕಂಥ ಸಂದರ್ಭಗಳನ್ನು ನಾವು ಕಾಣುತ್ತಿದ್ದೇವೆ. ಅದೇ ರೀತಿಯಾಗಿ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದಿದೆ. ಕಳೆದ ೮೭-೮೮ರಲ್ಲಿ ೫೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇವೊತ್ತು ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಇವೊತ್ತು ಇದು ಹರಿಜನ ಗಿರಿಜನರಿಗೆ ಲ್ಯಾಪ್ಸ್ ಆಗುತ್ತದೆ. ಇದನ್ನು ಇಂಪ್ಲಿಮೆಂಟ್ ಮಾಡುವ ಅಧಿಕಾರಿಗಳ ನೇಮಕ ಇಷ್ಟರವರೆಗೆ ಆಗಿಲ್ಲ. ಜಿಲ್ಲಾ ಪರಿಷತ್‌ನವರನ್ನು ಕೇಳಿದಾಗ ಇದನ್ನು ಕಾರ್ಯಗತ ಮಾಡಲಿಕ್ಕೆ ಯಾವ ಅಧಿಕಾರಿಗಳನ್ನೂ ನೇಮಿಸಿಲ್ಲ ಅಥವಾ ಯಾವ ಅಧಿಕಾರಿಗೂ ಸಂಬಂಧಪಟ್ಟ ವಿಶೇಷ ಯೋಜನೆ ಬಗ್ಗೆ ಅಪ್ಪಾಗಿ ಮೇನವರಿಕೆ ಮಾಡಲಿಕ್ಕೆ ಸಾಧ್ಯ ಆಗದೇ ಇರತಕ್ಕಂಥ ಪರಿಸ್ಥಿತಿಯನ್ನು ನಾವು ಇವೊತ್ತು ಕಾಣುತ್ತಿದ್ದೇವೆ. ಬಹು ಹೆಚ್ಚಿನ ಮಟ್ಟದ ಜಾಹಿರಾತನ್ನು ಜನತಾ ಸರ್ಕಾರ ಹಾಕಿಕೊಂಡಿರುವುದು ಇದೆ. ಇದರಲ್ಲಿ ಕೂಡ ತನ್ನ ಅಗ್ಗದ ಪ್ರಚಾರಕ್ಕಾಗಿ ಯೋಜನೆಗಳನ್ನು ಹಾಕಿಕೊಂಡು ಹೆಚ್ಚು ಹೆಚ್ಚು ಪ್ರಚಾರ ಮಾಡುತ್ತಿದ್ದಾರೆ.

ಇವೊತ್ತು ಹರಿಜನ ಗಿರಿಜನ ಯೋಜನೆಯಲ್ಲಿ ಕೇಂದ್ರ ಸರ್ಕಾರ ಕಮ್ಯೂನಿಟಿ ಹಾಲ್‌ಗೆ ಉಚಿತವಾಗಿ ಒಂದು ಟಿ. ವಿ. ಸೆಟ್ ಅನ್ನು ಅಳವಡಿಸಬೇಕೆಂದು ಯೋಜನೆ ಹಾಕಿದ್ದರೂ ಇವೊತ್ತು ಇಂತಹ ಯೋಜನೆಯಲ್ಲಿ ಒಂದೇ ಒಂದು ಟಿ ವಿ ಸೆಟ್ ಅನ್ನು ನಾವು ಹಳ್ಳಿಗಳ ಪ್ರದೇಶವನ್ನು ಬಿಟ್ಟು ನಮ್ಮ ಬೆಂಗಳೂರು ನಗರ ಪ್ರದೇಶದಲ್ಲಿಯೂ ಕೂಡ ಮಾಡುವುದಕ್ಕಾಗಲಿಲ್ಲ ಸರ್ಕಾರ ಹರಿಜನ ಗಿರಿಜನರ ಯೋಜನೆಯಲ್ಲಿ ಕೇಂದ್ರ ಸರ್ಕಾರ ಒದಗಿಸಿದ ಹಣವನ್ನು ಕೇವಲ ಒಂದು ರೀತಿಯ ಇತರ ರೀತಿಯ ಪ್ರಚಾರಕ್ಕಾಗಿ ಉಪಯೋಗಿಸುತ್ತಿರುವುದನ್ನು ನಾವು ಮಾರ್ಗ ಬದಿಯಲ್ಲಿ ಅಥವಾ ಬಸ್ ನಿಲ್ದಾಣ ಗಳಲ್ಲಿ ಕಾಣುತ್ತಿದ್ದೇವೆ. ಸರ್ಕಾರ ಹಾಕಿರತಕ್ಕಂಥ ಜಾಹಿರಾತು ಯಾವ ರೀತಿ ಇದೆ ಅಂದರೆ ನಾವು ಕೈಗಾರಿಕೆ ಮಟ್ಟಿಗೆ ಇಷ್ಟು ಹಣ ಖರ್ಚು ಮಾಡಿದ್ದೇವೆ. ಹರಿಜನ ನಿಗಮಕ್ಕೆ ಎಷ್ಟು ಖರ್ಚು ಮಾಡಿದ್ದೇವೆ, ಅಸ್ಪೃಶ್ಯತೆ ನಿವಾರಣೆ ಮಾಡುವಂತಹ ಬೋರ್ಡ್‌ಗಳನ್ನು ತಗಲಿಸಿಕೊಂಡಿರುವುದನ್ನು ನಾವು ಕಾಣುತ್ತಿದ್ದೇವೆ. ಆದರೆ ನಿಜವಾಗಿ ಈ ಹರಿಜನ ಗಿರಿಜನ ಯೋಜನೆಗೆ ಸಂಬಂಧಪಟ್ಟಂತಹ ಹಣವನ್ನು ಈ ಒಂದು ಜಾಹಿರಾತು ಅಥವಾ ಪ್ರಕಟಣೆಯ ಬಳಕೆಗಾಗಿ ಉಪಯೋಗ ಮಾಡು ತ್ತಿದ್ದಾರೆ ಎಂಬುದರಲ್ಲಿ ಸಂದೇಹವೇ ಇಲ್ಲ. ದಿವಂಗತ ಡಾ॥ ಅಂಬೇಡ್ಕರ್ ಅವರ ಜಯಂತಿಯ ಆಚರಣೆಯನ್ನು ಮಾಡಬೇಕು ಅಂದ ಕೂಡಲೆ ಹರಿಜನ ಗಿರಿಜನ ಹಣವನ್ನು ಉಪಯೋಗ ಮಾಡಿ ಕೊಂಡು ಜಯಂತಿಯನ್ನು ಆಚರಿಸುತ್ತಿರುವುದನ್ನು ಇವತ್ತು ನಾವು ಕಾಣುತ್ತಿದ್ದೇವೆ. ನಾನು ಕೇಳುವುದು ಏನು ಅಂದರೆ ಡಾ. ಅಂಬೇಡ್ಕರ ಅವರ ಜಯಂತಿಯನ್ನು ಮಾಡಬೇಕಾದರೆ ಇತರ ಫಂಡ್‌ನಿಂದ ಹಣವನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಬದಲು ಇವೊತ್ತು ಹರಿಜನ ಗಿರಿಜನ ಅಥವಾ ಇತರ ವರ್ಗಗಳ ಫಂಡ್‌ನಿಂದ ಇವರ ಜಯಂತಿಗೆ ಉಪಯೋಗ ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದರಿಂದ ನಿಜವಾಗಿ ಫಲಾನುಭವಿಗಳಿಗೆ ಸಿಗತಕ್ಕಂಥ ಹಣ ಸಿಕ್ಕುತ್ತಿಲ್ಲ ಎನ್ನುವುದು ಈ ಒಂದು ಕಾರ್ಯವು ಸಾಕ್ಷಿ ಆಗಿದೆ. ಇವೊತ್ತು ಹರಿಜನ ಗಿರಿಜನ ಯೋಜನೆಯಲ್ಲಿ ಬಂದಂತಹ ಹಣವನ್ನು ಅವರ ಅಭಿವೃದ್ಧಿ ವೆಚ್ಚ ಮಾಡುವಲ್ಲಿ ಅಧಿಕಾರಿಗಳು ಕೂಡ ಸಾಕಷ್ಟು ಕಾಳಜಿ ವಹಿಸಿ ಕೆಲಸ ಮಾಡುತ್ತಿಲ್ಲ. ಇವೊತ್ತು ನೂರಾರು ಕೊಳವೆ ಬಾವಿಗಳನ್ನು ತೆರೆದಿದ್ದಿರಿ. ೧೯೮೦-೮೧ರಲ್ಲಿ ತಯಾರಾದ ಕೊಳವೆ ಬಾವಿ ಯೋಜನೆಯಲ್ಲಿ ಯಾವುದೇ ಕಾರ್ಯಗತ ಆಗಿಲ್ಲ. ಇವೊತ್ತು ಗ್ರಾಮೀಣ ಬ್ಯಾಂಕ್‌ಗಳಿಗೆ ಯೋಜನೆಗಳನ್ನು ಅಳವಡಿಸಿದರೆ ಗ್ರಾಮ ಬ್ಯಾಂಕಿನ ಅಧಿಕಾರಿ ಗಳು ಇಲ್ಲದ ಸಲ್ಲದ ಕುಂಟು ನೆಪಗಳನ್ನು ಹೇಳಿ ಇದರ ಅಭಿವೃದ್ಧಿ ಮಾಡಲಿಕ್ಕೆ ತೊಂದರೆ ಮಾಡುವ ವಿಷಯವನ್ನು ನಾವು ಕಾಣುತ್ತಿದ್ದೇವೆ ಇವೊತ್ತು ಎಲ್ಲಾ ರೆಕಾರ್ಡ್‌ಗಳನ್ನು ಮಾಡಿಕೊಟ್ಟರೂ ಕೂಡ P.L.D. ಬ್ಯಾಂಕ್ ಅಥವಾ ಸೊಸೈಟಿಗಳು ಪ್ರಕರಣಗಳನ್ನು ಅಥವಾ ರೆಕಾರ್ಡ್‌ಗಳನ್ನು ರಿಜೆಕ್ಟ್ ಮಾಡುವ ಸಂದರ್ಭಗಳು ಇವೆ. ಇವೊತ್ತು ಹರಿಜನ ಗಿರಿಜನ ಹುಟ್ಟಿದ ಮಾತ್ರಕ್ಕೆ ಅವರಿಗೆ ನೂರಾರು ವರ್ಷದ ಹಿಂದಿನ ಡೀ-ನೋಟ್ಸ್ ಅನ್ನು ಉದ್ದೇಶಪೂರ್ವಕವಾಗಿ ಪ್ರಾಥಮಿಕ ಬ್ಯಾಂಕ್‌ನವರು ಅಥವಾ ಸಂಘ ಸಂಸ್ಥೆಗಳಲ್ಲಿ ಕೇಳುವಂತಹ ಯೋಜನೆಯನ್ನು ಇನ್ನೂ ಮುಂದು ವರಿಸುತ್ತಿದ್ದೀರಿ. ಕಂದಾಯ ಇಲಾಖೆಯಲ್ಲಿ ಪಹಣಿ ಪತ್ರಕ್ಕೆ ಮೂಲ ರೆಕಾರ್ಡ್ ಇರುತ್ತದೆ, ಅವರೆ ರೆಕಾರ್ಡ್‌ಗಳನ್ನು ಪಹಣಿ ಪತ್ರಕ್ಕೆ ಎಲ್ಲಾ ಅಳವಡಿಸಿದರೂ ಕೂಡ ಇವೊತ್ತು ಡಿ-ನೋಟ್ಸ್ ಕಳೆದು ಕೊಂಡವರಿಗೆ ಸಾಲ ಸಿಗತಕ್ಕಂಥಹ ಪ್ರವೃತ್ತಿ ಇರುವುದಿಲ್ಲ. ಸುಳ್ಳು ನೆಪ ಹೇಳಿ ಇವೊತ್ತು ಈ ಯೋಜನೆ ಅಭಿವೃದ್ಧಿ ಆಗಲಿಕ್ಕೆ ಅಸಾಧ್ಯವಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡಿರುವುದನ್ನು ನಾವು ಕಾಣುತ್ತಿದ್ದೇವೆ. ಅದೇ ರೀತಿ ನಾವು ಈಗಾಗಲೇ ಕೇಂದ್ರ ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮದಂತೆ ಗುಡ್ಡಗಾಡು ಪ್ರದೇಶದಲ್ಲಿ ವಿಶೇಷ ಘಟಕ ಅಥವಾ ಹರಿಜನ ಗಿರಿಜನ ಯೋಜನೆಯಲ್ಲಿ ಆದಿವಾಸಿ ಜನಗಳಿಗೆ ಅಕ್ಕಿ ಕೊಡುವ ಪದ್ಧತಿ ಇದೆ. ಇವೊತ್ತು ಜನತಾ ಸರ್ಕಾರ ಗುಡ್ಡಗಾಡು ಜನರನ್ನು ಬಿಟ್ಟು ಇವೊತ್ತು ಎಲ್ಲಾ ಜನರಿಗೆ ಅಕ್ಕಿಯನ್ನು ಎರಡು ರೂಪಾಯಿಗಳಿಗೆ ವಿತರಣೆ ಮಾಡುತ್ತಿದ್ದಾರೆ. ನಿಜವಾಗಿ ಗುಡ್ಡಗಾಡು ಪ್ರದೇಶಕ್ಕೆ ಕೇಂದ್ರ ಸರ್ಕಾರ ಒದಗಿಸಿರುವ ಅಕ್ಕಿಯ ಈ ಒಂದು ಸವಲತ್ತನ್ನು ಕರ್ನಾಟಕ ಸರ್ಕಾರ ಪ್ರತಿಯೊಬ್ಬ ಹಸಿರು ಕಾರ್ಡ್ ಪಡೆದವನಿಗೂ ಒದಗಿಸುತ್ತಿದ್ದು, ಗುಡ್ಡಗಾಡು ಪ್ರದೇಶದ ಜನರನ್ನು ಇವರೊಟ್ಟಿಗೆ ಸೇರಿಸದೆ ವಿತರಣೆ ಮಾಡುವ ಅನ್ಯಾಯದ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಈ ರೀತಿ ಆಗಬಾರದು. ನಿಜವಾದ ಪರಿಸ್ಥಿತಿಯನ್ನು ಪರಿಶೀಲಿಸಿ ಸರಿಯಾಗಿ ಗುಡ್ಡಗಾಡು ಪ್ರದೇಶದಲ್ಲಿ ಜನರು ಏನು ಇದ್ದಾರೆ ಅವರಿಗೆ ಈ ಸವಲತ್ತುಗಳು ತಲುಪುವಂತೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು.—ಮುಕ್ತಾಯ ಮಾಡಿ.

೩-೩೦ ಪಿ.ಎಂ.

ಶ್ರೀ ಕೆ. ಕುಶಾಲ.—೧೯೭೪ನೇ ಇಸವಿಯಲ್ಲಿ ಪರಿಶಿಷ್ಟ ಜಾತಿಯ ಜನರಿಗೆ ದರಖಾಸ್ತಿನಲ್ಲಿ ಜಮೀನನ್ನು ವಿಶೇಷ ಯೋಜನೆಯ ಅಡಿಯಲ್ಲಿ ನೀಡುವಂತಹ ಕಾರ್ಯಕ್ರಮವನ್ನು ಆಗಿನ ಸರ್ಕಾರ ಹಾಕಿಕೊಂಡಿತು. ಅದರ ಪ್ರಕಾರ ಕೆಲವರಿಗೆ ಕೊಟ್ಟಂತಹ ಜಮೀನುಗಳಿಗೆ ಸಂಬಂಧಪಟ್ಟಂತೆ ಇನ್ನೂ ಗಡಿಯನ್ನು ಗುರುತು ಮಾಡಿ ಕೊಟ್ಟಿಲ್ಲ. ಈ ಬಗ್ಗೆ ಇನ್ನೂ ಮಂಜೂರಾತಿ ಪತ್ರ ಅಥವಾ ಡೀನೋಟ್ಸ್ ಕೊಟ್ಟಿಲ್ಲ ಅರಣ್ಯ ಇರುವಂತಹ ಪ್ರದೇಶವನ್ನು ಅಂದರೆ ಮರಗಳು ಇರುವಂತಹ ಸ್ಥಳವನ್ನು ಇವರಿಗೆ ಕೊಟ್ಟಿರುವುದರಿಂದ ಇವೊತ್ತಿನವರೆಗೆ ಹಕ್ಕುಪತ್ರ ಕೊಡುವುದಕ್ಕೆ ತೊಂದರೆ ಆಗಿದೆ. ಅಲ್ಲಿರುವಂತಹ ಮರಗಳನ್ನು ಇನ್ನೂ ತೆಗೆಯದ ಕಾರಣ ಈ ಜನರಿಗೆ ಡೀನೋಟ್ಸ್ ಕೊಡುವುದಕ್ಕೆ ಕಷ್ಟವಾಗಿದೆಯೆಂದು ಹೇಳುವುದನ್ನು ನಾವು ಕೇಳುತ್ತಿದ್ದೇವೆ. ನಂತರ ಸರ್ಕಾರ ಒಂದು ಹೆಕ್ಟೇರ್ ಪ್ರದೇಶದಲ್ಲಿ ೨೫ ಮರಗಳಂತೆ ಕಡಿದು ಆ ಜಾಗವನ್ನು ಈ ಜನರಿಗೆ ಮಂಜೂರು ಮಾಡಬೇಕೆಂಬ ಒಂದು ಯೋಜನೆಯನ್ನು ಹಾಕಿಕೊಂಡಿತು. ೧೯೭೪ರ ನಂತರ ಹಾಕಿಕೊಂಡ ಈ ಒಂದು ಯೋಜನೆಯ ಪ್ರಕಾರ ಅಲ್ಲಿ ಮರಗಳನ್ನು ಕಡಿಯುವಂತಹ ಕೆಲಸ ಇನ್ನೂವರೆಗೆ ಆಗಿಲ್ಲ. ಇದರಿಂದ ಪರಿಶಿಷ್ಟ ಜಾತಿ ಮತ್ತು ವರ್ಗದ ಜನರಿಗೆ ದರಖಾಸ್ತು ಜಮೀನನ್ನು ಮಂಜೂರು ಮಾಡುವಂತಹ ಕೆಲಸ ಇದುವರೆಗೆ ಸಾಧ್ಯವಾಗಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಾರಿಗೆ ಇಲಾಖೆ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಇವೊತ್ತು ಈ ಇಲಾಖೆಯಲ್ಲಿರುವಂತಹ ಒಂದು ಡಿಪೋ ಸಿಬ್ಬಂದಿಗೂ ಮತ್ತೊಂದು ಡಿಪೋ ಸಿಬ್ಬಂದಿಗೂ ಹೊಂದಾಣಿಕೆ ಇಲ್ಲದಂತೆ ಆಗಿದೆ. ಇದರ ಜೊತೆಗೆ ಬಸ್‌ಗಳನ್ನು ಓಡಿಸುವುದರಲ್ಲಿ ಸಹ ಒಂದು ರೀತಿಯ ಪೈಪೋಟಿ ನಡೆಯುತ್ತಿದೆ. ಒಂದೇ ರೂಟ್‌ನಲ್ಲಿ ಎರಡು ಡಿಪೋದವರು ಸಹ ಬಸ್‌ಗಳನ್ನು ಓಡಿಸುತ್ತಿರುವಂತಹ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಬಸ್‌ಗಳನ್ನು ಓಡಿಸುವುದರಲ್ಲಿ ಎರಡು ಡಿಪೋಗಳ ನಡುವೆ ಪೈಪೋಟಿ ನಡೆಯುತ್ತಿರುವ ಕಾರಣ ಸಮಯಕ್ಕೆ ಸರಿಯಾಗಿ ಬಸ್‌ಗಳು ಹೋಗುತ್ತಿಲ್ಲ. ನಾನು ಕಳೆದ ಅಧಿವೇಶನದ ಸಮಯದಲ್ಲಿ ಪುತ್ತೂರು–ಸೂಳ್ಯ–ಮಡಿಕೇರಿ–ಮೈಸೂರು–ಬೆಂಗಳೂರು ಮಾರ್ಗದಲ್ಲಿ ಒಂದ ಸೆಮಿ ಲಕ್ಷುರಿ ಬಸ್ ಓಡಿಸಬೇಕೆಂದು ಕೇಳಿಕೊಂಡಾಗ, ಅದಕ್ಕೆ ಮಾನ್ಯ ಸಚಿವರು ಒಪ್ಪಿಕೊಂಡು ಒಂದು ಬಸ್ಸನ್ನು ಹಾಕಿದ್ದಾರೆ. ಇದು ಪುತ್ತೂರು ಡಿಪೋದಿಂದ ಬಿಡುವ ಬಸ್ ಆಗಿದೆ. ಈ ರೂಟ್‌ನಲ್ಲಿ ಓಡಾಡುತ್ತಿರುವ ಬಸ್‌ಗೆ ಸಂಬಂಧಪಟ್ಟಂತೆ ಬೆಂಗಳೂರು ಡಿಪೋದವರು ಇನ್ನೂ ಬುಕ್ಕಿಂಗ್ ಕೌಂಟರ್ ತೆರೆದಿಲ್ಲ. ಈ ಮಾರ್ಗದಲ್ಲಿ ಬಸ್ ಬೆಂಗಳೂರಿನಿಂದ ಹೊರಡುವುದಕ್ಕೆ ಸ್ವಲ್ಪ ಮುಂಚೆ ಮತ್ತೊಂದು ಬಸ್ ಬೆಂಗಳೂರು ಡಿಪೋದಿಂದ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಹೊರಡುವುದರಿಂದ, ಈ ಬಸ್‌ಗೆ ವಸೂಲಿ ಕಡಿಮೆ ಆಗುತ್ತದೆಂಬ ಕಾರಣದಿಂದ ಇನ್ನೂ ಬುಕಿಂಗ್ ಕೌಂಟರ್‌ನ್ನು ತೆರೆದಿಲ್ಲ. ಇದೇ ಕಾರಣ ಹೇಳಿಕೊಂಡು ಕಳೆದ ಎರಡು ವರ್ಷಗಳಿಂದ ಬುಕಿಂಗ್ ಕೌಂಟರ್‌ನ್ನು ತೆರೆದಿಲ್ಲ ಬುಕಿಂಗ್ ಕೌಂಟರ್ ತೆರೆಯಬೇಕೆಂದು ನಾನು ಹಲವಾರು ಸಲ ಮಾನ್ಯ ಸಚಿವರಲ್ಲಿ ಕೇಳಿ ಕೊಂಡರೂ ಸಹ ಏನೂ ಪ್ರಯೋಜನವಾಗಿಲ್ಲ. ಆದ್ದರಿಂದ ಈ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ೧೯೮೨–೮೩ರಲ್ಲಿ ಸರ್ಕಾರ ಸವಣೆಗೆ ಒಂದು ಬಸ್‌ಸ್ಟಾಂಡನ್ನು ಕಟ್ಟಿಸಿಕೊಡಲು ೧೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿತ್ತು, ಆದರೆ ಇಲ್ಲಿಯವರೆಗೆ ಆ ಕೆಲಸ ಆಗಿಲ್ಲ. ಈ ಕೆಲಸ ಮಾಡಲು ಸರ್ಕಾರಕ್ಕೆ ಅಸಾಧ್ಯವಾಗಿದೆ ಎಂದು ಕಾಣುತ್ತದೆ. ನಮ್ಮ ಸೂಳ್ಯದಿಂದ ಕೇಂದ್ರಸ್ಥಾನವಾದ ಬೆಂಗಳೂರು ನಗರಕ್ಕೆ ಒಂದು ಸೂಪರ್ ಡೀಲಕ್ಸ್ ಬಸ್‌ನ್ನು ಓಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಎಲ್ಲ ತಾಲ್ಲೂಕ್ ಕೇಂದ್ರಗಳಿಂದ ಬೆಂಗಳೂರು ನಗರಕ್ಕೆ ಬಸ್‌ಗಳನ್ನು ಓಡಿಸುತ್ತಿದ್ದರೂ ಸಹ ನಮ್ಮ ಸೂಳ್ಯದಿಂದ ಮಾತ್ರ ಓಡಿಸುತ್ತಿಲ್ಲ. ಈಗಲಾದರೂ ನಮ್ಮ ತಾಲ್ಲೂಕ್ ಕೇಂದ್ರದಿಂದ ಬೆಂಗಳೂರಿಗೆ ಬಸ್ ಓಡಿಸಬೇಕೆಂದು ವಿನಂತಿ ಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ನಾನು ಕೊನೆಯದಾಗಿ ಮಾತನಾಡುತ್ತಿದ್ದೇನೆ, ಇಲ್ಲಿಯವರೆಗೆ ಮಾನ್ಯ ಸದಸ್ಯರು ಕೋರಂಗೋಸ್ಕರವಾಗಿ ಸಭೆಯಲ್ಲಿದ್ದು

ಮಾತನಾಡಿದಂತೆ ಕಾಣುತ್ತದೆ. ಈಗ ನಾವು ಈ ಸಮಾಜ ಕಲ್ಯಾಣ ಇಲಾಖೆಯನ್ನು ಇಟ್ಟುಕೊಳ್ಳಬೇಕೋ ಅಥವಾ ಬೇಡವೋ ಎಂಬ ಪ್ರಶ್ನೆ ಬರುತ್ತದೆ. ನಮಗೆ ಸ್ವಾತಂತ್ರ್ಯ ಬಂದಾಗಿನಿಂದಲೂ ಕೂಡ ಈ ಸಮಾಜ ಕಲ್ಯಾಣ ಇಲಾಖೆ ಪತಿಯಿಂದ ಕೆಲಸ ಮಾಡುತ್ತಾ ಬಂದಿದ್ದೇವೆ. ಆದರೆ ಯಾವ ಬದಲಾವಣೆಯೂ ಆಗಿಲ್ಲ. ಆದ್ದರಿಂದ ಈ ಇಲಾಖೆ ಸಮಾಜ ಕಲ್ಯಾಣ ಇಲಾಖೆ ಎನ್ನುವುದಕ್ಕೆ ಬದಲು ಸಮಾಜ ಬದಲಾವಣೆ ಮಾಡತಕ್ಕಂಥ ಇಲಾಖೆ ಎಂದು ಬೇರೆ ಹೆಸರನ್ನು ಕೊಡಲು ನಾವು ಯೋಚನೆ ಮಾಡಬೇಕಾಗಿದೆ. ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಚೇಂಜ್ ಎಂದು ನಾವು ಹೇಳುತ್ತೇವೆ. ಆದ್ದರಿಂದ ಈ ಇಲಾಖೆಗೂ ಸಹ ಸೋಷಿಯಲ್ ಚೇಂಜ್ ಎಂಬ ಹೆಸರು ಇಟ್ಟರೆ ಪ್ರಯೋಜನವಾಗುತ್ತದೆ ಮತ್ತು ಅರ್ಥಗರ್ಭಿತವಾಗುತ್ತದೆ. ನನ್ನ ಒಂದು ಅಭಿಪ್ರಾಯದ ಹಿನ್ನೆಲೆಯಲ್ಲಿ ಮಾತನಾಡುವುದಾದರೆ, ಮೊದಲಿನಂತೆಯೇ ಈಗಲೂ ಸಮಾಜ ಕಲ್ಯಾಣ ಇಲಾಖೆ ಇದೆ. ನಮ್ಮ ಸಮಾಜವೂ ಅದೇರೀತಿ ಇದೆ, ಜಾತಿಗಳೂ ಅದೇರೀತಿ ಇವೆ, ಮತ್ತು ನಮ್ಮ ಸಮಾಜದ ವ್ಯವಸ್ಥೆಯೂ ಸಹ ಅದೇ ರೀತಿ ಇದೆ. ನಮ್ಮ ಜನರ ನಡವಳಿಕೆಗಳೂ ಸಹ ಅದೇ ರೀತಿ ಇವೆ. ನಮ್ಮ ಕಾರ್ಯಕ್ರಮಗಳು ಸಹ ಅದೇರೀತಿಯಲ್ಲಿ ಇವೆ.

ಯಥಾಸ್ಥಿತಿ ಹಾಗೆಯೇ ನಡೆಯುತ್ತಿದೆ. ಆದ್ದರಿಂದ ನಾನು ನನ್ನ ಅನುಭವದ ಹಿನ್ನೆಲೆಯಲ್ಲಿ ಹೇಳುವುದಾದರೆ, ಈ ಸಮಾಜ ಕಲ್ಯಾಣ ಇಲಾಖೆ ಎನ್ನುವುದಕ್ಕೆ ಬದಲಾಗಿ 'ಸಮಾಜದ ಬದಲಾವಣೆಯ ಇಲಾಖೆ' ಎನ್ನತಕ್ಕಂಥ ಹೆಸರು ಇಡತಕ್ಕಂಥದ್ದು ಸೂಕ್ತ ಎಂದು ನಾನು ಹೇಳುತ್ತಾ ಇದ್ದೇನೆ. ಈಗ ಬಹಳ ವಿಷಯಗಳ ಮೇಲೆ ಚರ್ಚೆ ನಡೆದಿದೆ. ಬಹಳ ಸದಸ್ಯರೂ ಕೂಡ ಇದರ ಮೇಲೆ ಮಾತನಾಡಿದ್ದಾರೆ. ಈಗ ನಾನು ಹೆಚ್ಚು ವಿವರವಾಗಿ ಮಾತನಾಡುವುದಕ್ಕೆ ಹೋಗದೇ ಕೆಲವು ವಿಷಯಗಳ ಪಾಯಿಂಟ್ಸ್ ಮಾತ್ರ ಹೇಳುತ್ತೇನೆ. ಈ ಮಹಿಳಾ ಅಭಿವೃದ್ಧಿ ಇಲಾಖೆ ಇದೆ. ಹೊಸದಾಗಿ ಈ ಇಲಾಖೆಯನ್ನು ತೆರೆದಿರುವುದು ಕೆಲವು ವರ್ಷಗಳ ಹಿಂದೆ ಈ ಇಲಾಖೆಗೆ ಮಹಿಳೆಯರನ್ನೇ ನಿರ್ದೇಶಕರಾಗಿ ಮಾಡಿದ್ದೇವೆ. ಇದು ಸರಿಯೇ, ತಪ್ಪೇ ಎಂದು ವಿಚಾರ ಮಾಡಬೇಕು. ಅಲ್ಲಿಂದ ಇಲ್ಲಿಯವರೆಗೆ ಮಹಿಳೆಯರನ್ನು ನಿರ್ದೇಶಕರನ್ನಾಗಿ ಮಾಡಿ ಇದರಿಂದ ಅನುಕೂಲ ಏನಾಯಿತು ? ಅನುಕೂಲ ಏನೂ ಆಗಲಿಲ್ಲ ಇದನ್ನು ವಿಚಾರ ಮಾಡಬೇಕು ಎಂದು ನಾನು ಹೇಳುತ್ತಾ ಇದ್ದೇನೆ. ಈ ಮಹಿಳಾ ಅಭಿವೃದ್ಧಿ ಇಲಾಖೆಗೆ ಗಂಡಸರನ್ನು ನಿರ್ದೇಶಕರನ್ನಾಗಿ ಮಾಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಕಾರಣವೇನೆಂದರೆ, ಮಹಿಳೆಯರು ರಾಜ್ಯಭಾರ ಮಾಡುವಾಗ ಅಷ್ಟಾಗಿ ನಿರ್ದಿಷ್ಟವಾಗಿ, ಕಠೋರವಾಗಿ ಸಂಕಲ್ಪ ಮಾಡತಕ್ಕಂಥ ಕಾರ್ಯಕ್ರಮವನ್ನು ಇದುವರೆಗೆ ನಾನು ಇದರಲ್ಲಿ ನೋಡಿಲ್ಲ. ಆದ್ದರಿಂದ ಮಹಿಳೆಯರಿಗೆ ಇದನ್ನು ವಹಿಸದೆ, ಸರ್ವೇಸಾಧಾರಣವಾಗಿ ಗಂಡಸರು ನಿರ್ದೇಶಕರಾಗಿ ನಡೆಸಿಕೊಂಡು ಬರತಕ್ಕಂಥಾದ್ದರ ಬಗ್ಗೆ ತಾವು ಯೋಚನೆ ಮಾಡುತ್ತೀರಾ ಎಂದು ಹೇಳುತ್ತಾ ಇದ್ದೇನೆ. ಈಗ ಮಹಿಳಾ ಅಭಿವೃದ್ಧಿಗೆ ೧೯೮೭–೮೮ನೇ ಸಾಲಿನಲ್ಲಿ ೮೭ ಕೋಟಿ ೮೦ ಲಕ್ಷ, ೩೩ ಸಾವಿರ ರೂಪಾಯಿಗಳನ್ನು ಒದಗಿಸಿದೆ. ಹಲವಾರು ಯೋಜನೆಗಳನ್ನು ಹಾಕಿದ್ದೀರಿ. ಅದನ್ನು ಯಾವರೀತಿ ಮಾಡಿದ್ದೀರಿ ಯಾವರೀತಿ ಮಾಡಿಲ್ಲ ಎಂದು ನಾನು ಹೇಳುತ್ತಾ ಇಲ್ಲ ಆದರೆ ಒಟ್ಟು ಫಲಾನುಭವಿಗಳು, ಮಕ್ಕಳು, ಹೆಣ್ಣುಮಕ್ಕಳು, ಅಂಗವಿಕಲರು ಎಲ್ಲಾ ಸೇರಿ ೨೬,೭೮೮ ಜನಗಳಿಗೆ ಅನುಕೂಲವಾಗಿದೆ ಎಂದು ಹೇಳುತ್ತಾ ಇದ್ದೀರಿ. ನಮ್ಮ ರಾಜ್ಯದಲ್ಲಿ ೧೯೮೧ನೇ ಸೆನ್ಸಸ್ ಪ್ರಕಾರ ೩ ಕೋಟಿ ೭೧ ಲಕ್ಷದ ೩೫ ಸಾವಿರ ಜನಸಂಖ್ಯೆ ಇದೆ. ನೀವು ಬಗೆಹರಿಸತಕ್ಕಂಥ ಫಲಾನುಭವಿಗಳ ಸಂಖ್ಯೆ ಎಷ್ಟಿದೆ ಎಂದರೆ ೨೬ ಲಕ್ಷ

ಶ್ರೀ ಜಿ. ಬಸವಣ್ಣಪ್ಪ.—ಸಮಗ್ರ ಬಾಲ ವಿಕಾಸ ಯೋಜನೆಯಲ್ಲಿ ೧೦ ಲಕ್ಷ ಮಕ್ಕಳು ಪ್ರಯೋಜನ ಪಡೆದಿವೆ.

ಶ್ರೀ ಬಿ. ಬಸವಲಿಂಗಪ್ಪ.—ಇದನ್ನು ನಾನು ಹೇಳುತ್ತಾ ಇಲ್ಲ ತಾವು ಕೊಟ್ಟಿರತಕ್ಕ ವಾರ್ಷಿಕ ವರದಿಯಲ್ಲಿರುವ ಅಂಕಿಅಂಶಗಳನ್ನು ನಾನು ಹೇಳುತ್ತಾ ಇದ್ದೇನೆ. ನಾನೇನೂ ಬೇರೆಹೇಳುತ್ತಾ ಇಲ್ಲ. ಆದರೆ ನೀವು ಏನಾದರೂ ಮಾಡಿ, ನಾನು ಸಲಹೆ ಕೊಟ್ಟಿದ್ದೇನೆ. ಮಹಿಳಾ ನಿರ್ದೇಶಕರನ್ನಾಗಿ ಮಾಡಿರುವುದು ಸರಿಯಲ್ಲ, ಗಂಡಸರನ್ನು ನೇಮಿಸಬೇಕು ಎಂದು ಸಲಹೆ ಕೊಟ್ಟಿದ್ದೇನೆ. ಆಮೇಲೆ ನಾನು ಇನ್ನೊಂದು ವಿಷಯವನ್ನು ವಿಶೇಷವಾಗಿ ಸದನದ ಮುಂದೆ ಇಡುತ್ತೇನೆ. ನಾನು ಸುಮಾರು ೫–೬ ವರ್ಷಗಳಿಂದ ಈ ದೇಶದಲ್ಲಿ ಮಹಿಳೆಯರ ಬಗ್ಗೆ ಒಂದು ನಿಲುವನ್ನು ತೆಗೆದುಕೊಂಡಿದ್ದೇನೆ. ಅವರ ಹಕ್ಕುಗಳ ಬಗ್ಗೆ ಪ್ರತಿಪಾದನೆ ಮಾಡುತ್ತಾ ಇದ್ದೇನೆ ಮಹಿಳೆಯರಿಗೂ ಸರಿಸಮಾನವಾಗಿರತಕ್ಕಂಥ ಹಕ್ಕುಗಳು ಇರಬೇಕು, ತಂದೆ ಆಸ್ತಿಯಲ್ಲಿ ಅವರಿಗೆ ಹಕ್ಕು ಇರಬೇಕು ಎಂದು ನಾನು ಪ್ರತಿಪಾದನೆ

ಮಾಡಿದ್ದೇನೆ. ನಾವು ಅವರಿಗೆ ಆ ಹಕ್ಕನ್ನು ಕೊಡದೇ ಇದ್ದುದರಿಂದ ಅವರನ್ನು ನಿರ್ಗತಿಕರನ್ನಾಗಿ ಮಾಡಿದ್ದೇವೆ. ಡೌರಿ ಡೆತ್ ಬಗ್ಗೆ ಅನುಕೂಲಗಳನ್ನು ಮಾಡಿದ್ದೇವೆ, ಅವಕಾಶಗಳನ್ನು ಕಲ್ಪಿಸಿ ಕೊಟ್ಟಿದ್ದೇವೆ. ಮತ್ತೆ ಅವರಿಗೆ ಏನೇನು ಅನಾನುಕೂಲತೆಗಳಿವೆ ಅವೆಲ್ಲಕ್ಕೂ ಅವಕಾಶವಾಗುತ್ತಿದೆ. ಆದುದರಿಂದ ಯಾರಿಗೆ ಆಸ್ತಿ ಇಲ್ಲ ಅವರಿಗೆ ಸ್ವಾತಂತ್ರ್ಯ ಇರುವುದೇ ಇಲ್ಲ. ಯಾರಿಗೆ ಆಸ್ತಿ ಇರುತ್ತದೆ ಅವರಿಗೆ ಸ್ವಾತಂತ್ರ್ಯ ಇರುತ್ತದೆ. ಆದುದರಿಂದ ಹೆಣ್ಣುಮಕ್ಕಳಿಗೆ ಸ್ವಾತಂತ್ರ್ಯ ಬರಬೇಕಾದರೆ ಅವರಿಗೆ ಆಸ್ತಿ ಕಲ್ಪನೆ ಮಾಡತಕ್ಕಂಥ ವ್ಯವಸ್ಥೆ ಈ ಸರ್ಕಾರದಲ್ಲಿ ಅಲ್ಲ; ಈ ದೇಶದಲ್ಲಿ ಆಗಲೇಬೇಕು ಇವತ್ತಲ್ಲ ನಾಳೆ. ಇವತ್ತಿನ ದಿವಸ ಏನಾಗಿದೆ ಎಂದರೆ, ಹೆಣ್ಣುಮಕ್ಕಳು ಬಹಳ ಜನ ಮದುವೆಯಾಗುತ್ತಾ ಇಲ್ಲ. ಕಾರಣ, ಗಂಡುಗಳು ಸಿಕ್ಕುತ್ತಾ ಇಲ್ಲ. ಗಂಡುಗಳು ಏಕೆ ಸಿಕ್ಕುತ್ತಾ ಇಲ್ಲ ಅಂದರೆ ಗಂಡುಗಳಿಗೆ ಕೆಲಸ ಸಿಕ್ಕುತ್ತಾ ಇಲ್ಲ ಈಗ ಗಂಡುಗಳು ಏನು ಹೇಳುತ್ತಾ ಇದ್ದಾರೆ, ಅಂದರೆ ಕೆಲಸದಲ್ಲಿರತಕ್ಕಂಥ ಹೆಣ್ಣು ಮಕ್ಕಳು ಇದ್ದರೆ ನಾವು ಮದುವೆಯಾಗುತ್ತೇವೆ ಇಲ್ಲದೇ ಹೋದರೆ ಮದುವೆಯಾಗುವುದಿಲ್ಲ ಎನ್ನುವ ವಾದ ಇದೆ. ಈಗ ಈ ಹೊಸ ವಾದ ಬಂದಿದೆ. ಯಾರು ಸರ್ಕಾರಿ ನೌಕರಿಯಲ್ಲಿ ಹೆಣ್ಣುಮಕ್ಕಳು ಇರುತ್ತಾರೋ, ಅಂತಹವರನ್ನು ಮದುವೆಯಾಗುತ್ತೇವೆಂದು ಹೇಳುತ್ತಾರೆ. ಇದಕ್ಕೆ ಆಸ್ತಿಯೇ ಕಾರಣ ತಿಂಗಳಿಗೆ ವರ್ಷಕ್ಕೆ ಇಂತಿಷ್ಟು ಆದಾಯ ಇರಬೇಕಾಗುತ್ತದೆ. ಆಗ ಗಂಡಸರು ಹೆಂಗಸರ ಆಶ್ರಯಕ್ಕೆ ಬರುತ್ತಾರೆ. ಆಸ್ತಿ ಇಲ್ಲದೆ ಇರುವುದರಿಂದ ಹೆಂಗಸರು ಗಂಡಸರ ಆಶ್ರಯದಲ್ಲಿದ್ದಾರೆ. ಮಾನ್ಯ ಹೆಗಡೆಯವರು ಒಂದೆರಡು ವರ್ಷಗಳ ಹಿಂದೆ ಈ ಸಭೆಯಲ್ಲಿ ಮಾತನಾಡುತ್ತಾ, ತಂದೆಯ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೂ ಹಕ್ಕುಗಳು ಸಿಗುವಂತ ಬಿಲ್ ತರುತ್ತೇವೆಂದು ಆ ಬಗ್ಗೆ ಶಾಸನ ಮಾಡುವ ಅಗತ್ಯವಿದೆಯೆಂದು ಹೇಳಿದರು. ಲಕ್ಷ್ಮೀಸಾಗರ್ ಅವರು ಕೂಡ ಈ ವಿಚಾರದಲ್ಲಿ ಯೋಜನೆ ಮಾಡುತ್ತಿದ್ದೇವೆಂದು ಹೇಳಿದರು. ಆ ಕೆಲಸವನ್ನು ಶೀಘ್ರವಾಗಿ ಮಾಡಿ. ಯಾವುದೇ ಒಂದು ಕೆಲಸವನ್ನು ಮಾಡಬೇಕಾದರೂ ಬುನಾದಿಯಿಂದ ಯೋಚನೆ ಮಾಡಬೇಕಾಗುತ್ತದೆ. ಮೇಲ್‌ನೋಟದಲ್ಲಿ ನೋಡಿ ಮಾಡುವುದು ಸರಿಯಲ್ಲ. ಇಲಾಖೆ ನಡೆಸುತ್ತಿದ್ದೇವೆ ಎಷ್ಟೋ ಹಣ ಬರುತ್ತದೆ. ಎಷ್ಟೋ ಹಣ ಖರ್ಚು ಮಾಡುತ್ತೇವೆ. ಅಧಿಕಾರಿಗಳು ಇದ್ದಾರೆ. ಸಂತುಷ್ಟವಾಗಿ ಇದ್ದಾರೆಂದು ಯೋಚನೆ ಮಾಡಬಾರದು. ಇವತ್ತು ಇಂಡಿಯಾ ದೇಶದಲ್ಲಿ ಎನ್.ಟಿ. ರಾಮರಾವ್ ಅವರು ಇದರ ಬಗ್ಗೆ ಹೆಜ್ಜೆ ಇಟ್ಟಿದ್ದಾರೆ. ತಾವೂ ಕೂಡ ಹೆಜ್ಜೆ ಇಟ್ಟಿದ್ದೀರಿ. ಕಾಂಗ್ರೆಸ್‌ನವರಾದ ನಾವು ತಮಗೆ ಶಹಭಾಶ್‌ಗಿರಿಯನ್ನು ಕೊಡುತ್ತೇವೆ.

ಬಾಲವಿಕಾಸ ಯೋಜನೆಯಲ್ಲಿ ಬರತಕ್ಕ ಯೋಜನೆಗಳು ಕಂತು ಕಂತಾಗಿ ಮಂಜೂರಾಗಿ ಬರುತ್ತಿವೆ ಒಂದು ವರ್ಷದಲ್ಲಿ ೧೦–೧೨ ತಾಲ್ಲೂಕುಗಳನ್ನು ಮಾತ್ರ ಆಯ್ಕೆ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಒಟ್ಟು ೧೭೫ ತಾಲ್ಲೂಕುಗಳು ಇದ್ದು ಇವುಗಳೆಲ್ಲಾ ಮುಗಿಯಬೇಕಾದರೆ, ಎಲ್ಲಾ ತಾಲ್ಲೂಕುಗಳಿಗೆ ಈ ಯೋಜನೆಯನ್ನು ವಿಸ್ತರಿಸಬೇಕಾದರೆ, ಬಹಳ ವರ್ಷಗಳು ಬೇಕಾಗುತ್ತದೆ. ಆದ್ದರಿಂದ ವರ್ಷಕ್ಕೆ ೨೫–೩೦ ತಾಲ್ಲೂಕುಗಳನ್ನು ಬಾಲವಿಕಾಸ ಯೋಜನೆಯಲ್ಲಿ ಬರುವಂತೆ ಮಾಡಬೇಕೆಂದು ಹೇಳುತ್ತೇನೆ. ಬೆಂಗಳೂರು ಉತ್ತರ ತಾಲ್ಲೂಕನ್ನು ಸೇರಿಸಬೇಕೆಂದು ಹೇಳಿದ್ದೆ, ಆದರೆ ನಮ್ಮ ತಾಲ್ಲೂಕು ಸೇರಿಸಿಲ್ಲ. ದಯಮಾಡಿ ಅದನ್ನು ಸೇರಿಸಿ. ಬಾಲ ವಿಕಾಸ ಯೋಜನೆಯನ್ನು ಈ ದೇಶದಲ್ಲಿ ಯಾವರೀತಿ ಮಾಡಿದ್ದಾರೆಂದರೆ, ನಾನು ಮೊನ್ನೆ ಪ್ಲಾನಿಂಗ್ ವಿಚಾರದಲ್ಲಿ ಮಾತನಾಡುತ್ತಾ ಹೇಳಿದ್ದೆ. ಯಾವುದೇ ಕಾರ್ಯಕ್ರಮವನ್ನು ಮಾಡಿದರೂ, ಸುಖ ವಸತಿಯಲ್ಲಿ ಜೀವನ ಮಾಡತಕ್ಕ ಮಕ್ಕಳ ಅನುಕೂಲಕ್ಕಾಗಿ ಮಾಡುತ್ತಾರೆಂದು ಹೇಳಿದೆ. ಇಂದು ಬಾಲಭವನಗಳನ್ನು ಮಾಡುತ್ತಿದ್ದಾರೆ, ಅವುಗಳ ಉದ್ದೇಶ ಏನು ? ಮಕ್ಕಳಲ್ಲಿರತಕ್ಕ ಅವರಲ್ಲಿ ಹುದುಗಿರತಕ್ಕ ಶಕ್ತಿಯನ್ನು ಕಂಡು ಹಿಡಿದು, ಮಕ್ಕಳನ್ನು ಯಾವ ದಾರಿಯಲ್ಲಿ ಕೊಂಡೊಯ್ಯಬೇಕೆಂಬ ಬಗ್ಗೆ ಪ್ರಯೋಗ ನಡೆಸಿದರೆ ಒಳ್ಳೆಯದಾಗುತ್ತದೆ. ಅದನ್ನು ಬಿಟ್ಟು ಯಾರೋ ಮಕ್ಕಳನ್ನು ಹಿಡಿದುಕೊಂಡು ಬಂದು, ನೃತ್ಯ ಮಾಡಿಸುವುದು, ಚಿತ್ರಕಲೆ ಮಾಡಿಸುವುದು, ಇವುಗಳಿಂದ ಕೆಲವೇ ವರ್ಗದ ಮಕ್ಕಳಿಗೆ ಅನುಕೂಲವಾಗುತ್ತದೆಯೇ ಹೊರತು, ಸಾರ್ವತ್ರಿಕವಾಗಿ ಎಲ್ಲ ಮಕ್ಕಳಿಗೂ ಅನುಕೂಲವಾಗುವುದಿಲ್ಲ. ಅದಕ್ಕೆ ಬದಲು ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಕೊಟ್ಟು, ಅವರಲ್ಲಿ ಹುದುಗಿರತಕ್ಕ ಶಕ್ತಿಯನ್ನು ಬೆಳೆಸಲಿಕ್ಕೆ ಅವಕಾಶ ಮಾಡಿಕೊಡಬೇಕು. ಇದಕ್ಕೆ ವಿಶೇಷವಾಗಿ ತರಬೇತಿ ಪಡೆದಂಥ ಅಧಿಕಾರಿಗಳನ್ನು ನೇಮಿಸಬೇಕು. ಮಹಿಳಾ ಇಲಾಖೆ, ಮಕ್ಕಳ ಇಲಾಖೆ ಎಂದು ಬೇರೆ ಬೇರೆ ಇದೆ. ಲಕ್ಷಾಂತರ ರೂಪಾಯಿಗಳನ್ನು ಈ ಒಂದು ವರ್ಗದವರಿಗೆ ಖರ್ಚು ಮಾಡುತ್ತಿರುವಾಗ ತರಬೇತಿಯನ್ನು ಪಡೆದವರನ್ನು ಇಡದೇ ಹೋದರೆ, ಮಕ್ಕಳ ಬಗ್ಗೆ ಅಭಿಮಾನ ಇರತಕ್ಕವರನ್ನು ಇಡದೇ ಹೋದರೆ ಕೊಡತಕ್ಕ ಹಣವನ್ನು ಕೈಗೆ

ಸಿಕ್ಕಿದಷ್ಟು ದೋಚಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಈ ಇಲಾಖೆಯಲ್ಲಿ ನಡೆಯುತಕ್ಕ ದುರ್ವ್ಯವಹಾರಗಳನ್ನು ಬಹಳ ಕೇಳಿದ್ದೇನೆ. ನಾನು ವಿವರವಾಗಿ ಹೋಗುವುದಿಲ್ಲ. ಯಾರು ಸ್ವಾರ್ಥಿಗಳು ಇದ್ದಾರೆ ಅಂತವರ ಬಗ್ಗೆ ಬಹಳ ಎಚ್ಚರಿಕೆಯಿಂದ ಇರಬೇಕು.

ನಿಮ್ನ ವರ್ಗದವರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ೫೫.೯೫ ಭಾಗ ನಿಮ್ನ ವರ್ಗದವರು ಇದ್ದಾರೆ. ಈ ಇಲಾಖೆಯಲ್ಲಿ (ಸಿ) ವರ್ಗದ ಹುದ್ದೆಗಳು ೬೪೫ ಇವೆ. ಡಿ–ವರ್ಗದ ಹುದ್ದೆಗಳು ೪೬೯ ಇವೆ. ಒಟ್ಟು ೧೧೧೪ ಖಾಲಿ ಹುದ್ದೆಗಳು ಇದ್ದರೂ ಇನ್ನೂ ಭರ್ತಿ ಮಾಡಿಲ್ಲ. ದಿನಗೂಲಿ ಕೆಲಸಗಾರರನ್ನು ನೇಮಕ ಮಾಡಿಕೊಂಡು ವ್ಯವಹಾರ ಮಾಡುತ್ತಿದ್ದಾರೆ. ವಿಶೇಷವಾದ ಕಾರ್ಯಕ್ರಮಗಳನ್ನು ಇವರ ಮೂಲಕ ಯಾವ ರೀತಿ ಮಾಡುತ್ತೀರಿ ? ದಯಮಾಡಿ ಇದಕ್ಕೆ ಗಮನ ಕೊಟ್ಟು ಖಾಯಂ ಆಗಿ ನೇಮಿಸತಕ್ಕ ವ್ಯವಸ್ಥೆ ಮಾಡಿ. ತಾವು ವಿದ್ಯಾರ್ಥಿಗಳ ಬಗ್ಗೆ ಒಂದು ಮಾತು ಹೇಳಿದಿರಿ. ಅದರ ಬಗ್ಗೆ ನಾನು ಹಲವಾರು ಸಾರಿ ಹೇಳಿದ್ದೇನೆ. ಈಗ ಏನಾಗಿದೆ, ದಿನೇ ದಿನೇ ಆಹಾರ ಪದಾರ್ಥಗಳ ಬೆಲೆಗಳು ಜಾಸ್ತಿಯಾಗುತ್ತಾ ಹೋಗುತ್ತಿವೆ. ಒಬ್ಬನಿಗೆ ಒಂದು ದಿವಸಕ್ಕೆ ಹತ್ತು ರೂಪಾಯಿನಿಂದ ಮೈನ್‌ಟೈನ್ ಮಾಡಲಿಕ್ಕೆ ಆಗುವುದಿಲ್ಲ. ಇವೊತ್ತು ಮೆಣಸಿನಕಾಯಿ ಕೆ.ಜಿ. ನಲವತ್ತು ರೂಪಾಯಿ ಆಗಿದೆ ಅದೇ ಹುಣಸೇಹಣ್ಣು ಕೆ.ಜಿ.ಗೆ ೨೦ ರಿಂದ ೨೫ ರೂಪಾಯಿವರೆಗೆ ಆಗಿದೆ. ಈ ರೀತಿ ಆಹಾರ ಪದಾರ್ಥಗಳು ಅಂದರೆ ಅಕ್ಕಿ ಇತರ ಪದಾರ್ಥಗಳು ಬಹಳ ಇವೆ. ನಾನು ಸಹ ಒಂದು ಹಾಸ್ಟಲ್ ಧಾರವಾಡದಲ್ಲಿ ನಡೆಸುತ್ತಿದ್ದೇನೆ. ಅದರಲ್ಲಿ ಒಂದು ಲಕ್ಷದ ಐದು ಸಾವಿರ ರೂಪಾಯಿ ಕೊರತೆ ಬಂದಿದೆ. ಆದ್ದರಿಂದ, ತಾವು ಬಹಳ ದಿವಸಗಳ ಹಿಂದೆ ನಿಗದಿ ಮಾಡಿರತಕ್ಕ ಹಣ ಏನಿದೆ ಅದನ್ನು ತಾವು ಜಾಸ್ತಿ ಮಾಡಬೇಕು. ಇವೊತ್ತು ಕಾಲೇಜು ವಿದ್ಯಾರ್ಥಿಗಳಿಗೆ ಅವರ ಸ್ಕಾಲರ್‌ಶಿಪ್ ಜೊತೆಗೆ ಸೇರಿಸಿಕೊಂಡು ಮುನ್ನೂರು ರೂಪಾಯಿಯಷ್ಟು ಕೊಡಬೇಕಾಗುತ್ತದೆ. ಈಗ ಹೈಸ್ಕೂಲು ವಿದ್ಯಾರ್ಥಿಗಳಿಗೆ ಒಂದು ನೂರು ರೂಪಾಯಿ ಕೊಡುತ್ತಿದ್ದೀರಿ. ಈಗ ಸದ್ಯಕ್ಕೆ ೧೫೦ ರೂಪಾಯಿ ಮಾಡಿದರೆ ಅಷ್ಟಕ್ಕಾದರೂ ಮೈನ್‌ಟೈನ್ ಮಾಡಲಿಕ್ಕೆ ಆಗುತ್ತದೆಯೇ ವಿನಹ ಬೇರೆಯವರಿಗೆ ವಾಲಂಟರಿ ಆರ್ಗನೇಸೇಷನ್‌ಗೆ, ನೀವು ಹಾಗೆ ಮಾಡಿ, ಹೀಗೆ ಮಾಡಿ, ಈ ತರಹ ಹಾಸ್ಟಲ್ ನಡೆಸಿ ಎಂದು ನೀವೇನಾದರೂ ಹೇಳಲಿಕ್ಕೆ ಹೋದರೆ ಅದು ಸಾಧ್ಯವಿಲ್ಲದ ಮಾತು. ಅಧ್ಯಕ್ಷರೆ ಈಗ ಏನಾಗಿದೆ ೧೫೦ ರೂಪಾಯಿ ಕೊಡುತ್ತಿದ್ದಾರೆ. ಕೇಂದ್ರ ಸರ್ಕಾರ ೮೦ ಅಥವಾ ೮೫ ರೂಪಾಯಿ ಸ್ಕಾಲರ್‌ಶಿಪ್ ಕೊಡುತ್ತಿದ್ದಾರೆ. ಅದರಲ್ಲಿ ಉಳಿದಂಥ ಈ ಹಣ ಸರ್ಕಾರ ಕೊಡುತ್ತದೆ ಎಂದು ಹೇಳುತ್ತಿದ್ದಾರೆ. ತಾವು ದಯಮಾಡಿ ಕೇಂದ್ರ ಸರ್ಕಾರದ ನೆರವನ್ನು ಕಾಯಬೇಡಿ. ಅವರು ಸ್ಕಾಲರ್‌ಶಿಪ್ ಎಷ್ಟು ಕೊಡುತ್ತಾರೆ ಅಷ್ಟನ್ನು ಕೊಡಲಿ ನಾವು ಬೇಕಾದರೆ ಸ್ಕಾಲರ್‌ಶಿಪ್ ಜಾಸ್ತಿ ಮಾಡಲಿಕ್ಕೆ ಕೇಳಿಕೊಳ್ಳಿ, ಅವರು ಮಾಡಿದರೆ ಸರಿ ಇಲ್ಲದೇ ಹೋದರೆ ಅವರು ಎಷ್ಟು ಸ್ಕಾಲರ್‌ಶಿಪ್ ಹಣ ಕೊಡುತ್ತಾರೆ ಅಷ್ಟು ಕೊಡಲಿ, ಇನ್ನುಳಿದ ಹಣ ೨೨೦ ಅಥವಾ ೨೨೫ ರೂಪಾಯಿ ನಮ್ಮ ಸರ್ಕಾರ ಕೊಟ್ಟು ಪ್ರತಿಯೊಬ್ಬ ವಿದ್ಯಾರ್ಥಿಗೂ ೩೦೦ ರೂಪಾಯಿ ತರಹ ಹಣ ಕೊಡುವ ವ್ಯವಸ್ಥೆಯನ್ನು ಮಾಡಿದರೆ ದೊಡ್ಡ ಉಪಕಾರ ಮಾಡಿದಂತಾಗುತ್ತದೆಂದು ಹೇಳುತ್ತೇನೆ. ಇನ್ನು ನಾಗರೀಕ ಹಕ್ಕುಗಳ ಸಂರಕ್ಷಣ ಘಟಕ ಎಂದು ತಾವು ನಡೆಸುತ್ತಿದ್ದೀರಿ. ಇದರ ಬಗ್ಗೆ ಪದೇ ಪದೇ ನಾವು ಹೇಳುತ್ತಾ ಬಂದಿದ್ದೇನೆ. ೧೯೮೬–೮೭ನೇ ಇಸವಿಯಲ್ಲಿ ೮೧೭ ಸಂಖ್ಯೆ ಇದ್ದರೆ, ೧೯೮೭–೮೮ರಲ್ಲಿ ೬೭೯ಕ್ಕೆ ಬಂದಿದೆ. ಅಂದರೆ ಒಟ್ಟು ೧೫೦೦ ರಷ್ಟು ಆಗುತ್ತದೆ. ಈ ತರಹ ಒಂದು ಸುಳ್ಳು ಜಾತಿ ಸರ್ಟಿಫಿಕೇಟ್ ತೆಗೆದುಕೊಂಡು ಸರ್ಕಾರಿ ನೌಕರಿಯಲ್ಲಿ ಮತ್ತೆ ಬೇರೆ ಬೇರೆ ಫ್ಯಾಕ್ಟರಿಗಳಲ್ಲಿ ಸೇರಲಿಕ್ಕೆ ಮತ್ತೆ ಬ್ಯಾಂಕುಗಳಲ್ಲಿ ಸೇರಲಿಕ್ಕೆ ಅನುಕೂಲವಾಗುತ್ತದೆ. ಈಗ ತಾವು ಕಡ್ಡಾಯವಾಗಿ ೧೯೮೪ನೇ ಇಸವಿಯಲ್ಲಿ ಏನು ಒಂದು ತಡೆ ಆಜ್ಞೆ ಕೊಟ್ಟಿದ್ದೀರಿ ಅಲ್ಲಿಗೆ ಕಟ್ ಆಫ್ ದಿ ಇಯರ್ ಎಂದು ಮಾಡಿ. ಇವೊತ್ತು ಸರ್ಕಾರದ ಅಭಿಪ್ರಾಯವನ್ನು ತಿಳಿದು ತಿಳಿದು ಸುಳ್ಳು ಜಾತಿ ಸರ್ಟಿಫಿಕೇಟ್ ತೆಗೆದುಕೊಂಡು ಸರ್ಕಾರಿ ನೌಕರಿಯಲ್ಲಿ ಸೇರತಕ್ಕವರಿಗೆ ನೀವು ಕಠಿಣವಾಗಿ ವರ್ತನೆ ಮಾಡದೇ ಹೋದರೆ, ಯಾರಿಗೋಸ್ಕರ ಈ ಒಂದು ಕಾರ್ಯಕ್ರಮ ಇದೆ. ಯಾರಿಗೋಸ್ಕರ ಈ ರಾಜ್ಯಾಂಗದಲ್ಲಿ ಇಂತಹ ಸವಲತ್ತುಗಳು ಇದೆ ಅಂತಹವರಿಗೆ ನೀವು ಹೇಗೆ ಸಹಾಯ ಮಾಡಿದಂತಾಗುತ್ತದೆ. ಯಾರು ಬಲವಂತರು ಇದ್ದಾರೆ, ಯಾರು ಸುಳ್ಳು, ಸುಳ್ಳು ಜಾತಿ ಸರ್ಟಿಫಿಕೇಟ್ ತೆಗೆದುಕೊಳ್ಳುವಂತಹವರು ಇದ್ದಾರೆ, ಅಂತಹವರಿಗ ಪ್ರೋತ್ಸಾಹವನ್ನು ಕೊಟ್ಟ ಹಾಗೆ ಆಗುತ್ತದೆ. ಇವೊತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾಲೇರು ಎಂದು ಇದ್ದಾರೆ, ಮತ್ತೆ ಮಲೇರು ಎಂದು ಇದ್ದಾರೆ, ಎಲ್ಲಾ ಒಂದೇ ಸ್ಪೆಲಿಂಗ್ ಇಂಗ್ಲಿಷ್‌ನಲ್ಲಿ ಆದರೆ ಅದರಲ್ಲಿ ಒಬ್ಬರು ಬ್ರಾಹ್ಮಣರು ಆಗುತ್ತಾರೆ, ಒಬ್ಬರು ಹರಿಜನರು ಆಗುತ್ತಾರೆ. ಇದರಿಂದಾಗಿ

ಬ್ರಾಹ್ಮಣರು ಬಹಳ ಜನ ಸರ್ಕಾರಿ ನೌಕರಿಯಲ್ಲಿ ಸೇರಿದ್ದಾರೆ. ನಮ್ಮ ಹೈಕೋರ್ಟಿನವರು ಅದರ ವಿರುದ್ಧವಾಗಿ ತೀರ್ಪು ಕೊಟ್ಟಿದ್ದಾರೆ. ಆ ವಿಚಾರದಲ್ಲಿ ಸುಪ್ರೀಮ್ ಕೋರ್ಟಿಗೆ ಹೋಗಿ ತಡೆ ಆಜ್ಞೆ ತಂದು ಇವೊತ್ತಿನ ದಿವಸ ಕೆಲಸಕ್ಕೆ ಸೇರುತ್ತಿದ್ದಾರೆ.

ದಯವಿಟ್ಟು ಇಂಥ ಅವಿವೇಕದ, ಅಧರ್ಮದ ಕೆಲಸಗಳನ್ನು ನೀವು ಒಂದಲ್ಲೊಂದು ರೀತಿಯಲ್ಲಿ ನಿಲ್ಲಿಸಬೇಕು, ತಡೆಹಿಡಿಯಬೇಕು. ಇದರ ಬಗ್ಗೆ ತಾವು ಹೆಚ್ಚಿನ ಗಮನ ಕೊಡಬೇಕು. ರಾಜಕೀಯ ದೃಷ್ಟಿಯಿಂದ ನೀವು ದಾಕ್ಷಿಣ್ಯಕ್ಕೆ ಒಳಗಾದರೆ ನೀವು ನಿಮ್ಮ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲ. ಹಿಂದೆ ಒಬ್ಬರು ಮಂತ್ರಿಗಳಿದ್ದರು. ಅವರು ತಮ್ಮ ಮಂತ್ರಿ ಪದವಿಯಲ್ಲಿ ಸಾಧನೆ ಮಾಡಿದ್ದು ಏನೆಂದರೆ ಕುರುಬ ಎನ್ನತಕ್ಕ ಜಾತಿಯನ್ನು ಟ್ರೈಬ್ ಎಂದು ಮಾಡಿ ಜೇನು ಕುರುಬ, ಕಾಡು ಕುರುಬ ಎಂದು ಮಾಡಿ ಹಿಂದೆ ಸುಮಾರು ೨/೨½ ಲಕ್ಷ ಜನ ಇದ್ದಂಥ ಟ್ರೈಬ್‌ನ್ನು ಇವತ್ತು ಸುಮಾರು ೧೫ ಲಕ್ಷ ಎಂದು ಸಾರುತ್ತಿದ್ದಾರೆ. ಅದನ್ನು ಪ್ರಿಂಟ್ ಮಾಡಿ ಮಾಡಿ ಹಂಚುತ್ತಿದ್ದಾರೆ. ಇದಕ್ಕೆ ರಾಜಕೀಯವಾಗಿ ಸವಲತ್ತುಗಳನ್ನು ಕೊಡತಕ್ಕದ್ದು ಬೇರೆ ವಿಚಾರ. ಆದರೆ ಈ ರೀತಿ ಸ್ವಾರ್ಥಕ್ಕೆ ಉಪಯೋಗ ಮಾಡಿಕೊಳ್ಳಬಾರದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನೀವು ಗಟ್ಟಿ ಮನಸ್ಸನ್ನು ಮಾಡುತ್ತಿಲ್ಲ. ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಬಹಳ ಮೃದು ಸ್ವಭಾವದವರಾಗಿದ್ದಾರೆ. ಇಲ್ಲಿ ಬಂದರೆ ಇಲ್ಲೇ ಮಾಲಗುತ್ತಾರೆ, ಇನ್ನೆಲ್ಲಾದರೂ ಹೋದರೆ ಅಲ್ಲೇ ಮಾಲಗುತ್ತಾರೆ. ಯಾರಾದರೂ ಏನಾದರೂ ಸಲಹೆಯನ್ನು ಕೊಟ್ಟರೆ ಅವರು ಹೇಳಿದಂತೆಯೇ ನಡೆದುಕೊಳ್ಳುತ್ತಾರೆ. ಇವರು ಹಾಗೆ ಮಾಡಬಾರದು. ಯಾರ್‍ಯಾರು ಯಾವ ಯಾವ ರೀತಿ ಹೇಳುತ್ತಾರೆ ಅದರಂತೆಲ್ಲಾ ನಡೆದುಕೊಳ್ಳುತ್ತಾರೆ. ಇದು ಸರಿಯಲ್ಲ. ಒಬ್ಬೊಬ್ಬರೂ ಹೇಳಿದಂತೆ ಇವರು ನಟಿಸಬಾರದೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನು ನಿಮ್ಮ ವರ್ಗದವರಿಗೆ ವಿಶೇಷ ಘಟಕ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ಬಹಳ ಹಣ ಬರುತ್ತದೆ. ಸುಮಾರು ೯೯ ಕೋಟಿ ರೂಪಾಯಿ ಬರುತ್ತದೆ. ಇದು ಹಲವಾರು ಕ್ಷೇತ್ರಗಳಲ್ಲಿ ಖರ್ಚು ಮಾಡುವ ಸಲುವಾಗಿ...

ಶ್ರೀ ಜಿ. ಬಸವಣ್ಣಪ್ಪ.— ರಾಜ್ಯ ಸರ್ಕಾರ ಈ ವಿಶೇಷ ಘಟಕ ಯೋಜನೆಗಳಿಗೆ ೯೦ ಪರ್ಸೆಂಟ್ ಖರ್ಚು ಮಾಡಿದರೆ ಕೇಂದ್ರ ಸರ್ಕಾರದವರು ೧೦ ಪರ್ಸೆಂಟ್ ಹಣವನ್ನು ಕೊಡುತ್ತಾರೆ. ಇದನ್ನು ಸ್ಪೆಷಲ್ ಸೆಂಟ್ರಲ್ ಅಸಿಸ್ಟೆನ್ಸ್ ಎಂದು ಕೊಡುತ್ತಾರೆ. ಇದನ್ನು ಆಮೇಲೆ ನಾನು ಹೇಳುತ್ತೇನೆ...

ಶ್ರೀ ಬಿ. ಬಸವಲಿಂಗಪ್ಪ — ತಾವು ಆಮೇಲೆ ಹೇಳಿ. ೯೯ ಕೋಟಿ ರೂಪಾಯಿಗಳನ್ನು ಎಲ್ಲ ಕ್ಷೇತ್ರಗಳಲ್ಲೂ ಹಂಚುವುದಕ್ಕಾಗಿ ಕೊಟ್ಟಿದ್ದಾರೆ. ಇದು ಕೇಂದ್ರದ ಒಂದು ಕಾರ್ಯಕ್ರಮ. ಈಗ ಜಿಲ್ಲಾ ಪರಿಷತ್ತುಗಳಾಗಿವೆ. ಇವರು ಮಾರ್ಚಿ ತಿಂಗಳವರೆಗೂ ಈ ಹಣವನ್ನು ಉಪಯೋಗ ಮಾಡಿಕೊಂಡು ಮಾರ್ಚಿಯಲ್ಲಿ ಹಣವನ್ನು ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇದು ನಮ್ಮ ಅರ್ಬನ್ ಡಿಸ್ಟ್ರಿಕ್ಟನ್ನು ಬಿಟ್ಟರೆ ಬೇರೆ ಜಿಲ್ಲೆಗಳಲ್ಲಿ ಖರ್ಚು ಮಾಡುವುದಕ್ಕೆ ತಾವು ಹಣವನ್ನೇ ಕೊಟ್ಟಿಲ್ಲ. ಈ ಹಣ ನಿಮಗೆ ಕೇಂದ್ರದಿಂದ ಯಾವಾಗ ಬರುತ್ತದೆಂದರೆ ಪ್ರತಿವರ್ಷ ಮೇ ತಿಂಗಳಲ್ಲಿ ಬರುತ್ತದೆ. ಮೇ ತಿಂಗಳಿಂದ ಮಾರ್ಚಿ ತಿಂಗಳವರೆಗೂ ಈ ಹಣವನ್ನು ತಾವು ಸರ್ಕಾರವನ್ನು ನಡೆಸುವುದಕ್ಕೆ ಉಪಯೋಗ ಮಾಡಿಕೊಂಡು ನಿಜವಾಗಿ ಯಾವ ಜನರಿಗೆ ನೀವು ಅನುಕೂಲವನ್ನು ಮಾಡಿಕೊಡಬೇಕೋ ಆ ಜನರಿಗೆ ಹಣವನ್ನು ಖರ್ಚು ಮಾಡದೇ ಹೋದರೆ ಯಾವ ಪುರುಷಾರ್ಥವನ್ನು ಸಾಧನೆ ಮಾಡುವುದಕ್ಕೆ ನೀವು ಈ ಮಂತ್ರಿ ಕೆಲಸವನ್ನು ಮಾಡುತ್ತೀರಿ ? ನೀವು ಏತಕ್ಕೆ ಈ ಬೂಟಾಟಿಕೆ ಜೀವನ ಮಾಡುತ್ತೀರಿ? ನೀವು ಏನು ಹೇಳುತ್ತಿದ್ದೀರಿ ಇದು ಸರಿಯಲ್ಲ...

SRI G. BASAVANNEPPA.— Please do not pass such remarks. I have done effctively to implement the special component plan and I have instructed the Z. P. chief secretary in this behalf. He is solely responsible and answerable. ಚೀಫ್ ಸೆಕ್ರೆಟರಿ (ಜಿಲ್ಲಾ ಪರಿಷತ್ತಿನವರು) ಇದನ್ನು ಇಂಪ್ಲಿಮೆಂಟ್ ಮಾಡದಿದ್ದರೆ ಅವರನ್ನೇ ಸಂಪೂರ್ಣ ಜವಾಬ್ದಾರರನ್ನಾಗಿ ಮಾಡಿದ್ದೇವೆ. ೮೦ ಪರ್ಸೆಂಟ್‌ನಷ್ಟು ಈಗಾಗಲೇ ಇಂಪ್ಲಿಮೆಂಟ್ ಆಗಿದೆ...

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೆ, ಈ ಸಮಾಜ ಕಲ್ಯಾಣ ಇಲಾಖೆ ನಿಜವಾಗಿಯೂ ಕೆಲಸ ಮಾಡಬೇಕು, ಈ ಸಮಾಜ ಉದ್ಧಾರವಾಗಬೇಕು. ಮಂದಗತಿಯಿಂದ ಹೋಗುತ್ತಿದೆಯೆಂದು ಅವರು ಹೇಳುತ್ತಿದ್ದಾರೆ. ಮಾನ್ಯ ಬಸವಲಿಂಗಪ್ಪನವರು ಸಮಾಧಾನದಿಂದ ಕುಳಿತುಕೊಳ್ಳಬೇಕೆಂದು ಅವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೆ, ಮಾನ್ಯ ಲಕ್ಷ್ಮೀಸಾಗರ್‌ರವರು ನನಗೆ ಒಳ್ಳೆಯ ಸರ್ಟಿಫಿಕೇಟನ್ನು ಕೊಟ್ಟಿದ್ದಾರೆ. ಅವರನ್ನು ನಾನು ಕಾಂಪ್ಲಿಮೆಂಟ್ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಅಧ್ಯಕ್ಷರೆ. ನಾನು ಅವರಿಗೆ ಸರ್ಟಿಫಿಕೇಟನ್ನು ಕೊಡುವುದಕ್ಕಾಗುತ್ತದೆಯೆ ? ಅವರು ಸ್ವಯಂ ನಿರ್ಣಯ ಮಾಡತಕ್ಕವರು, ನಮಗೆ ಒಳ್ಳೆಯದನ್ನೇ ಹೇಳಿದ್ದಾರೆ.

ಶ್ರೀ ಬಿ ಬಸವಲಿಂಗಪ್ಪ — ಮೊನ್ನೆ ಜಿಲ್ಲಾ ಪರಿಷತ್ತಿಗೆ ಚುನಾವಣೆಯಾದಾಗ ಅದರಲ್ಲಿ ಸದಸ್ಯರು ಏನು ಆಯ್ಕೆಯಾಗಿ ಬಂದಿದ್ದಾರೆ ಅವರಲ್ಲಿ ಈ ಜಾತಿಯ ವಿರುದ್ಧ ಅಥವಾ ಪರ ಇದ್ದೇ ಇರುತ್ತಾರೆ. prejudce and hatred, both these feelings they carry. ಇದು ಕೇವಲ ಬಡವರಿಗೇ ಆಗತಕ್ಕದ್ದು, ನಿಮ್ನ ವರ್ಗದವರಿಗೆ ಆಗತಕ್ಕಂಥ ಯೋಜನೆಗಳಿವೆ. ಆದರೆ ಇದನ್ನು ಏತಕ್ಕೆ ಮಾಡಬೇಕು, ಇದನ್ನು ಬೇರೆಯದಕ್ಕೆ ಖರ್ಚು ಮಾಡಿಕೊಳ್ಳಬೇಕೆಂದು ಹೇಳುತ್ತಾರೆ. ಅದೇ ರೀತಿ ಖರ್ಚನ್ನೂ ಮಾಡುತ್ತಾರೆ. ನಾನು ಹೇಳುತ್ತೇನೆ. ಮಾರ್ಚಿಯವರೆಗೂ ಅವರು ಹಣವನ್ನು ಖರ್ಚು ಮಾಡಲಿಲ್ಲ ಎಂದರೆ ಜಿಲ್ಲಾ ಪರಿಷತ್ತಿನ ಚುನಾವಣೆಯಲ್ಲಿ ಗೆದ್ದು ಬಂದಿರತಕ್ಕ ಸದಸ್ಯರು ಏನಿದ್ದಾರೆ ಅವರು ಜಾತಿವಾದವನ್ನು ಬಿಟ್ಟು ನಡವಳಿಕೆಯನ್ನು ಮಾಡಿಲ್ಲ. ಇದು ರಾಜ್ಯದ ಹಿತದೃಷ್ಟಿಯಿಂದ ಕೆಲಸ ಮಾಡುವುದಕ್ಕೆ ಪ್ರವೃತ್ತರಾಗಿಲ್ಲ. ಮಾನ್ಯ ನಜೀರ್‌ಸಾಬ್‌ರವರು ದೊಡ್ಡ ದೊಡ್ಡ ಉದಾತ್ತ ತತ್ವಗಳನ್ನು ಸದನದ ಮುಂದಿಟ್ಟು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ಏನು ಆಕ್ಟ್ ಮಾಡಿದ್ದಾರೆ ಅದರ ಉದ್ದೇಶ ಸಾಧನೆ ಆಗಿಲ್ಲ ಮತ್ತು ಆಗುವುದೂ ಇಲ್ಲ.

ನನ್ನ ಅನುಭವದಲ್ಲಿ ಹೀಗಾಗತಕ್ಕಂಥ ಪ್ರಶ್ನೆ ಬರುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಈಗಾಗಲೇ ನಾವು ಮಾಡಿಕೊಂಡಿದ್ದೇವೆ, ನೀವು ಅನುಭವಿಸಿ ಅಂದಹಾಗೆ ಹಿಂದುಳಿದ ವರ್ಗದವರ ಇಲಾಖೆ ಏನು ಇದೆ ಅದರ ಕೈಯಲ್ಲಿ ಈ ಹಿಂದುಳಿದವರು ಸಿಕ್ಕಿಹಾಕಿಕೊಂಡು ದಿವಾಳಿಯಾಗಿದ್ದಾರೆ ನಾವು ಅಧಿಕಾರಕ್ಕೆ ಬಂದಿದ್ದಾಗ ಮಾನ್ಯ ಹಾವನೂರ್ ಕಮಿಷನ್ ಎಂದು ಒಂದು ಕಮಿಟಿಯನ್ನು ಮಾಡಿದ್ದೆವು ಅವರು ವರದಿಯನ್ನು ಕೊಟ್ಟರು. ಆ ವರದಿಯನ್ನು ಜಾರಿಗೆ ಕೊಟ್ಟೆವು. ಈವತ್ತಿನವರೆಗೂ ಅದು ಜಾರಿಯಲ್ಲಿದೆ. ಜನತಾ ಪಕ್ಷದವರು ಅಧಿಕಾರಕ್ಕೆ ಬಂದಮೇಲೆ ಹಿಂದುಳಿದ ವರ್ಗದವರ ಬೆಂಬಲವನ್ನು ತೆಗೆದುಕೊಳ್ಳಬೇಕೆಂದು ಹಿಂದುಳಿದ ವರ್ಗಗಳ ನಿಯೋಗ ಮಾಡುತ್ತೇವೆಂದು ಒಂದು ಘೋಷಣೆ ಮೊದಲನೇ ವರ್ಷವೇ ಮಾಡಿ ಸ್ವಾಮಿ ವೆಂಕಟಸ್ವಾಮಿ ಎಂದು ಒಬ್ಬರು ರಿಟೈರ್ಡ್ ಆಫೀಸರನ್ನು ಅಪಾಯಿಂಟ್ ಮಾಡಿ ರಚನೆ ಮಾಡಿದರು. ಅವರು ಮೂರು ವರ್ಷ ತೆಗೆದುಕೊಂಡು ರಿಪೋರ್ಟ್ ಕೊಟ್ಟರು. ಅದು ಸರಿ, ಸರಿಯಿಲ್ಲ ಎನ್ನುವುದಕ್ಕೆ ಹೋಗುವುದಿಲ್ಲ. ಆದರೆ ರಿಪೋರ್ಟ್‌ನ್ನು ಕೊಟ್ಟಮೇಲೆ ಅದಕ್ಕೆ ವಿರೋಧ ಮಾಡಬೇಕೆಂದು ಒಂದು ಚಳವಳಿಯನ್ನೇ ಮಾಡಿಸಿದರು. ಅದನ್ನು ಮಾಡಿಸಿದವರು ನೀವು ಎಂದು ಹೇಳುತ್ತೇನೆ. ಅಥವಾ ಸರ್ಕಾರದವರೇ ಮಾಡಿಸಿದರು ಎಂದು ಹೇಳುತ್ತೇನೆ. ಅದನ್ನು ನೀವು ಅಲ್ಲಗಳೆಯಬಹುದು.

ಶ್ರೀ ರಮೇಶ್ ಕುಮಾರ್.— ಮಾನ್ಯ ಅಧ್ಯಕ್ಷರೇ ಮಾನ್ಯ ಧರ್ಮಸಿಂಗ್‌ರವರು ಮಾತನಾಡುತ್ತಾ ಒಂದು ವಿಷಯ ಹೇಳಿದರು. ೧೯೮೦ನೇ ಇಸವಿಯಲ್ಲಿ ಶ್ರೀಮಾನ್ ಗುಂಡೂರಾಯರು ಸರ್ಕಾರ ರಚನೆ ಮಾಡಿದಾಗ ಕೋರ್ಟಿಗೆ ಕ್ವೆಶ್ಚನ್ ಮಾಡಿದಂಥ ಹಾವನೂರ್ ಕಮಿಷನ್ ಬದಲಿಸಿ ಇನ್ನೊಂದು ಕಮಿಷನ್ ತೀರ್ಮಾನ ಮಾಡತಕ್ಕಂಥ ನಿರ್ಣಯವನ್ನು ತೆಗೆದುಕೊಂಡಿತು. ಮತ್ತೆ ವೆಂಕಟಸ್ವಾಮಿ ಕಮಿಷನ್ ರಿಪೋರ್ಟ್ ಕೊಟ್ಟಮೇಲೆ ಚಳುವಳಿ ಮಾಡಿದರು ಎಂದು ಹೇಳುತ್ತಾರೆ. ಅವರು ಯಾವಾಗಲೂ ಕಾಂಟ್ರವರ್ಷಿಯಲ್ ಪರ್ಸನ್. ಯಾವಾಗಲೂ ಕೂಡಾ ವಿವಾದಾತ್ಮಕ ವಿಚಾರಗಳನ್ನು ಪ್ರಸ್ತಾಪ ಮಾಡತಕ್ಕಂಥ ಅಭ್ಯಾಸ ಅವರಲ್ಲಿದೆ. ಆವಾಗ ಆ ಪಕ್ಷದಲ್ಲಿದ್ದಂತವರು ಮಾಡಿದರು. ಈವಾಗ ಈ ಪಕ್ಷದಲ್ಲಿದ್ದಂತವರು ಮಾಡಿದರು ಎಂದು ಇಷ್ಟು ಹೊತ್ತು ಅವರು ಏನು ಈ ಸದನದಲ್ಲಿ ಮಾತನಾಡಿದರೂ ಕೆಲವು ಪ್ರಬಲ ವರ್ಗಗಳಾದ ಮೇಲ್ ಜಾತಿಯವರ ತುಳಿತಕ್ಕೆ ಒಳಗಾದವರನ್ನು ಹೊರಗೆ ಬರಲು ಬಿಡುವುದಿಲ್ಲ, ಅವರನ್ನು ತಮ್ಮ

ಅಧೀನದಲ್ಲಿಯೇ ಇಟ್ಟುಕೊಳ್ಳುತ್ತಾರೆ. ಈ ಅಭಿಲಾಷೆ ಇರತಕ್ಕಂಥವರು ನಿಮ್ಮ ಪಕ್ಷದಲ್ಲಿಯೂ ಇದ್ದಾರೆ, ಈ ಪಕ್ಷದಲ್ಲಿಯೂ ಇದ್ದಾರೆ. ಕ್ಲಾಸ್ ಬೇಸಿಸ್‌ಮೇಲೆ ಪಾರ್ಟೀಸ್‌ಗಳನ್ನು ನಾವು ಮಾಡಿಕೊಂಡಿಲ್ಲ. ನಮ್ಮದು ಕಮ್ಯುನಿಸ್ಟ್ ಪಾರ್ಟಿಯಲ್ಲ, ಮಿಡಲ್‌ಕ್ಲಾಸ್ ಪಾರ್ಟಿ. ನಾವು ಕಾಂಪ್ರಮೈಸಿಂಗ್ ಆ್ಯಟಿಟ್ಯೂಡ್‌ನಲ್ಲಿ ಹೋಗುತ್ತೇವೆ. ಸೆಂಟ್ರಲ್ ಆ್ಯಟಿಟ್ಯೂಡ್ ನಮ್ಮದು. ನಿಮ್ಮ ಪಕ್ಷದಲ್ಲಿದ್ದಂಥವರು ಸೇರಿದರು ಈ ಪಕ್ಷದಲ್ಲಿ ಇದ್ದಂತಹವರು ಸೇರಿದರು. ಇವರೆಲ್ಲರನ್ನೂ ಕೂಡ ವಿರೋಧ ಮಾಡತಕ್ಕಂಥ ಧೀಮಂತರಿರತಕ್ಕಂಥ ನಾಯಕರು ಒಂದು ಕಾಲದಲ್ಲಿ ಇದ್ದರು. ಈಗ ಅದು ಕಷ್ಟವಾಗುತ್ತದೆ. ನಿಮ್ಮ ಪಕ್ಷದಲ್ಲಿ ಇದ್ದವರನ್ನು ಏತಕ್ಕೆ ಬಿಡುತ್ತೀರಿ. ನಮ್ಮ ಸರ್ಕಾರದವರು ಮಾಡುತ್ತಿದ್ದಾರೆಂದು ಹೇಳುತ್ತೀರಲ್ಲ, ಸರ್ಕಾರದವರು ಅಲ್ಲ. ಆ ಕಡೆ ಈ ಕಡೆ ಕೂಡ ವೆಂಕಟಸ್ವಾಮಿ ಕಮಿಟಿ ವರದಿಯ ಬಗ್ಗೆ ಹೋರಾಟ ನಡೆಸಿದಾಗ ಇದು ಬಹಳ ಅನ್ಯಾಯವೆಂದು ಮನಸ್ಸಿಗೆ ನೋವು ತಿಂದವರು ನಾವು ಇದ್ದೇವೆ ನೀವು ಇದ್ದೀರಿ ಅದಕ್ಕೆ ಪ್ರೋತ್ಸಾಹ ಕೊಟ್ಟಂತವರು ಸಹ ಇಲ್ಲಿಯೂ ಇದ್ದಾರೆ, ಅಲ್ಲಿಯೂ ಇದ್ದಾರೆ. **You should** speak like a stateman and not like a partyman. **You** please accept that there are lot of persons here and also there who backed the agitation and participated in the agitation.

ಶ್ರೀ ಬಿ. ಬಸವಲಿಂಗಪ್ಪ.—ತಾವು ಹೇಳಿದ್ದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಅವರು ಹೇಳಿದ್ದಕ್ಕೆ ಏನು ಕಾರಣ ಎಂದರೆ ಅವರಲ್ಲಿರತಕ್ಕಂಥ ಅಭಿಪ್ರಾಯಕ್ಕೆ ಏನೂ ವ್ಯತ್ಯಾಸವಿಲ್ಲ. ಅವರು ಅಲ್ಲಿ ಹೋಗಿ ಕುಳಿತುಕೊಂಡಿದ್ದಾರೆ. ತಾತ್ಕಾಲಿಕವಾಗಿ ಹೋಗಿ ಅಲ್ಲಿ ಕುಳಿತುಕೊಂಡಿದ್ದಾರೆ. ನಾವು ಏತಕ್ಕೆ ಹೇಳುವುದೆಂದರೆ ವೆಂಕಟಸ್ವಾಮಿ ರಿಪೋರ್ಟನ್ನು ಏತಕ್ಕೆ ವಿರೋಧ ಮಾಡಿದರು ಎನ್ನುವುದು ಪ್ರಶ್ನೆ ಬರುತ್ತದೆ. ಸ್ವಾಮಿ, ನಮ್ಮ ಕರ್ನಾಟಕ ರಾಜ್ಯದಲ್ಲಿ ಮೂರು ಕೋಟಿ ೭೦ ಲಕ್ಷದ ೩೫ ಸಾವಿರ ಜನರು ಇದ್ದಾರೆ. ಸೆನ್ಸಸ್ ಪ್ರಕಾರ. ವೆಂಕಟಸ್ವಾಮಿ ರಿಪೋರ್ಟ್ ಪ್ರಕಾರ ೩೬೦ ಲಕ್ಷ ೨೪ ಸಾವಿರ ಜನ ಹಿಂದುಳಿದ ವರ್ಗದವರು ಸೇರಿರತಕ್ಕಂಥವರು ಅಂದರೆ ಬರೀ ೧೦ ಲಕ್ಷ ಮಾತ್ರ ಈ ಪಟ್ಟಿಯಲ್ಲಿ ಬಿಟ್ಟಿದ್ದಾರೆ. ಆ ಹತ್ತು ಲಕ್ಷ ಬಿಟ್ಟಿರುವವರು ಯಾರು ಎನ್ನುವುದು ಅರ್ಥವಾಗುವುದಿಲ್ಲ. ಅದನ್ನು ಪಟ್ಟಿ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ೧೦ ಲಕ್ಷ ಬಿಟ್ಟರೆ ಎಲ್ಲರೂ ಹಿಂದುಳಿದ ವರ್ಗದವರೇ, ಏತಕ್ಕೆ ಹತ್ತು ಲಕ್ಷ. ಅದನ್ನು ಮಾಫಿ ಮಾಡಿ ತೆಗೆದುಹಾಕಿ ೩೭೦ ಲಕ್ಷ ಜನರನ್ನೂ ಕೂಡ ನೀವು ಹಿಂದುಳಿದ ವರ್ಗದವರೆಂದು ಪರಿಗಣಿಸಿ. ನಿಮ್ಮ ಸರ್ಕಾರ ಪರಿಗಣಿಸಿದರೆ ಬಹಳ ಚೆನ್ನಾಗಿರುತ್ತದೆ. ನನಗಂತೂ ಬಹಳ ಸಂತೋಷ ಹಿಂದುಳಿದವರು, ಮುಂದುವರಿದವರು ಎಂದು ಹೋರಾಟ ಮಾಡಿ ಮಾಡಿ ನಮಗೆ ಇಷ್ಟು ವಯಸ್ಸು ಆಯಿತು. ಜಾತಿ ಹೋಗಬೇಕು, ಜಾತಿರಹಿತ ಸಮಾಜ ಕಟ್ಟಬೇಕು ಎಂದು ಹೇಳಿಕೊಂಡು ನಮಗೆ ವಯಸ್ಸಾಯಿತು.

೪-೦೦ ಪಿ.ಎಂ.

ನಾವು ಅದನ್ನು ಬದಲಾವಣೆ ಮಾಡುವುದಕ್ಕೆ ಇದುವರೆಗೆ ಆಗಿಲ್ಲ. ರಮೇಶ್ ಕುಮಾರ್‌ರವರ ಕೈಯಲ್ಲೂ ಆಗುವುದಿಲ್ಲವೆಂದು ಕಾಣುತ್ತದೆ. ನಮ್ಮ ಜೊತೆ ಬಂದರೆ ಆಗಬಹುದೇನೋ ನೋಡೋಣ. ಎಲ್ಲಾ ರಾಜ್ಯಗಳ ಜನರನ್ನು ಹಿಂದುಳಿದವರು ಎಂದು ಮಾಡಿದರೆ ಉಳಿಯುವವರು ಯಾರು ಎಂಬ ಪ್ರಶ್ನೆ ಬರುತ್ತದೆ. ವೆಂಕಟಸ್ವಾಮಿಯವರ ಆಯೋಗದ ವರದಿಯನ್ನು ಜಾರಿಗೆ ಕೊಡಲಿಲ್ಲ. ಈಗ ಒ. ಚಿನ್ನಪ್ಪ ರೆಡ್ಡಿಯವರನ್ನು ತಾವು ನೇಮಿಸಿದ್ದೀರಿ. ಮೊದಲೇ ಅವರನ್ನು ನೇಮಿಸಿದ್ದರೆ ಚೆನ್ನಾಗಿತ್ತು ನನಗಂತೂ ತುಂಬಾ ಆನಂದವಾಗುತ್ತಿತ್ತು. ಹಿಂದುಳಿದ ವರ್ಗದವರ ಬಗ್ಗೆ ಹಾವನೂರ್ ಕಮೀಷನ್ ನೇಮಕ ಮಾಡುವುದಕ್ಕೆ ನಾನೇ ಕಾರಣ. ದೇವರಾಜ ಅರಸುರವರು ಮುಖ್ಯ ಮಂತ್ರಿಗಳಾಗಿದ್ದರು. ಅದು ಬೇರೆ ಇದೆಲ್ಲವನ್ನು ಜಾರಿಗೆ ಕೊಡಲಿಕ್ಕೆ ನಾನು ಸರ್ವ ಪ್ರಯತ್ನ ಮಾಡಿ ಜಾರಿಗೆ ಕೊಟ್ಟಿದ್ದೇನೆ. ಆದರೆ ಹಿಂದುಳಿದ ವರ್ಗದವರ ಉದ್ಧಾರದ ಬಗ್ಗೆ ನನ್ನಲ್ಲಿರತಕ್ಕ ಹುಮ್ಮಸ್ಸು ಮತ್ತು ಪ್ರೇಮ ಏನಿದೆ ಅದನ್ನು ಯಾರೂ ಅಳತೆ ಮಾಡುವುದಕ್ಕೆ ಸಾಧ್ಯವಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಹಿಂದುಳಿದ ವರ್ಗದವರು ಯಾರು ಎಂದು ಇವತ್ತಿನವರೆಗೂ ಗುರುತಿಸಿಲ್ಲ. ಆ ವರ್ಗದವರಿಗೆ ಉಪಕಾರ ಮಾಡುವುದಕ್ಕೆ ಹೋಗಿಲ್ಲ. ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ, ಯಾವ ಸರ್ಕಾರವೂ ಗುರುತಿಸಲಿಕ್ಕೆ ಹೋಗಿಲ್ಲ. ಕೇಂದ್ರ ಸರ್ಕಾರದವರು ಮಂಡಲ್ ಕಮಿಷನ್ ಎಂದು ಒಂದು ಕಮಿಷನ್ ಅನ್ನು ನೇಮಿಸಿದರು. ಅವರು ಒಂದು ವರದಿ ಕೊಟ್ಟಿದ್ದಾರೆ. ಇವೊತ್ತಿನವರೆಗೆ

ಅದನ್ನು ಜಾರಿಗೆ ಕೊಟ್ಟಿಲ್ಲ. ಈ ದೇಶದಲ್ಲಿರತಕ್ಕ ಹಿಂದುಳಿದ ವರ್ಗದವರು ಜಾರಿಗೆ ಕೊಡಿ ಎಂದು ಕೇಳುತ್ತಿದ್ದರೂ ಅದನ್ನು ಜಾರಿಗೆ ಕೊಟ್ಟಿಲ್ಲ. ನಾನು ಈ ಒಂದು ಪ್ರಶ್ನೆಯನ್ನು ಯಾವ ಸರ್ಕಾರ ಎಂದು ಹೇಳುತ್ತಿಲ್ಲ, ದೇಶದಲ್ಲಿರತಕ್ಕ ಹಿಂದುಳಿದ ವರ್ಗ ಏನಿದೆ ಅಂದರೆ ರಾಜ್ಯಾಂಗದಲ್ಲಿ ನಿರೂಪಣೆಯಾದ ವರ್ಗ ಏನಿದೆ ಅದನ್ನು ಯಾರು ಎಂದು ಗುರುತಿಸದಿದ್ದರೆ ಹೇಗೆ ಮುಂದುವರಿಯುವುದು ಎಂದು ನನ್ನ ಪ್ರಶ್ನೆ. ಯಾವಾಗ ಗುರುತಿಸುವುದು? ಜನತಾ ಪಕ್ಷದವರು ಹೋಗಲಿ, ಕೇಂದ್ರ ಸರ್ಕಾರದವರು ಕೂಡ ಜಾರಿಗೆ ಕೊಟ್ಟಿಲ್ಲ. ಮಂಡಲ್ ಕಮಿಷನ್ ವರದಿಯನ್ನು ಜಾರಿಗೆ ಕೊಡುತ್ತೇವೆಂದು ಹೆಗಡೆಯವರು ಮುಖ್ಯ ಮಂತ್ರಿಗಳಾದ ತಕ್ಷಣ ಹೇಳಿದರು. ಇವತ್ತಿನವರೆಗೆ ಏತಕ್ಕೆ ಕೊಡಲಿಲ್ಲ? ಪಾಲೇಕರ್ ಕಮಿಟಿ ರಿಪೋರ್ಟನ್ನು ಅಸ್ಸಾಮಿನಲ್ಲಿ ಮಾತ್ರ ಜಾರಿಗೆ ಕೊಟ್ಟರು. ಇನ್ನು ಯಾವ ರಾಜ್ಯದಲ್ಲೂ ಕೊಡಲಿಲ್ಲ. ಅದೇ ರೀತಿಯಲ್ಲಿ ಹೆಗಡೆಯವರಿಗೆ ಹಿಂದುಳಿದ ವರ್ಗದವರ ಬಗ್ಗೆ ಅಭಿಮಾನ ಇದ್ದರೆ ಅವರು ಕೂಡ ಮುಂದೆ ಬರಬೇಕು. ಹಿಂದುಳಿದ ವರ್ಗದವರಿಗೆ ಆರ್ಥಿಕ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ಇದ್ದರೆ ಮಂಡಲ್ ಕಮಿಷನ್ ವರದಿಯನ್ನು ಏತಕ್ಕೆ ಜಾರಿಗೆ ಕೊಡಲಿಲ್ಲ?

ಶ್ರೀ ಜಿ. ಬಸವಣ್ಣಪ್ಪ.—ಹಿಂದುಳಿದ ವರ್ಗದವರ ಬಗ್ಗೆ ನಿಮಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನಮ್ಮ ಸರ್ಕಾರಕ್ಕೆ ಮತ್ತು ನಮ್ಮ ನಾಯಕರಿಗೆ ಇದೆ. ಸಂವಿಧಾನಬದ್ಧವಾಗಿ ಹಿಂದುಳಿದ ವರ್ಗದವರನ್ನು ಗುರುತು ಮಾಡಬೇಕೆಂಬ ಉದ್ದೇಶದಿಂದಲೇ ಜ. ಒ. ಚಿನ್ನಪ್ಪ ರೆಡ್ಡಿಯವರ ನೇತೃತ್ವದಲ್ಲಿ ಒನ್ ಮ್ಯಾನ್ ಕಮಿಷನ್ ಅನ್ನು ನೇಮಕ ಮಾಡಿದ್ದೇವೆ. ವೈಜ್ಞಾನಿಕವಾಗಿ, ನಿಜವಾದ ಹಿಂದುಳಿದ ವರ್ಗದವರಿಗೆ ಸಂವಿಧಾನಬದ್ಧವಾಗಿ ರಕ್ಷಣೆ ಕೊಡುವುದರಲ್ಲಿ ನಮ್ಮ ಸರ್ಕಾರ ಹಿಂದುಮುಂದು ನೋಡುವುದಿಲ್ಲ.

ಶ್ರೀ ಬಿ ಬಸವಲಿಂಗಪ್ಪ —ಇದನ್ನು ಹೇಳುವುದಕ್ಕೆ ಎಂದು ನಿಂತರೆ ? ಹಾಗಿದ್ದರೆ ನಾನು ಈಲ್ಡ್ ಆಗುತ್ತಿರಲಿಲ್ಲ ಬರೀ ಕಮಿಷನ್, ಕಮಿಟಿಗಳನ್ನು ಮಾಡಿ ಕಾಲ ಕಳೆಯುತ್ತಿದ್ದೀರಿ ಎಂದರೆ ಚಿನ್ನಪ್ಪ ರೆಡ್ಡಿಯವರ ಕಮಿಷನ್ ಮಾಡಿದ್ದೇವೆಂದು ಹೇಳುತ್ತಿದ್ದೀರಲ್ಲಾ. ಮಾತನಾಡಲಿಕ್ಕೆ ಗೌರವ ಇರಬೇಕು.

ಶ್ರೀ ಜಿ. ಬಸವಣ್ಣಪ್ಪ.—ನಮ್ಮ ಮಾತಿನಲ್ಲಿ ಗೌರವ ಬರಲಿಲ್ಲವೆ ?

ಶ್ರೀ ಬಿ. ಬಸವಲಿಂಗಪ್ಪ.—ಮಾತಿನಲ್ಲಿ ಜವಾಬ್ದಾರಿ ಇರಬೇಕು. ಚಿನ್ನಪ್ಪ ರೆಡ್ಡಿಯವರ ವಿಚಾರದಲ್ಲಿ ಹೇಳುವುದಾದರೆ, ಅವರು ಸುಪ್ರೀಂ ಕೋರ್ಟ್ ಜಡ್ಜ್ ಆಗಿದ್ದರು. ಅವರು ಮಾಡಿರತಕ್ಕ ಕೆಲಸಗಳು, ಕೊಟ್ಟಿರತಕ್ಕ ತೀರ್ಪುಗಳು, ಬಡವರ ಬಗ್ಗೆ ಕನಿಕರದ ಭಾವನೆಗಳು ಇವನ್ನೆಲ್ಲ ನೋಡಿದರೆ ರಾಜ್ಯಾಂಗದ ಎಷ್ಟೊ ಕಲಂಗಳನ್ನು ಬದಲಾವಣೆ ಮಾಡಬೇಕೆಂಬ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ. ಅವರ ಉದ್ಧಾರಕ್ಕೆ ಏನು ಮಾಡಬೇಕೆಂಬುದು ಅವರ ಮನಸ್ಸಿನಲ್ಲಿ ಇದೆ. ಅಂಥ ಮಹಾ ವ್ಯಕ್ತಿಯನ್ನು ನೀವು ನೇಮಿಸಿದ್ದೀರಿ. ಅದಕ್ಕೆ ನನ್ನ ಅಭ್ಯಂತರವಿಲ್ಲ ಪೂರ್ಣ ಬೆಂಬಲ ಇದೆ. ಅವರು ನ್ಯಾಯ ಮಾಡುವುದರಲ್ಲಿ ಸಂಶಯ ಇಲ್ಲ. ಆದರೆ ಒಂದು ವಿಚಾರ ಹೇಳುತ್ತೇನೆ. ಎಷ್ಟು ಕಮಿಷನ್ ಮಾಡಿದ್ದೀರಿ, ಎಷ್ಟು ಕಮಿಟಿ ಮಾಡಿದ್ದೀರಿ ಅವೆಲ್ಲ ರಿಪೋರ್ಟ್‌ಗಳನ್ನು ಜಾರಿಗೆ ಕೊಟ್ಟಿದ್ದೀರಾ ? ನೀವು ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ರಿಪೋರ್ಟನ್ನು ಜಾರಿಗೆ ಕೊಡುತ್ತೀರಾ ? ಜಾರಿಗೆ ಕೊಡುತ್ತೀರೆಂಬ ನಂಬಿಕೆ ಇರಬೇಕಲ್ಲ. ನೀವು ಕೊಡುವುದಿಲ್ಲವೆಂದು ಹೇಳುತ್ತೇನೆ. ಕಾರಣವೇನೆಂದರೆ ೫ ವರ್ಷಗಳಿಂದ ಎಷ್ಟು ವರದಿಗಳು ಬಂದಿವೆ ಅವನ್ನು ಜಾರಿಗೆ ಕೊಟ್ಟಿಲ್ಲ ಆದಮೇಲೆ ಹಿಂದುಳಿದ ವರ್ಗಗಳ ರಿಪೋರ್ಟನ್ನು ಜಾರಿಗೆ ಕೊಟ್ಟಾಗ ಶಹಭಾಶ್‌ಗಿರಿ ಕೊಡುತ್ತೇನೆ. ನೀವಂತೂ ಕೊಡುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮತ್ತೆ ಈಗ ಸ್ಪೆಷಲ್ ಪ್ರೋಗ್ರಾಂಸ್ ಫಾರ್ ಟ್ರೈಬಲ್ ಏರಿಯಾಸ್ ಎಂದು ಕಲಂ ೨೪೪, ೫ನೇ ಷೆಡ್ಯೂಲ್ ಪ್ರಕಾರ ಕೆಲವು ಪ್ರದೇಶಗಳನ್ನು ಸೇರಿಸಿ ಮಾಡಿದ್ದಾರೆ. ಕೆಲವೇ ಪ್ರದೇಶಗಳು ನಮ್ಮ ಮೈಸೂರು ಜಿಲ್ಲೆಯಲ್ಲಿವೆ, ಇನ್ನೆಲ್ಲೂ ಇಲ್ಲ. ಆದರೆ ಈ ವ್ಯವಸ್ಥೆ ಸರಿಯಾಗಿ ಆಗುತ್ತಿಲ್ಲ. ಅವರು ಇರುವುದೇ ಸ್ವಲ್ಪ ಜನ. ಇದನ್ನು ಮಾಡುವುದಕ್ಕೆ ೪೦ ವರ್ಷ ಬೇಕಾ ? ನೀವು ಬಂದಮೇಲೆ ರಾಷ್ಟ್ರಾಧ್ಯಕ್ಷರಿಂದ ನಿರ್ದೇಶಿತವಾದ ಈ ಟ್ರೈಬಲ್ ಏರಿಯಾಸ್ ಸ್ಪೆಷಲ್ ಪ್ರೋಗ್ರಾಂ ಅನ್ನು ಅನುಷ್ಠಾನಕ್ಕೆ ತರುವಲ್ಲಿ ಎಷ್ಟು ಶ್ರಮ ವಹಿಸಿದ್ದೀರಿ ? ದಯಮಾಡಿ ಅದರ ಬಗ್ಗೆ ಗಮನ ಕೊಡಿ.

ಶ್ರೀ ರಾಜವರ್ಧನ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರು ಇಲ್ಲಿ ವರದಿಗಳು ಬಂದರೂ ಅನುಷ್ಠಾನಕ್ಕೆ ತರಲಿಲ್ಲ ಎಂದು ಹೇಳುತ್ತಿದ್ದಾರೆ. ಅವರು ಮಂಡಲ್ ಕಮಿಷನ್ ರಿಪೋರ್ಟ್

ಕೇಂದ್ರ ಸರ್ಕಾರಕ್ಕೆ ಬಂದು ಎಷ್ಟು ವರ್ಷವಾಯಿತು, ಅದನ್ನು ಏತಕ್ಕೆ ಅನುಷ್ಠಾನಕ್ಕೆ ತರಲಿಲ್ಲ ಎಂಬುದನ್ನು ಹೇಳುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಯಾವುದೋ ಭೂಮಿಯಲ್ಲಿದ್ದಾರೆ, ನಾನು ಹೇಳಿದ್ದನ್ನೇ ಅವರೂ ಹೇಳುತ್ತಿದ್ದಾರೆ. ಎಲ್ಲಿದ್ದೀರಿ ಸ್ವಾಮಿ ತಾವು ?

ಅಧ್ಯಕ್ಷರು.—ನಿಮಗೆ ಸಪೋರ್ಟ್ ಆಗಿ ಮಾತನಾಡಿದರು.

ಶ್ರೀ ಬಿ. ಬಸವಲಿಂಗಪ್ಪ.—ಅದನ್ನೇ ಹೇಳಿದ್ದೇನೆ ನಾನು. ಈಗ ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಸಮಾಜ ಕಲ್ಯಾಣ ಇಲಾಖೆ, ನಿಮ್ಮ ವರ್ಗದವರ ಇಲಾಖೆ, ಅಲ್ಪ ಸಂಖ್ಯಾತರ ಇಲಾಖೆ, ಹೆಣ್ಣು ಮಕ್ಕಳು ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇದೆಲ್ಲಾ ಒಂದೇ ಒಂದು ಇಲಾಖೆ, ಸಮಗ್ರವಾಗಿ ಎಲ್ಲರ ಉದ್ಧಾರ ಮಾಡುವುದಕ್ಕೋಸ್ಕರ ಕೇಂದ್ರ ಸರ್ಕಾರದವರು ಯೋಜನೆ ಮಾಡಿದ್ದಾರೆ. ಇಲ್ಲೂ ಮಾಡಿದ್ದೀರಿ. ಇದೆಲ್ಲವನ್ನೂ ಒಟ್ಟುಗೂಡಿಸಿ, ಎಲ್ಲಾ ಅಳವಡಿಸಿಕೊಂಡು ಎಲ್ಲರಿಗೂ ಪ್ರಯೋಜನವಾಗುವ ರೀತಿಯಲ್ಲಿ ಏನು ಮಾಡಬೇಕೆಂಬ ಬಗ್ಗೆ ಯೋಚನೆ ಮಾಡಬೇಕು. Integrated rural Development Programmes and allied programmes of training of rural youth for self employment, TRYSEM and development of women and children in rural areas. ಈ ಪುಸ್ತಕದ ಬಗ್ಗೆ ನಾನು ಸದಸ್ಯನಾಗಿ ಹೇಳುತ್ತಿದ್ದೇನೆ, ಈ ಅಧಿಕಾರಿಗಳೇನಿದ್ದಾರೆ ಇವರು ಈ ಪುಸ್ತಕವನ್ನು ನೋಡೇ ಇಲ್ಲ ಬಹಳ ಜನ, ಸೆಕ್ರೆಟರಿಗಳಲ್ಲಿ ನೋಡಿರತಕ್ಕವರು ಒಬ್ಬರೊಬ್ಬರಿರಬಹುದು. ನಾನು ಅಧಿಕಾರಿಗಳ ಹತ್ತಿರ ಅಲ್ಲಿ ಐ.ಆರ್.ಡಿ.ಪಿ. ಪ್ರೋಗ್ರಾಮಿಗೆ ಸಂಬಂಧಪಟ್ಟ ಪುಸ್ತಕ ತೆಗೆದುಕೊಂಡು ಬನ್ನಿ ಅಂದರೆ ಸೆಕ್ರೆಟೇರಿಯೇಟ್‌ನಲ್ಲಿದೆ ಎಂದು ಹೇಳುತ್ತಾರೆ. ಮೂರು ವರ್ಷಗಳಿಂದ ಅದನ್ನೇ ಹೇಳುತ್ತಿದ್ದಾರೆ. ಡೆಪ್ಯುಟಿ ಕಮೀಷನರ್ ಆದಿಯಾಗಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳೂ ಕೂಡ ಯಾರೂ ಪುಸ್ತಕ ಓದೇ ಇಲ್ಲ. ನಾನು ರೆವಿನ್ಯೂ ಮಂತ್ರಿಯಾಗಿದ್ದಾಗ ಐ.ಎ.ಎಸ್. ಅಧಿಕಾರಿಗಳು, ದಡ್ಡರು, ಓದುವುದಿಲ್ಲ, ಸಂಬಳ ಜಾಸ್ತಿ ಸಿಗುತ್ತದೆ, ಅವರಿಗೆ, ಅವರು ಹೆಂಡತಿ ಹತ್ತಿರ ಮಲಗಿಕೊಂಡು ಕಾಲ ಕಳೆದು ಮಕ್ಕಳು ಹುಟ್ಟಿಸಿ ಸುಖವಾಗಿ ಜೀವನ ಮಾಡುತ್ತಾರೆ ಎಂದು ಹೇಳಿದ್ದೆ. ಪುಸ್ತಕ ತಂದು ಕ್ಲಾಸಸ್ ತೆಗೆದುಕೊಳ್ಳುತ್ತಿದ್ದೆ. ತಾವೂ ಆ ಕೆಲಸ ಮಾಡಿ. ನಾನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಪರೀಕ್ಷೆ ಮಾಡಿದ್ದೇನೆ. ಅಧಿಕಾರಿಗಳಿಗೆ ಐ.ಆರ್.ಡಿ.ಪಿ. ಎಲ್ಲಿದೆ ಹೇಳು ಅಂದರೆ ಹೇಳಿದವರೇ ಇಲ್ಲ. ಎಲ್ಲಾ ತಪ್ಪು ಹೇಳುವವರೇ. ನಮ್ಮ ಬೆಂಗಳೂರು ನಗರ ಜಿಲ್ಲೆಗೆ ಒಬ್ಬರು ಐ.ಎ.ಎಸ್. ಅಧಿಕಾರಿಗಳು ಡೆಪ್ಯುಟಿ ಕಮಿಷನರ್ ಆಗಿದ್ದಾರೆ. ಇನ್ನೂ ಚಿಕ್ಕ ವಯಸ್ಸಿನವರು. ಯಾವ ಅಧಿಕಾರಿ ಇದನ್ನೆಲ್ಲಾ ಜಾರಿಗೆ ಕೊಡಬೇಕೋ ಆ ಅಧಿಕಾರಿಗೆ ಇದು ಗೊತ್ತೇ ಇಲ್ಲ. ಐ.ಆರ್.ಡಿ.ಪಿ. ಅಂದರೆ ಏನು ಎಲ್ಲಿದೆ ಹೇಳಿ ಎಂದರೆ ಅಧಿಕಾರಿಗಳು ಹೇಳುವುದೇ ಇಲ್ಲ. ಈಯಪ್ಪನೂ ಹೇಳುವುದಿಲ್ಲ. ಬೆಂಗಳೂರು ನಗರ ಜಿಲ್ಲೆಯಲ್ಲಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಅಧಿಕಾರಿಗಳು ಇದ್ದಾರಲ್ಲ ಅವರ ಬಗ್ಗೆ ಹೇಳುತ್ತಿದ್ದೇನೆ.

ಅವರಿಗೂ ಐ.ಆರ್.ಡಿ.ಪಿ. ಅಂದರೆ ಗೊತ್ತಿಲ್ಲ ಅದೇ ರೀತಿ ವಿಶೇಷ ಘಟಕ ಯೋಜನೆ ಅಂದರೆ ಗೊತ್ತಿಲ್ಲ. ಯಾವ್ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಹಣವನ್ನು ಈ ಜನರ ಕಲ್ಯಾಣಕ್ಕಾಗಿ ಖರ್ಚು ಮಾಡಲಾಗುತ್ತಿದೆ ಎಂಬುದು ಗೊತ್ತಿಲ್ಲ, ಇಂತಹ ಅಧಿಕಾರಿಗಳನ್ನು ಇಟ್ಟುಕೊಂಡರೆ ಯಾವ ಜನರಿಗೆ ಅನುಕೂಲವಾಗುತ್ತದೆ ? ಮತ್ತೆ ಮಾರ್ಚಿ ತಿಂಗಳಲ್ಲಿ ಹಣವನ್ನು ಬಿಡುಗಡೆ ಮಾಡಿದರೆ ಅವರು ಯಾವಾಗ ಖರ್ಚು ಮಾಡಬೇಕು ? ಮತ್ತೆ ಪ್ರತಿ ತಿಂಗಳು ರಿವ್ಯೂ ಮೀಟಿಂಗ್ ಮಾಡುವುದು ತಮಗೂ ಗೊತ್ತಿದೆ, ನಿಮ್ಮ ಇಲಾಖೆಯ ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರ್ ಕೂಡ ಆ ಮೀಟಿಂಗ್‌ಗೆ ಅಟೆಂಡ್ ಮಾಡುತ್ತಾರೆ ಅವರಿಗೂ ಕೂಡ ವಿಶೇಷ ಘಟಕ ಯೋಜನೆ ಅಂದರೆ ಏನು ಎಂಬುದು ಗೊತ್ತಿಲ್ಲ ಅವರಿಗೆ ಇದರ ಬಗ್ಗೆ ತಿಳುವಳಿಕೆ ಬರುವ ಸಲುವಾಗಿ ಒಂದು ಸ್ಕೂಲನ್ನಾದರೂ ತೆರೆಯಿರಿ ನಿಮ್ಮ ಅಧಿಕಾರಿಗಳಿಗೆ ಈ ಯೋಜನೆಯ ಪೂರ್ಣ ಅರಿವು ಇದ್ದ ಹಾಗೆ ಕಾಣುತ್ತಿಲ್ಲ.

ಶ್ರೀ ಜಿ. ಬಸವಣ್ಣಪ್ಪ.—ಅವರುಗಳನ್ನೆಲ್ಲಾ ಕರೆಸಿ ರಿವ್ಯೂ ಮಾಡುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಿಮಗೆ ಇದು ಗೊತ್ತಿದೆಯೋ ?

SRI G. BASAVANNEPPA.—It is very bad ದುರ್ಬಲ ವರ್ಗದ ಕಲ್ಯಾಣಕ್ಕಾಗಿ ಇರುವಂತಹದ್ದೇ ವಿಶೇಷ ಘಟಕ ಯೋಜನೆ ಮೊದಲು ಇದ್ದಂತಹ ಯೋಜನೆಗಳಲ್ಲಿ ಈ ಜನರ ಕಲ್ಯಾಣಕ್ಕಾಗಿ ಸಕ್ರಿಯವಾದ ಪಾತ್ರ ವಹಿಸಲಿಲ್ಲ. ಆಗ ಕೈಗೊಂಡಂತಹ ಕಾರ್ಯಕ್ರಮಗಳೆಲ್ಲವೂ ಯಶಸ್ವಿಯಾಗಲಿಲ್ಲ. ಇದನ್ನು ಮನಗಂಡ ಕೇಂದ್ರ ಸರ್ಕಾರ ೧೯೮೦-೮೧ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಎಂಬುದನ್ನು ಈ ಜನರ ಕಲ್ಯಾಣಕ್ಕಾಗಿ ಪ್ರತ್ಯೇಕವಾಗಿ ಪ್ರಾರಂಭ ಮಾಡಲಾಯಿತು. ಇದರ ಬಗ್ಗೆ ಬೇಕಾದರೆ ನಿಮಗೇ ಪಾಠ ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ:—ಶ್ರೀಮಾನ್ ಬಸವಣ್ಣಪ್ಪನವರು ನನಗೆ ಪಾಠ ಹೇಳುವುದಾದರೆ, ನಾನು ಅತ್ಯಂತ ಆನಂದದಿಂದ ಕೇಳುವುದಕ್ಕೆ ತಯಾರಿದ್ದೇನೆ.

SRI G. BASAVANNEPPA.—Take it sportively. Because you have challenged me. It is my duty to reply.

ಶ್ರೀ ಬಿ. ಬಸವಲಿಂಗಪ್ಪ.—ಐ.ಆರ್.ಡಿ.ಪಿ. ಯೋಜನೆಯ ಬಗ್ಗೆ ನೀವು ಮಾಡಿರುವಂತಹ ಸಾಧನೆಯ ಬಗ್ಗೆ ಹೇಳಿದ್ದೀರಿ ಆದರೆ ಅದು ಸಾಧನೆಯಾಗುವುದಿಲ್ಲ. ಈ ಕಾರ್ಯಕ್ರಮವನ್ನು ಪ್ರತಿಯೊಂದು ಗ್ರಾಮದ ಮಟ್ಟಿಗೂ ಮಾಡಬೇಕಾಗುತ್ತದೆ ಅದನ್ನು ನಿಮ್ಮ ಕಾರ್ಯಕ್ರಮದಲ್ಲಿ ಅಳವಡಿಸಿಕೊಳ್ಳಬೇಕು ಆ ರೀತಿ ಅಳವಡಿಸಿಕೊಂಡಿದ್ದೇ ಆದರೆ, ನೀವು ಇನ್ನೂ ಹೆಚ್ಚಿನ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುವುದರ ಜೊತೆಗೆ ಹೆಚ್ಚಿನ ಜನರಿಗೆ ಉಪಕಾರ ಮಾಡಿದಂತಾಗುತ್ತದೆ. All these programmes are there, they are printed and published.

ಇನ್ನು ನನ್ನ ತಾಲ್ಲೂಕಿನ ಬಗ್ಗೆ ಹೇಳುವುದಾದರೆ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಎಂಬುದಾಗಿ ಏನು ಇದ್ದಾರೆ, ಆ ಅಧಿಕಾರಿ ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಕೆಲಸ ಮಾಡುವುದೇ ಇಲ್ಲ. ಏನೊಂದು ಕೆಲವರಿಗೆ ಸ್ಕಾಲರ್‌ಷಿಪ್ ಹಣವನ್ನು ಕೊಡುವುದು ಹತ್ತಾರು ಜನರಿಗೆ ಎಮ್ಮೆ, ಎತ್ತು, ಗಾಡಿಗಳನ್ನು ಕೊಡುವುದು ಈ ಕೆಲಸ ಮಾಡಿದ್ದಾರೆ. ಇದನ್ನು ಬಿಟ್ಟರೆ ಇನ್ನುಳಿದ ಕೆಲಸವಾದ ಸಮಗ್ರವಾಗಿ ಈ ಜನರ ಆರ್ಥಿಕ ಪರಿಸ್ಥಿತಿ ಪ್ರಗತಿಯಾಗಬೇಕು, ಅವರ ಸ್ಥಿತಿಗತಿ ಸುಧಾರಣೆ ಮಾಡಬೇಕು. ಎಂಬುದರ ಬಗ್ಗೆ ಯಾವ ಅಧಿಕಾರಿಯೂ ಗಮನಹರಿಸಿ ಕೆಲಸ ಮಾಡುತ್ತಿಲ್ಲ. ಇದು ಬಹಳ ಮುಖ್ಯವಾದುದು. ಈ ಜನರ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಕೊಟ್ಟಿರತಕ್ಕ ಹಣ ಎಲ್ಲ ಇಲಾಖೆಗಳ ಯೋಜನೆಗಳ ಮುಖಾಂತರ ಜಾರಿಗೆ ತರಬೇಕು. ಆ ಎಲ್ಲಾ ಇಲಾಖೆಗಳ ಯೋಜನೆಗಳೂ ತಮ್ಮ ಇಲಾಖೆಗೆ ಸಂಬಂಧಪಟ್ಟಿದೆ. ಎಲ್ಲ ಇಲಾಖೆಯಲ್ಲಿರತಕ್ಕ ಅಭಿವೃದ್ಧಿ ಕಾರ್ಯಕ್ರಮಗಳು ಏನು ಇವೆ, ಅವುಗಳೆಲ್ಲ ತಮ್ಮ ಇಲಾಖೆಗೆ ಸೇರಿರುತ್ತವೆ. ಆದ್ದರಿಂದ ಎಲ್ಲ ಇಲಾಖೆಗಳಲ್ಲಿರತಕ್ಕ ಕೆಲಸಕಾರ್ಯಗಳನ್ನು ತಮ್ಮ ಅಧಿಕಾರಿಗಳು ವಹಿಸಿಕೊಂಡು ಅದನ್ನು ಸಮಗ್ರವಾಗಿ ಕಾರ್ಯಗತ ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕಾಗಿದೆ. ಅವರ ಆರ್ಥಿಕ ವ್ಯವಸ್ಥೆಯ ಬಗ್ಗೆಯಾಗಲಿ, ಅವರ ವಿದ್ಯೆಯ ವ್ಯವಸ್ಥೆಯ ಬಗ್ಗೆಯಾಗಲಿ, ಮತ್ತೆ ಹಳ್ಳಿಗಳಲ್ಲಿ ಇರತಕ್ಕ ಸ್ಯಾನಿಟರಿ ಇಂಪ್ರೂವ್‌ಮೆಂಟ್ ವ್ಯವಸ್ಥೆಯ ಬಗ್ಗೆಯಾಗಲಿ ಸುಧಾರಿಸಿದ್ದೇ ಆದರೆ, ಆಗ ತಾವು ಒಳ್ಳೆಯ ಕೆಲಸ ಮಾಡಿದ್ದೀರಿ ಎಂಬುದು ಅರ್ಥವಾಗುತ್ತದೆ ಆ ರೀತಿ ಕೆಲಸ ಮಾಡಿ ಎಂಬುದು ನನ್ನ ಆಸೆ ನಿಮ್ಮ ಅಧಿಕಾರಿಗಳನ್ನು ಕೇಳದೆ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಂತಹ ದಿಟ್ಟತನ ತಮಗೆ ಇರಬೇಕು. ನಿಮಗೆ ವಿಚಾರಗಳು ಗೊತ್ತಿಲ್ಲ ಅಂತ ಅಲ್ಲ. ಮಂತ್ರಿಯಾದ ಮೇಲೆ ತಕ್ಷಣವೇ ಎಲ್ಲವೂ ಗೊತ್ತಾಗುತ್ತದೆ. ನಾನೂ ಕೂಡ ಹಲವಾರು ವರ್ಷಗಳ ಕಾಲ ಮಂತ್ರಿಯಾಗಿದ್ದೆ. ನಾನೂ ಕೂಡ ಹಾಗೇ ತಿಳಿದುಕೊಂಡಿದ್ದೆ. ಬಹಳ ವಿಷಯ ತಿಳಿದುಕೊಂಡಿದ್ದೇನೆಂದು ಅಂದುಕೊಂಡಿದ್ದೆ. ಆದರೆ ಮಂತ್ರಿಯಾಗಿ ಕೆಲವು ದಿವಸಗಳಾದ ಮೇಲೆ ಏನೂ ಗೊತ್ತಿಲ್ಲ ಅಂತ ಗೊತ್ತಾಯಿತು. ಆಗ ನಾನು ಎಲ್ಲ ಪುಸ್ತಕಗಳನ್ನು ಓದುವುದಕ್ಕೆ ಶುರು ಮಾಡಿದೆ. ಆ ರೀತಿ ಓದಿದಂತಹ ವಿಚಾರಗಳ ಬಗ್ಗೆ ಬೇರೆ ಸಚಿವರ ಜೊತೆಯಲ್ಲಿ ಚರ್ಚೆ ಮಾಡುತ್ತಿದ್ದೆ. ಆ ರೀತಿ ಚರ್ಚೆ ಮಾಡಿದ ನಂತರ ಒಂದು ನಿಲುವು ತೆಗೆದುಕೊಳ್ಳುತ್ತಿದ್ದೆ. ಆದ್ದರಿಂದ ಎಲ್ಲರೂ ಪ್ರಾರಂಭದಲ್ಲೇ ಎಲ್ಲವನ್ನೂ ತಿಳಿದುಕೊಂಡು ಬಂದಿರುವುದಿಲ್ಲ. ಆದ್ದರಿಂದ ನಾನು ತಮಗೆ ಹೇಳುವುದೇನೆಂದರೆ, ಇವೆಲ್ಲಾ ಕಾರ್ಯಕ್ರಮಗಳು ಏನು ಇವೆ, ಅಂದರೆ ಈ ಸಮಾಜದ ಸುಧಾರಣೆಗೋಸ್ಕರ ಹಾಗೂ ಈ ಸಮಾಜದ ಬದಲಾವಣೆಗೋಸ್ಕರ ಎಷ್ಟೆಷ್ಟು ಹಣವನ್ನು ಕೇಂದ್ರ ಸರ್ಕಾರ ಕೊಟ್ಟಿದೆ ಅದೇ ರೀತಿ ರಾಜ್ಯ ಸರ್ಕಾರ ಕೊಟ್ಟಿದೆ ಇವೆಲ್ಲವನ್ನೂ ಅನುಷ್ಠಾನಕ್ಕೆ ತರತಕ್ಕಂತಹವರು ನಿಮ್ಮ ಇಲಾಖೆಯ ಅಧಿಕಾರಿಗಳು. ನೀವೇ ಇದಕ್ಕೆ ಮೂಲ ಪುರುಷರು. ಇದನ್ನು ಮಾಡುವುದಕ್ಕೆ ನಿಮಗೆ ಅಧಿಕಾರ ಇರುವುದರಿಂದ, ಈ

ಎಲ್ಲ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಕ್ತಾಯವಾಯಿತು. ಸೋಮವಾರ ಮಂತ್ರಿಗಳಿಂದ ಉತ್ತರ. ಈಗ ಸಭೆಯು ಎದ್ದು ಸೋಮವಾರ ಬೆಳಿಗ್ಗೆ ೧೦-೦೦ ಗಂಟೆಗೆ ಪುನಃ ಸಮಾವೇಶಗೊಳ್ಳುವುದು.

ಸದನವು ಸಾಯಂಕಾಲ ೪-೧೪ಕ್ಕೆ ಎದ್ದು ದಿನಾಂಕ ೧೩-೬-೧೯೮೮ ರಂದು ಸೋಮವಾರ ಬೆಳಿಗ್ಗೆ ೧೦-೦೦ ಗಂಟೆಗೆ ಪುನಃ ಸಮಾವೇಶಗೊಳ್ಳಲು ತೀರ್ಮಾನಿಸಿತು.